ಐಕ್ಯ ರಂಗ

ಸಂಪುಟ 21 ಸಂಚಿಕೆ 49

ನವಂಬರ್ 30-ಡಿಸೆಂಬರ್ 6, 1998

ರೂ. 2.00

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಕೋಮುವಾದಿಗಳ ಮಹಾಕನಸಿಗೊಂದು ಮಹಾಸೋಲು

ಜಿ.ಎನ್.ನಾಗರಾಜ್

ಕೇವಲ 8-9 ತಿಂಗಳ ಹಿಂದೆ ಏನು ಅಬ್ಬರ! ಏನು ಆರ್ಭಟ!! ಬಿಜೆಪಿಯದು. ಇಡೀ ದೇಶದ ಮಾಧ್ಯಮಗಳು ದೇಶಕ್ಕೆ ಇಂದು ಬಿಜೆಪಿಯೊಂದೇ ದಾರಿ ಅನ್ಯಥಾ ಗತಿರ್ನಾಸ್ತಿ ಎಂದು ಸಾರಿದ್ದೇ ಸಾರಿದ್ದು. ಅಧಿಕಾರಕ್ಕೆ ಬಂದ ನಂತರ ಪ್ರತಿದಿನವೂ ತಮ್ಮ ಮತ ಬೆಂಬಲವನ್ನು ಹೆಚ್ಚಿಸಿಕೊಳ್ಳುವ ಹುನ್ನಾರಗಳು ಆರಂಭವಾದವು.

ಗುಪ್ತ ಅಜೆಂಡಾ

ಆದರೆ ವಿಶ್ವಾಸಮತದ ಮೊದಲ ದಿನ ದಿಂದಲೇ ಬಿಜೆಪಿಯ ಗುಪ್ತ ಅಜೆಂಡಾ ಬಗ್ಗೆ ದೇಶ ವನ್ನು ಎಚ್ಚರಿಸಿದವು ಸಿಪಿಐ(ಎಂ) ಮೊದಲಾದ ಎಡಪಕ್ಷಗಳು. ಕಾಂಗ್ರೆಸ್ ಕೂಡ ಎಚ್ಚರಿಸಿತು.

ಆದರೆ ದಿನದಿಂದ ದಿನಕ್ಕೆ ಬಿಜೆಪಿಯ ಗುಪ್ತ ಅಜೆಂಡಾ ಬಿಚ್ಚಿಕೊಳ್ಳುತ್ತಲೇ ಹೋಯಿತು. ತಮ್ಮ ಸರ್ಕಾರದ ಅಂಗಪಕ್ಷಗಳಿಗೂ ತಿಳಿಯದಂತೆ ಪೋಖ್ರಾನ್‌ನಲ್ಲಿ ಅಣು ಬಾಂಬ್ ಸ್ಫೋಟ ವಾಯಿತು. ಹಿಂದುತ್ವದ ಜೊತೆಗೆ ಯುದ್ಧೋನ್ಮಾದ ಹುಟ್ಟಿಸಿ ಭಾರತದ ಜನರನ್ನು ಮರುಳು ಮಾಡುವ ದುಷ್ಟ ಸಂಚಿಗೆ ಯಶಸ್ಸು ಸಿಗಲಿಲ್ಲ. ಪಾಕಿಸ್ತಾನದ ಅಣುಸ್ಫೋಟಗಳಿಂದ ಜನತೆಯಲ್ಲಿ ಆತಂಕ ಹೆಚ್ಚಾಯಿತು. ದೇಶಾದ್ಯಂತ ಅಣು ಸ್ಫೋಟದ ವಿರುದ್ಧ ವಿಶಾಲ ಪ್ರತಿಭಟನೆ ಜನರನ್ನು ಎಚ್ಚರದಲ್ಲಿಟ್ಟಿತು.

ಮತ್ತೊಂದು ಸ್ಫೋಟ

ಭಾರತದ ಶಿಕ್ಷಣ ಸಚಿವರ ಸಭೆಯಲ್ಲಿ ಮತ್ತೆ ಇದ್ದಕ್ಕಿದ್ದಂತೆ ಸ್ಫೋಟವಾದ ಗುಪ್ತ ಅಜೆಂಡಾ - ಶಿಕ್ಷಣದ ಕೋಮುವಾದೀಕರಣ, ಆರೆಸ್ಸೆಸ್ ನಾಯಕರಿಂದ ಶಾಲೆ, ಕಾಲೇಜುಗಳ ಮೂಲಕ ಕಂದಾಚಾರಿ ಹಿಂದೂಗಳನ್ನು ಅವೈಚಾರಿಕ, ಅವೈಜ್ಞಾನಿಕ ವಿಚಾರಗಳಿಂದ ಕಲುಷಿತರಾದ ಪ್ರಜಾಪ್ರಭುತ್ವವನ್ನು ನಾಶಮಾಡುವ ಫ್ಯಾಸಿಸ್ಟ್ ದಳಗಳ ಸೈನಿಕರನ್ನು ಸಿದ್ಧಮಾಡುವ ಯೋಜನೆಯನ್ನು ದೇಶ ತಿರಸ್ಕರಿಸಿತು. ಪ.ಬಂಗಾಳದ ಶಿಕ್ಷಣ ಮಂತ್ರಿ ಕಾಂತಿ ಬಿಸ್ವಾಸ್‌ರ ನಾಯಕತ್ವದಲ್ಲಿ ಬಿಜಪಿಯೇತರ ರಾಜ್ಯಗಳ ಶಿಕ್ಷಣ ಸಚಿವರೆಲ್ಲರೂ ಬಿಜೆಪಿ ಸಮ್ಮಿಶ್ರ ಸರ್ಕಾರದ ಅಂಗ ಪಕ್ಷಗಳಾದ ತೆಲುಗುದೇಶಂ ಕೂಡ ಸಭೆಯನ್ನು ಬಹಿಷ್ಕರಿಸಿ ಹೊರ ನಡೆದಾಗ ಅವರ ಒಳಸಂಚು ಮುರಿದು ಬಿತ್ತು. ಸರಸ್ವತಿಗೆ ವಂದನೆಗೆ ಮಾಡಿದ ಬಹಿಷ್ಕಾರವನ್ನು ಸರಸ್ವತಿಗೆ ಮಾಡಿದ ಅವಮಾನ ಎಂದು ರಾಮನನ್ನು ಬಳಸಿಕೊಂಡಂತೆ ಸರಸ್ವತಿಯನ್ನು ತಮ್ಮ ಅಧಿಕಾರ ಗದ್ದುಗೆಯ ಮೆಟ್ಟಿಲಾಗಿ ಬಳಸಿಕೊಳ್ಳಲು ಮಾಡಿದ ತಂತ್ರ ಸೋಲುಂಡಿತು. ಅಷ್ಟೇ ಅಲ್ಲ ಈ ಶಿಕ್ಷಣ ನಾಶಕ ಪ್ರಯತ್ನದಿಂದ ಆತಂಕಕ್ಕೊಳಗಾದ ಕೆಲ ಮಾಧ್ಯಮಗಳು ಬಿಜೆಪಿ ಆಳುತ್ತಿರುವ ರಾಜ್ಯಗಳಲ್ಲಿ ಶಿಕ್ಷಣದ ಮೇಲೆ ನಡೆದಿರುವ ಕೋಮುವಾದಿ ಧಾಳಿಯನ್ನು ಬಹಿರಂಗಗೊಳಿಸಿದವು.

ಜನಜೀವನದಲ್ಲಿ ಬಿರುಗಾಳಿ

ಹೀಗೆ ಭಾರತದ ಜನತೆಗೆ ಭಾವೋದ್ರೇಕದ ಮಂಕುಬೂದಿ ಎರಚಿ ಆಡಳಿತ ಮಾಡುವ ಸಂಚು ಒಂದೊಂದಾಗಿ ವಿಫಲವಾಗುತ್ತಾ ಹೋದದ್ದು ಒಂದು ಕಡೆಯಾದರೆ, ಮತ್ತೊಂದು ಕಡೆ ದೇಶದ ಜನತೆಯ ಜೀವನದಲ್ಲಿ ಒಂದು ಬಿರುಗಾಳಿಯೇ ಎದ್ದಿತು - ಬೆಲೆ ಏರಿಕೆಯ, ಉದ್ಯೋಗ ನಾಶದ ಬಿರುಗಾಳಿ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ತೆಗೆದುಕೊಂಡ ಕ್ರಮಗಳು - 340 ವಸ್ತುಗಳ ಮುಕ್ತ ಆಮದು-ರಫ್ತು, ಹಣದುಬ್ಬರ ಹೆಚ್ಚಿಸುವ, ಬೆಲೆ ಏರಿಕೆಯ ಬಜೆಟ್, ಕೆಲವೇ ದಿನಗಳಲ್ಲಿ ತೀವ್ರ ಪರಿಣಾಮ ಬೀರುತ್ತಾ ಎಲ್ಲ ದಿನ ಬಳಕೆಯ ವಸ್ತುಗಳ ಬೆಲೆ ಹೆಚ್ಚಿಸುತ್ತಾ ನಡೆಯಿತು. ರೂಪಾಯಿ ಅಪಮೌಲ್ಯಕ್ಕೆ ನೀಡಿದ ಅವಕಾಶ ಕೈಗಾರಿಕೆಗಳ ಹಾಗೂ ಕೃಷಿ ಉತ್ಪಾದನೆಯಲ್ಲಿ ಕಚ್ಚಾ ಸರಕುಗಳ ಬೆಲೆ ಏರಿಸಿತು. ಉತ್ಪಾದನೆ ಕುಂಠಿತವಾಯಿತು. ಆರ್ಥಿಕತೆ ಮುಗ್ಗರಿಸಿತು.

ವ್ಯಾಪಾರಿ ವರ್ಗಕ್ಕೆ ಕೃತಜ್ಞತೆ

ಇವುಗಳ ಜೊತೆಗೆ ನಾಲ್ಕೈದು ದಶಕಗಳಿಂದಲೂ ಬಿಜೆಪಿ ಹಾಗೂ ಅದರ ಹಿಂದಿನ ರಾಜಕೀಯ ರೂಪಕ್ಕೆ ಬೆಂಬಲ ನೀಡುತ್ತಾ ಬಂದ ವ್ಯಾಪಾರೀವರ್ಗ ಈಗ ದೇಶದಲ್ಲಿ ನಮ್ಮದೇ ರಾಜ್ಯ, ನಮ್ಮನ್ನು ಕೇಳುವರಾರು ಎಂದು ಕಾಳ ಸಂತೆಯ ಕಪ್ಪು ಹಣದ ದಂಧೆಯನ್ನು ಉತ್ತುಂಗಕ್ಕೇರಿಸಿ ದಿನ ಕಳೆಯುವಷ್ಟರಲ್ಲಿ ಕುಬೇರರಾಗುವ ತಂತ್ರಗಳನ್ನು ಹೂಡಿದರು. ಮಾರುಕಟ್ಟೆಯಿಂದ ಸಾಮಗ್ರಿಗಳು ಮಾಯ ವಾದವು. ವಸ್ತುಗಳ ಕೊರತೆ ಕೇವಲ ಶೇ 15 ರಷ್ಟಾದರೆ ಬೆಲೆಏರಿಕೆ ಶೇ 500 ರಷ್ಟು. ವ್ಯಾಪಾರಿ ವರ್ಗದ ಈ ಭಾವನೆಗೆ ಒತ್ತಾಸೆ ನೀಡುವಂತೆ, ವ್ಯಾಪಾರಿ ವರ್ಗಕ್ಕೆ ತಮ್ಮ ಕೃತಜ್ಞತೆ ತೋರಿಸು ವಂತೆ ಅವಶ್ಯಕ ವಸ್ತುಗಳ ನಿಯಂತ್ರಣ ಕಾಯಿದೆ ಯನ್ನು ಸಡಲಿಸುವ ಮಸೂದೆ ತರ ಲೆತ್ನಿಸಿತು. ಭವಿಷ್ಯದ ಮಾರುಕಟ್ಟೆ ಮೊದಲಾದ ದಿನ ಬಳಕೆ ವಸ್ತುಗಳ ಬೆಲೆ ವಿಷಯದಲ್ಲಿ ಜೂಜಾಟವಾಡುವ ಕ್ರಮಗಳಿಗೆ ಅನುಮತಿ ನೀಡಿತು.

ಇಂದು ದೆಹಲಿ, ರಾಜಸ್ತಾನ, ಮಧ್ಯಪ್ರದೇಶದಲ್ಲಿ ಈರುಳ್ಳಿ, ಆಲೂಗಡೆ ಈ ಎಲ್ಲಾ ಬೆಲೆ ಏರಿಕೆ, ಸಾಮಾನ್ಯರ ಜನಜೀವನದಲ್ಲಿ ಎದ್ದ ಬಿರುಗಾಳಿಗೆ ಅವರ ಮನೋಭಾವನೆಗಳಿಗೆ ಸಂಕೇತವಾಯಿತು. ಅದರ ಜೊತೆಗೆ ದೇಶದ ಸಾರ್ವಭೌಮತೆಯನ್ನು ವಿದೇಶಿ ಕಂಪನಿಗಳಿ ಗೊಪ್ಪಿಸುವ ಕೆಲಸಗಳು, ಸಾರ್ವಜನಿಕ ಉದ್ದಿಮೆ ನಾಶ, ವಿಮೆ, ಬ್ಯಾಂಕ್ ಖಾಸಗೀಕರಣ ಕೋಟ್ಯಾಂತರ ದುಡಿಯುವ ಜನರನ್ನು ಆತಂಕಕ್ಕೊಳಪಡಿಸಿದವು. ಒಟ್ಟಿನಲ್ಲಿ ದೇಶದ ಎಲ್ಲಾ ಜನರಲ್ಲಿ ಆತಂಕ ಮೂಡಿಸಿತು.

ಕಾಂ. ಸುರ್ಜಿತ್‌ರವರು ದೂರದರ್ಶನ ಕಾರ್ಯಕ್ರಮವೊಂದರಲ್ಲಿ ಹೇಳಿದಂತೆ "ಕಾಂಗ್ರೆಸ್ ಪಕ್ಷ ತನ್ನ ಜನ ಬೆಂಬಲವನ್ನು ಕಳೆದುಕೊಳ್ಳಲು 45 ವರ್ಷಗಳು ಬೇಕಾದರೆ ಬಿಜೆಪಿಗೆ ಕೇವಲ 8 ತಿಂಗಳು ಸಾಕಾಯಿತು" ಬಿಜೆಪಿಯ ಬಗ್ಗೆ ಅದು ಸೈದ್ಧಾಂತಿಕ ಪಕ್ಷ, ಪ್ರಾಮಾಣಿಕ ಪಕ್ಷ ಎಂದು ತುಂಬಿದ್ದ ಭ್ರಮೆಗಳೆಲ್ಲಾ ನಿರಸನವಾದವು. ಸಮರ್ಥ ಪ್ರಧಾನಿ, ಸ್ಥಿರ ಸರ್ಕಾರದ ಆಕರ್ಷಣೆ ತೂರಿಹೋದವು.

ಬಿಜೆಪಿ ತಾನು ಆಳುತ್ತಿದ್ದ ಎರಡು ರಾಜ್ಯಗಳಲ್ಲಿ ನೆಲಕಚ್ಚಿತು. ಅಲ್ಲಿ ಕಾಂಗ್ರೆಸ್ ಬಗ್ಗೆ ಹಿಂದಿನಿಂದ ಇದ್ದ ಅತೃಪ್ತಿ ಹಾಗೂ ಬಿಜೆಪಿಯ ಕೇಂದ್ರ ಸರ್ಕಾರದ ಬಗ್ಗೆ ಉಂಟಾಗಿರುವ ಅತೃಪ್ತಿಗೂ ಸೆಣಸಾಟ, ಮಧ್ಯ ಪ್ರದೇಶದಲ್ಲಿ ಕಾಂಗ್ರೆಸ್ ರಾಜ್ಯ ಸರ್ಕಾರದ ಮೇಲಿನ ಅತೃಪ್ತಿಗೂ ಬಿಜೆಪಿಯ ಕೇಂದ್ರ ಸರ್ಕಾರದ ಮೇಲಿನ ಅತೃಪ್ತಿಗೂ ಸಮರ. ಈ ಸಮರದಲ್ಲಿ ಜನರಲ್ಲಿ ಅತೃಪ್ತಿ ಮೂಡಿಸುವಲ್ಲಿ ಬಿಜೆಪಿಯ ಕೇಂದ್ರ ಸರ್ಕಾರದ ಸಾಮರ್ಥ್ಯಕ್ಕೆ ಎದುರಿಲ್ಲ ಎಂಬುದು ಸಾಬೀತಾಯಿತು. ಮಧ್ಯಪ್ರದೇಶದಲ್ಲಿ ಅಧಿಕಾರವನ್ನು ಕಳೆದುಕೊಳ್ಳುವ ಭಯದಲ್ಲಿದ್ದ ಕಾಂಗ್ರೆಸ್ ಅಧಿಕಾರ ಉಳಿಸಿಕೊಳ್ಳಲು ವಾಜಪೇಯಿ ಸರ್ಕಾರದ ಕಾಣಿಕೆ ಬಹು ದೊಡ್ಡದು. ರಾಜ್ಯ ಸರ್ಕಾರಗಳ ದುರಾಡಳಿತ ವಿಧಾನಸಭಾ ಚುನಾವಣೆಗಳ ಪ್ರಶ್ನೆಯಾಗುವುದಕ್ಕೆ ಬಿಜೆಪಿ ಬಿಡಲಿಲ್ಲ.

ಬಿಜೆಪಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿದ್ದರೆ ಜನರು ತಮ್ಮಲ್ಲಿಟ್ಟ ವಿಶ್ವಾಸವನ್ನು ಕಳೆದುಕೊಂಡಿರುವುದುನ್ನು ಮನಗಂಡು ಮಾನವಾಗಿ ರಾಜೀನಾಮೆ ನೀಡುವುದೊಂದೇ ದಾರಿ. ಇಲ್ಲದಿದ್ದರೆ ಜನರ ಈ ಅತೃಪ್ತಿ ಹಲವು ರೀತಿಯಲ್ಲಿ ಬಿಜೆಪಿ ಮತ್ತು ಅದರ ಅಂಗಪಕ್ಷಗಳನ್ನು ಕಾಡುತ್ತದೆ. ಈ ಅತೃಪ್ತಿ ಮತ್ತಷ್ಟು ಬೆಳೆದರೆ ಅದು ತೆಗೆದುಕೊಳ್ಳುವ ಪ್ರತಿಕಾರವೂ ಅಷ್ಟೇ ದೊಡ್ಡದಾಗಿರುತ್ತದೆ.

ಅದಕ್ಕೆ ಬದಲಾಗಿ ಪ್ರಧಾನಿ ಹಾಗೂ ಅವರ ಬಾಲಬಡುಕರು ಕೇಂದ್ರ ಸರ್ಕಾರಕ್ಕೇನೂ ತೊಂದರೆಯಿಲ್ಲ. ಈ ಚುನಾವಣೆಗಳು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದಲ್ಲ, ಬಿಜೆಪಿಯೇ ಬಿಜೆಪಿಯನ್ನು ಸೋಲಿಸಿದ್ದು, ಬಿಜೆಪಿ ಸೋಲಿಗೆ ಪತ್ರಿಕೆಗಳು ಕಾರಣ ಎಂದೆಲ್ಲಾ ಸಬೂಬುಗಳಲ್ಲಿ ಮುಳುಗಿದರೆ ಭಾರತದ ಜನತೆ ಈ ಸರ್ಕಾರದ ವಿರುದ್ಧ ಸಿಡಿದೆದ್ದು ನಿಲ್ಲಬೇಕಾಗುತ್ತದೆ. ಆಡಳಿತದಲ್ಲಿ ಬಿಜೆಪಿಯ ಮುಂದುವರಿಕೆಯ ಒಂದೊಂದು ದಿನವೂ ಜನಜೀವನದ ಮೇಲಿನ ಧಾಳಿಯಾಗಿ ಪರಿಣಮಿಸಿದೆ. ಮತ್ತೆ ಜನತೆಯನ್ನು ಭ್ರಮೆಯಲ್ಲಿ ಮುಳುಗಿಸುವ ತಂತ್ರಗಳ ಒಂದು ಸರಮಾಲೆಯೇ ಮುಂದೆ ಮೇಲೆರಗಬಹುದು.

ಅದೇ ರೀತಿಯಲ್ಲಿ ಕಾಂಗ್ರೆಸ್ ಪಕ್ಷ ಈ ಜಯದಿಂದ ಹಿಗ್ಗಿ ತನ್ನ ಹಿಂದಿನ ಸೋಲು ಅದಕ್ಕೆ ಕಾರಣಗಳು ಇವನ್ನೆಲ್ಲಾ ವಿಮರ್ಶಿಸುವುದನ್ನು ಕೈಬಿಟ್ಟು ದೇಶದಲ್ಲಿ ಮತ್ತೆ ತನ್ನ ಏಕಪಕ್ಷವಾಗಿ ಆಡಳಿತ ಮಾಡುವ ಕನಸುಕಾಣಬಹುದು.

ಜನದಾಗುಳ್ಳದ ಹೋರಾಟ

ಈ ಪರಿಸ್ಥಿತಿಯಲ್ಲಿ ತಮ್ಮ ಬದುಕನ್ನು ಮತ್ತಷ್ಟು ಅಸ್ಥಿರಗೊಳಿಸುವ ಕೋಮುವಾದ ಹಾಗೂ ಹೊಸ ಆರ್ಥಿಕ ನೀತಿಗಳಿಂದ ಬಿಡುಗಡೆ ಹೊಂದಲು ಎಡಬಿಡದ ಹೋರಾಟ, ನಿರಂತರ ಎಚ್ಚರವೊಂದೇ ದಾರಿ. ಹೋರಾಟಕ್ಕೆ ಧುಮುಕುವ ಅವಶ್ಯಕತೆ ಈಗ ಮತ್ತಷ್ಟು ಹೆಚ್ಚಾಗಿದೆ.

○

ಬಾಬಾಬುಡನ್ ಗಿರಿಯಲ್ಲಿ ಕೋಮುಭಾವನೆ ಕೆರಳಿಸಲು ಪ್ರಯತ್ನಿಸುವುದರ ವಿರುದ್ಧ ಕ್ರಮ

ಸಿಪಿಐ(ಎಂ) ರಾಜ್ಯ ಸಮಿತಿಯ ಆಗ್ರಹ

ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ ಗಿರಿಯಲ್ಲಿ ದತ್ತಪೀಠವನ್ನು ಮುಕ್ತಗೊಳಿಸುವ ಹೆಸರಿನಲ್ಲಿ ರಥಯಾತ್ರೆ ನಡೆಸಿ ಕೋಮು ಭಾವನೆ ಕೆರಳಿಸಲು ಪ್ರಯತ್ನಿಸುತ್ತಿರುವ ಬಿಜೆಪಿ ಮತ್ತು ಭಜರಂಗದಳದ ಮುಖಂಡರ ಬೇಜವಾಬ್ದಾರಿ ವರ್ತನೆಯನ್ನು ಖಂಡಿಸಿರುವ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಡಿಸೆಂಬರ್ 3 ರಂದು ಸಮಾವೇಶ ನಡೆಸಲು ಅವಕಾಶ ನೀಡಬಾರದು ಹಾಗೂ ಕಾನೂನು ವ್ಯವಸ್ಥೆಯನ್ನು ಕಾಪಾಡಲು ರಥಯಾತ್ರೆಯನ್ನು ನಿಷೇಧಿಸುವುದನ್ನೂ ಸೇರಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ. ನವೆಂಬರ್ 24 ರಂದು ನಡೆದ ರಾಜ್ಯ ಸಮಿತಿ ಸಭೆ ಈ ಕುರಿತು ವಿವರವಾದ ಒಂದು ಗೊತ್ತುವಳಿಯನ್ನು ಅಂಗೀಕರಿಸಿದ್ದು ಅದರ ಪ್ರತಿಯನ್ನು ರಾಜ್ಯ ಮುಖ್ಯಮಂತ್ರಿಯವರಿಗೆ ಕಳಿಸಿದೆ.(ಗೊತ್ತುವಳಿಯ ಪೂರ್ಣಪಾಠವನ್ನು ಪುಟ 3ರಲ್ಲಿ ನೀಡಲಾಗಿದೆ)

ಅತಿವೃಷ್ಟಿ - ಪರಿಹಾರ: ಅತಿವೃಷ್ಟಿಯಿಂದ ಮನೆ, ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡ ಜನರ ಸಹಾಯಕ್ಕೆ ಧಾವಿಸಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ರೈತ, ಕಾರ್ಮಿಕ ಇತ್ಯಾದಿ ಜನವಿಭಾಗಗಳಲ್ಲಿ ಕಳಕಳಿಯಿಂದ ಮನವಿ ಮಾಡಿದೆ. ಹಾಗೂ ಪರಿಹಾರ ಕಾರ್ಯಕ್ರಮಗಳ್ನು ಜಾರಿಮಾಡಲು ಆಡಳಿತ ಯಂತ್ರವನ್ನು ಚುರುಕಗೊಳಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಕರ್ನಾಟಕ ರಾಜ್ಯ, ಅದರಲ್ಲೂ ಗುಲ್ಬರ್ಗ, ರಾಯಚೂರು, ಬಳ್ಳಾರಿ, ಬಿಜಾಪುರ ಮೊದಲಾದ ಜಿಲ್ಲೆಗಳು ಹಿಂದೆಂದೂ ಕಾಣದಷ್ಟು ಅತಿವೃಷ್ಟಿಗೆ ಒಳಗಾಗಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಡಜನರು ನಿರ್ಗತಿಕರಾಗಿದ್ದು ಸಾಧಾರಣ 1.25 ಲಕ್ಷ ಮನೆಗಳು ಬಿದ್ದಿವೆ ಎಂಬ ಅಂದಾಜಿದೆ. ರಾಜ್ಯ ಸರ್ಕಾರವು 1352 ಕೋಟಿ ರೂ. ಪರಿಹಾರ ಧನವನ್ನು ಬಿಡುಗಡೆ ಮಾಡಬೇಕೆಂದು ಕೇಂದ್ರವನ್ನು ಒತ್ತಾಯಿಸಿದೆ. ಕೇಂದ್ರವು ಇದುವರೆಗೆ ಬರೇ 50 ಕೋಟಿ ರೂ. ಮಾತ್ರ ಪರಿಹಾರ ಧನ ನೀಡಿದ್ದು ಅದರಲ್ಲಿ 15 ಕೋಟಿ ರೂ. ಮಾತ್ರ ಗ್ರಾಂಟ್ ರೂಪದಲ್ಲಿ ಬಂದಿದೆ.

ಕೇಂದ್ರವು ಹೆಚ್ಚಿನ ಪರಿಹಾರ ಧನವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದೂ ಮತ್ತು ಎಲ್ಲವನ್ನು ಗ್ರಾಂಟ್ ರೂಪದಲ್ಲಿ ನೀಡಬೇಕೆಂದೂ ಸಿಪಿಐ(ಎಂ) ರಾಜ್ಯ ಸಮಿತಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಇಲ್ಲವಾದಲ್ಲಿ ರಾಜ್ಯದ ಯೋಜನೆಗಳು ಏರುಪೇರಾಗಲಿವೆ ಎಂದು ಅದು ಹೇಳಿದೆ.

ಬೇಸಾಯದಿಂದ ವಂಚಿತರಾದ ರೈತರಿಗೆ ಕೆಲಸಗಳನ್ನು ಒದಗಿಸುವುದು, ಸಣ್ಣ ರೈತರ ಸಾಲವನ್ನು ಮನ್ನಾ ಮಾಡುವುದು ಹಾಗೂ ಇತರೆ ಸಾಲಗಳ ಮೇಲಿನ ಬಡ್ಡಿ ಮನ್ನಾ ಮಾಡುವುದು ಹಾಗೂ ವಿದ್ಯಾಭ್ಯಾಸಗಳಿಗೆ ಶುಲ್ಕ ಮನ್ನಾ ಮಾಡುವ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ ರಾಜ್ಯ ಸರ್ಕಾರವನ್ನು ಸಿಪಿಐ(ಎಂ) ಒತ್ತಾಯಿಸಿದೆ.

ರಾಜ್ಯ ಸರ್ಕಾರವು ಜನ ಪ್ರತಿನಿಧಿಗಳು, ಸಂಘಟನೆಗಳ ಸಹಾಯದೊಂದಿಗೆ ತ್ವರಿತ ಪರಿಹಾರಕ್ಕೆ ಮುಂದಾಗಬೇಕೆಂದೂ ಒತ್ತಾಯಿಸಿರುವ ಸಿಪಿಐ(ಎಂ) ರಾಜ್ಯ ಸಮಿತಿ ಅತಿವೃಷ್ಟಿ ಹಾನಿ ಸಂತ್ರಸ್ತರಿಗೆ ಹತ್ತು ಸಾವಿರ ಆಶ್ರಯ ಮನೆಗಳನ್ನು ನೀಡುವುದು ಸ್ವಾಗತಾರ್ಹ, ಆದರೆ ಇದು ಏನೇನೂ ಸಾಲದು ಎಂದು ಅಭಿಪ್ರಾಯ ಪಟ್ಟಿದೆ.

ಡಿಸೆಂಬರ್ 11 ರ ಮುಷ್ಕರ ಮತ್ತು ಪ್ರತಿಭಟನೆಗೆ ಬೆಂಬಲ: ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಆರ್ಥಿಕ ನೀತಿ ಮತ್ತು ಕೋಮುವಾದದ ವಿರುದ್ಧ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ(ಎನ್.ಪಿ.ಎಂ.ಓ) ನೀಡಿದ ಕರೆಯಂತೆ ಡಿಸೆಂಬರ್ 11 ರಂದು ನಡೆಯಲಿರುವ ಕೈಗಾರಿಕಾ ಮುಷ್ಕರ ಮತ್ತು ಸಾರ್ವತ್ರಿಕ ಪ್ರತಿಭಟನೆಗೆ ಸಿಪಿಐ(ಎಂ) ರಾಜ್ಯಸಮಿತಿ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಕೇಂದ್ರ ಸರ್ಕಾರವು ಅನುಸರಿಸುತ್ತಿರುವ ಜಾಗತೀಕರಣ, ಉದಾರೀಕರಣ ಮತ್ತು ಶ್ರೀಮಂತ ವ್ಯಾಪಾರಸ್ಥರ ಪರನೀತಿಯಿಂದಾಗಿ ಅಗತ್ಯ ವಸ್ತುಗಳ ಬೆಲೆಗಳು ಒಂದೇ ಸಮನೆ ಗಗನಕ್ಕೇರುತ್ತಿದ್ದು ಬಡ, ಮಧ್ಯಮ ವರ್ಗದ ಜನರ ಪರಿಸ್ಥಿತಿ ಶೋಚನೀಯವಾಗಿದೆ. ಇನ್ನೊಂದೆಡೆಯಲ್ಲಿ ಶಿಕ್ಷಣದಲ್ಲೂ ಕೋಮುಭಾವನೆ ತರುವ ಪ್ರಯತ್ನವನ್ನು ಬಿಜೆಪಿ ನೇತೃತ್ವದ ಸರ್ಕಾರ ನಡೆಸುತ್ತಿದೆ.

ಈ ಹಿನ್ನೆಲೆಯಲ್ಲಿ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯು ಡಿಸೆಂಬರ್ 11 ರಂದು ನಡೆಸಲಿರುವ ಮುಷ್ಕರ ಮತ್ತು ಸಾರ್ವತ್ರಿಕ ಪ್ರತಿಭಟನೆಯನ್ನು ಸಂಪೂರ್ಣ ಯಶಸ್ವಿಗೊಳಿಸಬೇಕೆಂದು ಪಕ್ಷದ ಎಲ್ಲಾ ಸಮಿತಿಗಳಿಗೆ ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ.

ನಾಲ್ಕು ಎಡಪಕ್ಷಗಳ ಜಂಟಿ ಕರೆ

ಡಿಸೆಂಬರ್ 6 ರಂದು 'ಕೋಮು ಸೌಹಾರ್ದ ದಿನಾಚರಣೆ'

ನಾಲ್ಕು ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ ಫಾರ್ವರ್ಡ್ ಬ್ಲಾಕ್ ಮತ್ತು ಆರ್.ಎಸ್.ಪಿ. ಡಿಸೆಂಬರ್ 6ನ್ನು ಕೋಮು ಸೌಹಾರ್ದ ದಿನವಾಗಿ ಆಚರಿಸಬೇಕೆಂದು ತಮ್ಮ ಘಟಕಗಳಿಗೆ ಹಾಗೂ ಎಲ್ಲಾ ಜನತೆಗೆ ಕರೆ ನೀಡಿವೆ.

ಡಿಸೆಂಬರ್ 6, 1992 -ಆರ್.ಎಸ್. ಎಸ್. ಕೂಟ ಬಾಬ್ರಿ ಮಸೀದಿಯ ಧ್ವಂಸ ಕಾರ್ಯವನ್ನು ನಡೆಸಿದ ದಿನ. ಬಹಳ ಸಮಯ ದಿಂದ ವಿಹೆಚ್‌ಪಿ, ಆರ್. ಎಸ್.ಎಸ್., ಭಜರಂಗದಳ ಮತ್ತಿತರ ಕಾವಿ ಪಡೆಗಳವರ ಧಾಳಿಗಳಿಗೆ ಮುಸ್ಲಿಮರು ಗುರಿಯಾಗಿದ್ದರು. ಈಗ ಅವರು ಕ್ರಿಶ್ಚಿಯನ್ನರ ಮೇಲೂ ಧಾಳಿ ಆರಂಭಿಸಿದ್ದಾರೆ. ಅಲ್ಪಸಂಖ್ಯಾತರ ವಿರುದ್ಧ ಭಯೋತ್ಪಾದನೆ ಹರಿಯಬಿಡುತ್ತಿದ್ದಾರೆ.

ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಂದಿನಿಂದ ಆರ್.ಎಸ್.ಪಿ. ಮತ್ತು ಅದರ ಅಂಗ ಸಂಸ್ಥೆಗಳು ಬಹಳಷ್ಟು ಆಕ್ರಮಣಕಾರಿ ಯಾಗಿವೆ. ಅಯೋಧ್ಯೆಯಲ್ಲಿ ದೇವಸ್ಥಾನಕ್ಕೆ ಸಿದ್ಧತೆ ಬಿಜೆಪಿ ಸರಕಾರಗಳ ಆಶ್ರಯದಲ್ಲಿ ನಡೆಯುತ್ತಿದೆ. ಕಾಶೀ ದೇವಸ್ಥಾನದ ಪ್ರಶ್ನೆಯನ್ನು ಎತ್ತಿದ್ದಾರೆ. ಇಡೀ ಸನ್ನಿವೇಶ ಕಲುಷಿತಗೊಂಡಿದೆ. ಬಿಜೆಪಿಯ 'ಬಚ್ಚಿಟ್ಟ ಅಜೆಂಡಾ' ಈಗ ಬಯಲಿಗೆ ಬಂದಿದೆ. ಆರ್. ಎಸ್. ಎಸ್. ನ ಕೋಮುವಾದಿ ಅಜೆಂಡಾ ವನ್ನು ಹೇಗಾದರೂ ಜಾರಿಗೆ ತರಲು ಬಿಜೆಪಿ ಹತಾಶ ಪ್ರಯತ್ನ ನಡೆಸಿದೆ. ಇಂತಹ ಸನ್ನಿವೇಶದಲ್ಲಿ ಕೋಮುವಾದದ ವಿರುದ್ಧ, ಆರ್.ಎಸ್.ಎಸ್. ಕೂಟದ ದುಷ್ಟ ತಂತ್ರಗಳ ವಿರುದ್ಧ ಜಾತ್ಯಾತೀತ ಶಕ್ತಿಗಳನ್ನು ಅಣಿನೆರೆಸುವ ಅಗತ್ಯವಿದೆ ಎಂದಿರುವ ನಾಲ್ಕು ಎಡಪಕ್ಷಗಳ ಜಂಟಿ ಹೇಳಿಕೆ ಈ ಕಾರಣಗಳಿಗಾಗಿ ಡಿಸೆಂಬರ್ 6 ರಂದು ದೇಶಾದ್ಯಂತ ಸಭೆ, ಮೆರವಣಿಗೆಗಳು ಹಾಗೂ ಇತರ ಚಟುವಟಿಕೆ ಗಳ ಮೂಲಕ 'ಕೋಮು ಸೌಹಾರ್ದ ದಿನ'ವಾಗಿ ಆಚರಿಸಬೇಕೆಂದು ಕರೆ ನೀಡಿವೆ

(ಐಎನ್‌ಎನ್)

ಡಿಸೆಂಬರ್ 11, 1998

ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಮತ್ತು ಕಾವೀಕರಣದ ವಿರುದ್ಧ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ಮತ್ತು ಪ್ರತಿಭಟನೆ



ಪುಟ 5 - ಕಾಂ.ಸುರಿಯವರೊಡನೆ ಸಂದರ್ಶನ ★ ಶಿಕ್ಷಣರಂಗದಲ್ಲಿ ಕಾವೀಕರಣ ಮತ್ತು ಖಾಸಗೀಕರಣ ★ ಪುಟ 4 ಮತ್ತು 7- ಮೂರನೇ ಜಗತ್ತಿನ ದೇಶಗಳ ಅನುಭವ

ಜನಜಾಗೃತಿ ಜಾಥಾ ಉ.ಕ.ಜಿಲ್ಲೆಯಲ್ಲಿ



.ಜನವಿರೋಧಿ ಆರ್ಥಿಕ ನೀತಿ ಹಾಗೂ ಕೋಮುವಾದದ ವಿರುದ್ಧ ಜನಜಾಗೃತಿ ಮೂಡಿಸಲು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಚರಿಸಿದ ಜಾಥಾ 6 (ಎ) ಕ್ಕೆ ಜಾಥಾ ನಾಯಕರನ್ನೇ ಬೆರಗು ಗೊಳಿಸುವ ರೀತಿಯಲ್ಲಿ ಸ್ವಾಗತ.- ತಮ್ಮನ್ನು ಕಿತ್ತು ತಿನ್ನುತ್ತಿರುವ ಬೆಲೆಏರಿಕೆ ಮುಂತಾದ ಸಮಸ್ಯೆಗಳ ಬಗ್ಗೆ ಒಂದು ಜಾಥಾ ಹೊರಟಿದೆ ಎನ್ನುವ ಸಂತೋಷ ಜನತೆಯಲ್ಲಿತ್ತು, ಹೃದಯ ಸ್ಪರ್ಶಿಯಾಗಿತ್ತು.

ಹಲವಾರು ಸುತ್ತಿನ ಕೋಮುಗಲಭೆಗಳ ಮೂಲಕ ದೇಶದ ಗಮನವನ್ನು ಸೆಳೆದ ಭಟ್ಕಳದಲ್ಲಿ ನವೆಂಬರ್ 8 ರಂದು ಉದ್ಘಾಟನೆ ಗೊಳ್ಳುವ ಮೂಲಕ ಜಾಥಾ ಪ್ರಾರಂಭ. 400 ಕ್ಕೂ ಹೆಚ್ಚು ಹಂಚು ಕಾರ್ಮಿಕರು, ಅಂಗನವಾಡಿ ನೌಕರರು, ಯುವಜನರು ಸಭೆಯಲ್ಲಿ ಭಾಗವಹಿಸಿ ಮೆರವಣಿಗೆಯಲ್ಲಿ ನಗರದ ಹೊರವಲಯ ದವರೆಗೂ ಬಂದು ಬೀಳ್ಕೊಟ್ಟರು. ಸಿಐಟಿಯು ಮುಖಂಡರಾದ ಕೆ. ಶಂಕರ, ಟಿ.ಎಸ್. ನಾಯ್ಕ, ಡಿ.ವೈ.ಎಫ್.ಐ. ನಿಂದ ಶಾಂತರಾಮ ನಾಯಕ್, ವಿಮಾ ನೌಕರರ ಮುಖಂಡ ಸಿ.ಆರ್.ಶಾನಭಾಗ್, ಹಂಚು ಕಾರ್ಮಿಕರ ಮುಖಂಡ ಸುಭಾಷ ಕೊಪ್ಪಿಕರ, ತಿಲಕಗೌಡ ಬಿಜೆಪಿ ಸರಕಾರದ ದಿವಾಳಿಕೋರ ನೀತಿಗಳ ಬಗ್ಗೆ ವಿವರಿಸಿದರು

ಭಟ್ಕಳದಿಂದ ಬೀಳ್ಕೊಂಡ ಜಾಥಾ ಹೊನ್ನಾವರ ತಲುಪುವ ಮಧ್ಯದಲ್ಲಿ ಶಿರಾಲಿ, ಮುರ್ಡೇಶ್ವರ, ಬಸ್ತಿಮಕ್ಕಿಯಲ್ಲಿ ಜನಸಂಪರ್ಕ ಸಭೆಗಳನ್ನು ನಡೆಸಿತು. ಹೊನ್ನಾವರ ಸಭೆಗೆ ಆಗಮಿಸುತ್ತಿದ್ದ ಜಾಥಾವನ್ನು 3 ಕಿ.ಮೀ. ಮೊದಲೇ ಕಾಸರಕೋಡಿನಲ್ಲಿ ಹಂಚುಕಾರ್ಮಿಕರು ಸ್ವಾಗತಿಸಿ ಅಲ್ಲಿಂದ ಟೆಪ್ಪರ್ ಹಾಲ್ ನವರೆಗೆ ಮೆರವಣಿಗೆಯಲ್ಲಿ ಕರೆತಂದರು. ಇವರೊಟ್ಟಿಗೆ ವಿಮಾ ನೌಕರರು, ಎಸ್.ಎಫ್.ಐ. ಕಾರ್ಯಕರ್ತರು, ಸಾರ್ವಜನಿಕರು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದರು. ಕುಮಟಾ ತಲುಪುವ ಮಧ್ಯದಲ್ಲೇ ಹಳದಿಪುರದಲ್ಲಿ ಹಂಚು ಕಾರ್ಮಿಕರಿಂದ ಪಟಾಕಿ ಸಿಡಿಸಿ ಜಾಥಾಕ್ಕೆ ಸ್ವಾಗತ, ಮೆರವಣಿಗೆ. ನಂತರ ರಸ್ತೆ ಬದಿಯಲ್ಲಿ ಮರದ ಕೆಳಗೆ ಜನ ಸಂಪರ್ಕ ಸಭೆ, ಕುಮಟಾ ಬಸ್‌ಸ್ಟಾಂಡ್ ಸಮೀಪ ಸಭೆ ನಡೆಯಿತು. ಸ್ಥಳೀಯ ಬ್ಯಾಂಕು, ಎಲ್ಐಸಿ ಮುಖಂಡರು, ಜಾಥಾ ತಂಡದ ವಿಠ್ಠಲ ಭಂಡಾರಿ, ತಿಲಕಗೌಡ ಮಾತನಾಡಿದರು.

ಅಲ್ಲಿಂದ ಸಾಗಿದ ಜಾಥ ಗೋಕರ್ಣ ಹಾದಿಯಲ್ಲಿಯ ಮಾದನ ಗೇರಿಯಲ್ಲಿ ಸಭೆ ನಡೆಸಿತು. ಆ ದಿನದ ಕೊನೆಗೆ ಅಂಕೋಲಾ ನಗರದಲ್ಲಿ ಸಂಜೆ ಜಾಥಾ ಬಹಿರಂಗ ಸಭೆ ನಡೆಸಿತು. ಅಂಕೊಲಾ ನಗರದಲ್ಲಿ ಹಂಚು ಕಾರ್ಮಿಕರು ಅಂಗನವಾಡಿ ನೌಕರರು ಡಿ.ವೈ.ಎಫ್.ಐ. ಕಾರ್ಯಕರ್ತರಿಂದ ಮೆರವಣಿಗೆ ನಡೆಸಿ ಜಾಥಾವನ್ನು ಸ್ವಾಗತಿಸಿದರು. ಝುಂಡಾಕಟ್ಟೆಯಲ್ಲಿ ನಡೆಸಿದ ಸಭೆಯಲ್ಲಿ ಜಾಥಾ ಕಾರ್ಯಕ್ರಮದ ವಿಶೇಷತೆ ಬಗ್ಗೆ ಭಾಷಣಕಾರರು ವಿವರವಾಗಿ ತಿಳಿಸಿದರು.

2ನೇ ದಿನದ ಜಾಥಾದ ತಿರುಗಾಟ ಕಾರವಾರದಲ್ಲಿ ಬಹಿರಂಗ ಸಭೆ ನಡೆಸುವ ಮೂಲಕ ಪ್ರಾರಂಭವಾಯಿತು. ಜಾಥಾದ ನಾಯಕತ್ವ ವಹಿಸಿದ್ದ ಡಿ.ವೈ.ಎಫ್.ಐ. ರಾಜ್ಯ ಅಧ್ಯಕ್ಷ ಶಾಂತಾರಾಮ ನಾಯಕ, ಸಿ.ಐ.ಟಿ.ಯು ಜಿಲ್ಲಾ ಕಾರ್ಯದರ್ಶಿ ಟಿ.ಎಸ್. ನಾಯ್ಕ ಜೊತೆಗೆ ಎ.ಐ.ಬಿ.ಇ.ಎ. ಯ ವಿನೋದ ಮೈತ್ರಿ, ಎಸ್.ಎಫ್.ಐ. ನ ಯಮುನಾ ಗಾಂವಕರ್, ಎ.ಐ.ಐ.ಇ.ಎ. ಯ ಸುರೇಂದ್ರ ಗಾಂವ್ಕರ, ಬಿ.ಇ.ಇ.ಐ.ಯ ಶಂಭುಶೆಟ್ಟಿ, ಪ್ರಾಂತ ರೈತ ಸಂಘದ ಜಿ.ಎಲ್. ನಾಯ್ಕ ಮಾತನಾಡಿದರು. ಅಲ್ಲಿಂದ ಬೀಳ್ಕೊಂಡ ಜಾಥಾಕ್ಕೆ ಅಗಸೂರಿ ನಲ್ಲಿ ಹಂಚುಕಾರ್ಮಿಕರು ಸ್ವಾಗತ ನೀಡಿ ಊರಲ್ಲಿ ಮೆರವಣಿಗೆ ನಡೆಸಿ ಸಭೆ ನಡೆಸ ಲಾಯಿತು. ಯಲ್ಲಾಪುರದಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ವಿ.ವಿ. ಕಾಲೇಜು ಶಿಕ್ಷಕ ಸಂಘದ ಎಲ್.ಆರ್. ಅಂಗಡಿ, ಕೆ.ಎಸ್.ಆರ್.ಟಿ.ಸಿ.ಯಿಂದ ಗಣಪತಿ ನಿಲೇಕಣಿ ಹಾಗೂ ಜಾಥಾದ ಮುಖಂಡರು ಮಾತನಾಡಿದರು. ಅಂಗನವಾಡಿ ನೌಕರರ ಸಂಘದ ಲಕ್ಷ್ಮಿಭಟ್ ಸ್ವಾಗತಿಸಿದರು. ಮುಂಡ ಗೋಡನಲ್ಲಿ ಎಸ್.ಎಫ್.ಐ. ಕಾರ್ಯಕರ್ತ ರಿಂದ ಜಾಥಾಕ್ಕೆ ಸ್ವಾಗತ. ನಂತರ ಜಾಥಾ ಸಿದ್ದಾಪುರ ಬಸ್‌ಸ್ಟಾಂಡ್ ಹತ್ತಿರ ಸಭೆ ನಡೆಸಿತು. 2ನೇ ದಿನದ ಕೊನೆಗೆ ಶಿರಸಿಯಲ್ಲಿ ಸಂಜೆ ಬಹಿರಂಗ ಸಭೆ ನಡೆಯಿತು. ಮಳೆಯ ಮಧ್ಯೆಯೇ ಜಾಥಾ ಬರಲು ಗಂಟೆ ವಿಳಂಬ ವಾದರು ನೂರಾರು ಜನಕಾಯುತ್ತಿದ್ದರು. ವಿಮ, ಅಂಚೆ, ಕೆ.ಇ.ಬಿ. ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ವಿಶೇಷವೆಂದರೆ ಆದಿನ ಬೆಳಗ್ಗಿನಿಂದ ಜಾಥಾ ಆಗಮಹಿಸುತ್ತಿರುವ ಕುರಿತು ಅಟೋ ಪ್ರಚಾರ ನಡೆಸಲಾಗಿತ್ತು.

3ನೇ ದಿನದ ಜಾಥಾ ಕಾರ್ಯಕ್ರಮ ಕೆ.ಪಿ.ಸಿ ನೌಕರರ ವಸತಿ ಗೃಹ ಗಳಿರುವ ಅಂಬಿಕಾನಗರ ದಿಂದ ಪ್ರಾರಂಭ ವಾಯಿತು. ವ್ಯಾಪಕ ಕರಪತ್ರ ವಿತರಣೆ, ಬೀದಿ ಬದಿ ಸಭೆ ನಡೆಸ ಲಾಯಿತು. ಜಿಲ್ಲೆಯಲ್ಲಿಯ ಕಾರ್ಮಿಕ ನಗರ ದಾಂಡೇಲಿ ಯಲ್ಲಿ ಜಾಥಾಕ್ಕೆ ಪೇಪರ್ ಮಿಲ್ ಸಂಗಾತಿಗಳಿಂದ ಸ್ವಾಗತ, ಬಸ್ ನಿಲ್ದಾಣದ ಪಕ್ಕದಲ್ಲಿ ಬಹಿರಂಗ. ಇಲ್ಲಿಯೂ ಸಹ ಜಾಥಾ ಬರುತ್ತಿರುವ ಬಗ್ಗೆ, ಬೇಡಿಕೆಗಳ ಬಗ್ಗೆ ವ್ಯಾಪಕ ಅಟೋ ಪ್ರಚಾರ ನಡೆಸಲಾಗಿತ್ತು. ನಂತರ ಇನ್ನೊಂದು ಕೆ.ಸಿ.ಪಿ ಕಾಲೋನಿ ಗಣೇಶ ಗುಡಿ ಯಲ್ಲಿ ಸಭೆ ನಡೆಸ ಲಾಯಿತು. ನಂತರ ಹಳಿಯಾಳದಲ್ಲಿ ನಗರದ ಬೀದಿಗಳಲ್ಲಿ ಸಂಚರಿಸಿದ ಜಾಥಾ ಪ್ರಚಾರಾಂದೋಲನ ಕಾರ್ಯಕ್ರಮ ನಡೆಸಿತು.

ಜಾಥಾದ ಕೊನೆಯ ಕಾರ್ಯಕ್ರಮವಾಗಿ ಹುಬ್ಬಳ್ಳಿಯಲ್ಲಿ ಪ್ರಾದೇಶಿಕ ಜಾಥಾಗಳ ಮುಕ್ತಾಯ ಸಮಾರಂಭ ನಡೆಯಿತು.

ಜಾಥಾದ ಪ್ರಾರಂಭದಿಂದ ಜಾಥಾ ತಂಡದ ಜತೆ ಇದ್ದ ಅಂಗನವಾಡಿ ನೌಕರರ ಸಂಘದ ಮುಖಂಡರಾದ ಗೀತಾನಾಯ್ಕ, ಶಕುಂತಲಾ ಶೆಟ್ಟಿ, ನಾಗರತ್ನಾ ಪಡಿಯಾರ ಮುಂತಾದವರು ಹೋರಾಟದ ಹಾಡು ಗಳನ್ನು ಹಾಡಿ ಸಭೆಗಳತ್ತ ಜನರ ಗಮನ ಸೆಳೆಯಲು ವಿಶೇಷ ನೆರವಾದರು. ಜಾಥಾದ ಯಶಸ್ವಿಗೆ ಜಿಲ್ಲೆಯ ಹಂಚು ಕಾರ್ಮಿಕರ ಭಾಗವಹಿಸುವಿಕೆ ಹೆಚ್ಚಿನದಾಗಿತ್ತು.

6 ನೇ ಜಾಥಾದ ಈ ಪ್ರಾದೇಶಿಕ ಉಪಜಾಥಾ ಒಟ್ಟು 1000 ಕಿ.ಮಿ. ಗೂ ಮೀರಿದ ದೂರವನ್ನು ಕ್ರಮಿಸಿ 20-22 ಜನಸಂಪರ್ಕ ಸಭೆಗಳನ್ನು ನಡೆಸಿತು. ವ್ಯಾಪಕವಾಗಿ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ಚಳುವಳಿಯ ಬೇಡಿಕೆಗಳ ಕುರಿತು ಕರಪತ್ರಗಳನ್ನು ವಿತರಣೆ ಮಾಡಿ ಸಾವಿರಾರು ಸಾರ್ವಜನಿಕರಿಗೆ ಬೆಲೆ ಏರಿಕೆ, ಆರ್ಥಿಕನೀತಿ ಕೋಮುವಾದಗಳ ದುಷ್ಪರಿಣಾಮಗಳ ಕುರಿತು ಎಚ್ಚರಿಸಲು ಜಾಥಾ ತಂಡಕ್ಕೆ ಸಾಧ್ಯವಾಯಿತು. ಜನತೆಯ ಸ್ಪಂದನ ಜಾಥಾ ತಂಡಕ್ಕೆ ಹೊಸ ಸ್ಫೂರ್ತಿ ನೀಡಿತು.

ತೀರ್ಥಹಳ್ಳಿಯಲ್ಲಿ ಪ್ರಚಾರ ಜಾಥಾ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಆಶ್ರಯದಲ್ಲಿ ನಡೆದ ಪ್ರಚಾರ ಜಾಥಾ ಸಂದರ್ಭದಲ್ಲಿ ನವೆಂಬರ್ 10 ರಂದು ತೀರ್ಥಹಳ್ಳಿಯಲ್ಲಿ ಸಾರ್ವಜನಿಕ ಸಭೆ ನಡೆಯಿತು ವೇದಿಕೆಯ ತೀರ್ಥಹಳ್ಳಿ ಘಟಕದ ಸಂಚಾಲಕರಾದ ರಾಘವೇಂದ್ರ ರಾವ್ ಸ್ವಾಗತಿಸಿದರು ಭದ್ರವತಿ ಉಕ್ಕೂ ಕಾರ್ಮಿಕರ ಮುಖಂಡ ಕಾ|| ರಂಗೇಗೌಡರು, ಸಿಐಟಿಯು ಮುಖಂಡ ಶಿವಶಂಕರ್, ಕಾ|| ಮಾಯಣ್ಣ ಮಾತನಾಡಿದರು. ಈ ಜಾಥಾದ ಸಂಚಾಲಕರೂ ಎಲ್.ಐ.ಸಿ. ನೌಕರರ ಮುಖಂಡರೂ ಆದ ಕೆ.ಲಕ್ಷ್ಮಿನಾರಾಯಣ್ ರಾವ್ ಮಾತನಾಡುತ್ತಾ ವಾಣಿಜ್ಯ ರಂಗವನ್ನು ಖಾಸಗಿಯವರಿಗೆ ವಿದೇಶೀಯವರಿಗೆ ತೆರೆಯುವುದು ನಮ್ಮ ಗೋರಿಯನ್ನು ನಾವೇ ತೋಡಿಕೊಂಡಂತಲ್ಲವೇ ಎಂದು ಪ್ರಶ್ನಿಸಿದರು. ಸ್ಥಳೀಯ ಮುಖಂಡ ಎಂ.ಕೆ. ರಮೇಶ್ ರಾಷ್ಟ್ರೀಯ ವೇದಿಕೆಯ ಹೋರಾಟವನ್ನು ಬೆಂಬಲಿಸುತ್ತಾ ವಿಮಾ ಖಾಸಗೀ ಕರಣದ ಪ್ರಯತ್ನ ಜನ ವಿರೋಧಿ ಕ್ರಮ ಎಂದರು.

ಹುಬ್ಬಳ್ಳಿಯಲ್ಲಿ ಮುಕ್ತಾಯ ಸಮಾರಂಭ

10.11.98 ರಂದು ಸಂಜೆ ಹುಬ್ಬಳ್ಳಿ ನಗರದಲ್ಲಿ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಧಾರವಾಡ, ಹಾವೇರಿ, ಗದಗ, ಉ.ಕನ್ನಡ ಮತ್ತು ಬೆಳಗಾಂ ಜಿಲ್ಲಾ ಘಟಕಗಳ ಆಶ್ರಯದಲ್ಲಿ ನವೆಂಬರ್ 8,9 ಮತ್ತು 10 ರಂದು ಜೀಪ್ ಪ್ರಚಾರ ಜಾಥಾಗಳ ಸಮಾಗಮ ನಡೆಯಿತು. ನಗರದಲ್ಲಿ ಮೂರು ಸಾವಿರ ಮಠದ ಸ್ವಾಮಿಗಳ ಆಸ್ತಿ ಅಂತಸ್ತುಗಳಿಗಾಗಿ ನಡೆಯುತ್ತಿದ್ದ ಬಹಿರಂಗ ಕಚ್ಚಾಟಗಳಿಂದಾಗಿ ಕಲಂ 144 ವಿಧಿಸಲಾಗಿದ್ದರೂ ಆದಿನ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಸಲು ಪೋಲೀಸರ ವಿಶೇಷ ಅನುಮತಿಯನ್ನು ಪಡೆಯಲು ಸಾಧ್ಯ ವಾಯಿತು. ಪ್ರಚಾರ ಜಾಥಾಗಳಲ್ಲಿ ಪಾಲುಗೊಂಡ ನೂರಾರು ರೈತರು, ಕೃಷಿಕೂಲಿಕಾರರು, ಕಾರ್ಮಿಕರು, ವಿದ್ಯಾರ್ಥಿ ಯುವಜನರು, ಮಹಿಳೆಯರು, ರೈಲ್ವೆ ಸ್ಟೇಶನ್‌ನಿಂದ ಇಂದಿರಾಗಾಂಧಿ ಗಾಜಿನ ಮನೆಗೆ ಒಂದು ಗಂಟೆಯ ಕಾಲ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಮುಗಿಲು ಮುಟ್ಟುವಂತಹ ಘೋಷಣೆಗಳನ್ನು ಹಾಕುತ್ತಾ ಮೆರವಣಿಗೆಯಲ್ಲಿ ಸಾಗಿದರು. ಮೆರವಣಿಗೆಯಲ್ಲಿ ಶೃಂಗರಿಸಿದ ಜೀಪುಗಳು, ಆಕರ್ಷಕ ಬ್ಯಾನರುಗಳು ಉತ್ಸಾಹ ತುಂಬಿದ್ದವು. ನಗರದಲ್ಲಿ ಆಗಾಗ ಹತ್ತು ಹಲವು ಕ್ಷುಲ್ಲಕ ವಿಷಯಗಳ ಕುರಿತು ಮೆರವಣಿಗೆಗಳು, ಕೆಲವೊಮ್ಮೆ ಹಿಂಸಾತ್ಮಕವಾಗಿ ನಡೆಯುತ್ತಲೇ ಇವೆ. ಆದರೆ, ಜನಸಾಮಾನ್ಯರ ದೈನಂದಿನ ಬದುಕಿಗೆ ಸಂಬಂಧಿಸಿದ ಬೆಲೆ ಏರಿಕೆ ಮತ್ತು ಕೋಮುವಾದದ ವಿರುದ್ಧ ಈ ಮೆರವಣಿಗೆ ತುಂಬಾ ಅರ್ಥಪೂರ್ಣವಾಗಿತ್ತು.

ನಂತರ ಇಂದಿರಾಗಾಂಧಿ ಗಾಜಿನ ಮನೆಯಲ್ಲಿ ನಡೆದ ಪ್ರಚಾರ ಜಾಥಾಗಳ ಮುಕ್ತಾಯ ಸಮಾರಂಭದಲ್ಲಿ ಸಿಐಟಿಯು ವಿನ ರಾಜ್ಯಾಧ್ಯಕ್ಷರಾದ ಕಾಂ. ಎಸ್.ಸೂರ್ಯನಾರಾಯಣ ರಾವ್ ಮುಖ್ಯ ಅತಿಥಿಯಾಗಿ ಮಾತನಾಡಿದರು. ಬಿಜೆಪಿ-ಆರ್‌ಎಸ್‌ಎಸ್ ಲಾಭಬಡುಕ ವ್ಯಾಪಾರಸ್ಥರ-ಬನಿಯಾಗಳ ಸಂಘಟನೆ ಎಂದು ಟೀಕಿಸಿ, ಬೆಲೆ ಏರಿಕೆಗೆ ಅವರೇ ಕಾರಣರೆಂದ ಕಾಂ. ಸೂರಿಯವರು ಕೋಮುವಾದಿಗಳು ಅಲ್ಪ ಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್ನರ ಮೇಲೆ ನಡೆಸುತ್ತಿರುವ ದೌರ್ಜನ್ಯವನ್ನು ಕಟುವಾಗಿ ಖಂಡಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಬೆಳಗಾಂ ಜಾಥಾ ತಂಡದ ಸಂಚಾಲಕರಾದ ಎಐಟಿಯುಸಿ ಯ ಧುರೀಣರಾದ ಕಾಂ. ಎ.ಆರ್.ವಿಜಯ ಕುಮಾರ್ ವಹಿಸಿದ್ದರು. ಧಾರವಾಡ ಜಾಥಾ ತಂಡದ ಸಂಚಾಲಕರಾದ ಸಿಐಟಿಯು ಮುಖಂಡರಾದ ಕಾಂ. ನಿತ್ಯಾನಂದ ಸ್ವಾಮಿ, ಉ.ಕನ್ನಡ ಜಾಥಾದ ಸಂಚಾಲಕರೂ, ಸಿಐಟಿಯುವಿನ ಧುರೀಣರಾದ ಕಾ. ಟಿ.ಎಸ್.ನಾಯಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾಂ.ಶಾಂತರಾಮ ನಾಯಕ, ಕಾಂ. ಕುಮಾರಿ ಯಮುನಾ ಗಾಂವಕರ್, ಕಾಂ. ಪದ್ಮನಾಭನ್ ವಿವಿಧ ಸಂಘಟನೆಗಳ ಪರವಾಗಿ ಮಾತನಾಡಿದರು. ಕಾಂ. ಸಿ.ಆರ್.ಭಟ್ ಸ್ವಾಗತಿಸಿದರು. ಕಾಂ. ಆರ್.ಎಚ್.ಆಯಿ ವಂದಿಸಿದರು. ಕೊನೆಯಲ್ಲಿ . ಸಮುದಾಯದ ಜೀವನಮೂರ್ತಿ ರಚಿತ ಹಾಗೂ ನಿರ್ದೇಶಿತ 'ರೈತರ ದೇಶ' ಎಂಬ ಬೀದಿ ನಾಟಕ ಪ್ರದರ್ಶಿಸಲಾಯಿತು. ಧಾರವಾಡ, ಹಾವೇರಿ ಜಿಲ್ಲಾ ಜಾಥಾ ಕಲಾವಿದರ ತಂಡದ ನಾಯಕರಾದ ಸಮುದಾಯದ ಕಾರ್ಯದರ್ಶಿ ಬಿ.ಐ.ಈಳಿಗೇರ ಜಾಥಾದ ದಿನಗಳಲ್ಲಿ ತಂಡ ಬೀದಿ ಸಂಗ್ರಹದ ಮೂಲಕ ಗಳಿಸಿದ ರೂ. 714 ಕಾ. ಸೂರ್ಯನಾರಾಯಣ ರಾವ್ ಮೂಲಕ ಕಾ. ನಿತ್ಯಾನಂದ ಸ್ವಾಮಿಗೆ ಒಪ್ಪಿಸಿದರು. ಈ ಜಾಥಾ ತಂಡ ನಿತ್ಯಾನಂದ ಸ್ವಾಮಿಯವರ ನೇತೃತ್ವದಲ್ಲಿ ಧಾರವಾಡ ಮತ್ತು ಹಾವೇರಿ ಜಿಲ್ಲೆಗಳ ಸುಮಾರು 45 ಹಳ್ಳಿ ಪ್ರದೇಶಗಳಲ್ಲಿ ಸಂಚರಿಸಿ, ಸಭೆ, ಸಮಾವೇಶ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿ ಅಂದಾಜು ಐದುಸಾವಿರ ಜನರಿಗೆ ನೇರವಾಗಿ ಐಕ್ಯ ಹೋರಾಟದ ಕುರಿತಾದ ಜಾಥಾದ ಸಂದೇಶವನ್ನು ಮುಟ್ಟಿಸಿತು.

ದಿ. 7.11.98 ರಂದು ಸಂಜೆ ಧಾರವಾಡದ ವಿದ್ಯಾವರ್ಧಕ ಸಂಘದ ಆವರಣದಲ್ಲಿ ಜಾಥಾದ ಉದ್ಘಾಟನಾ ಸಮಾರಂಭ ಕಾ. ಸಿ.ಆರ್.ಭಟ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಮತ್ತು ಪ್ರಸಿದ್ಧ ನ್ಯಾಯವಾದಿ ಜಿ.ಟಿ.ಪದಕಿ ಜಾಥಾ ಉದ್ಘಾಟನೆ ಮಾಡಿದರು. ಕಾಂ. ಆರ್.ಎಚ್.ಆಯಿ ಸ್ವಾಗತಿಸಿದರು. ಕಾ. ಎಂ.ಬಿ.ಕಟ್ಟಿ ವಂದಿಸಿದರು.

ವಿಜಾಪುರ ಜಾಥಾ

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ವಿಜಾಪುರ ಜಿಲ್ಲೆಯಾದ್ಯಂತ ಸಂಚರಿಸಿದ ಜೀಪು ಜಾಥಾವನ್ನು ಹುತಾತ್ಮ ಚೌಕ ದಲ್ಲಿ ಜೀವವಿಮಾನೌಕರರ ಸಂಘದ ಮುಖಂಡ ಎಸ್.ಎಚ್. ನದಾಫ್ ಉದ್ಘಾಟಿಸಿದರು.

ಉದಾರೀಕರಣ, ಬೆಲೆಏರಿಕೆ, ಮಳೆಯಿಂದ ಬೆಳೆಗಾದ ಹಾನಿಗೆ ಪರಿಹಾರ ಹಾಗೂ ಕೋಮುವಾದದ ವಿರುದ್ಧ ಜಾಗೃತಿ ಉಂಟು ಮಾಡಿ ಜನರನ್ನು ಹೋರಾಟಕ್ಕೆ ಅಣಿಗೊಳಿಸಲು ಈ ಜಾಥಾ ಹಮ್ಮಿಕೊಳ್ಳಲಾಗಿತ್ತು. ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ವಿ.ಎಂ. ಕಾಳೆ, ಹಿರಿಯ ಕಮ್ಯುನಿಸ್ಟ್ ಧುರೀಣ ಎನ್.ಕೆ. ಉಪಾಧ್ಯಾಯ, ಮನ್ನೂಸಾಬ ಕಲಾದಗಿ, ಸುರೇಖಾ ರಜಪೂತ, ಎಲ್.ಐ.ಸಿ.ಯ ಕುಲಕರ್ಣಿ ಮತ್ತು ರೈತ ಮುಖಂಡ ಭೀಮಸಿ ಕಲಾದಗಿ ಅವರು ಮಾತನಾಡಿ ಕೇಂದ್ರ ಸರಕಾರದ ಉದಾರೀಕರಣ ನೀತಿಯಿಂದ ಜೀವನಾವಶ್ಯಕ ವಸ್ತುಗಳ ಬೆಲೆ ಹೆಚ್ಚುತ್ತಿರುವದನ್ನು ಖಂಡಿಸಿದರು.

ಸರಕಾರದ ಖಾಸಗೀಕರಣ ನೀತಿಯಿಂದಾಗಿ ಕಾರ್ಖಾನೆಗಳು ಮುಚ್ಚಲ್ಪಡುತ್ತಿರುವದನ್ನು ವಿದೇಶಿ ಬಂಡವಾಳ ಆಕ್ರಮಣ ನಡೆಸುತ್ತಿರುವದನ್ನು, ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳುತ್ತಿರು ವದನ್ನು ಕಟುವಾಗಿ ಟೀಕಿಸಲಾಯಿತು.

ನಿರಂತರ ಮಳೆಯಿಂದಾಗಿ ರೈತರಿಗಾದ ಹಾನಿಯನ್ನು ತುಂಬಿಕೊಡಬೇಕೆಂದು ಒತ್ತಾಯಿಸಲಾಯಿತು. ನಂತರ ಭೀಮಸಿ ಕಲಾದಗಿ, ಸುರೇಖಾ ರಜಪೂತ ಅವರನ್ನೊಳಗೊಂಡ ಜೀಪು ಜಾಥಾ ವಿಜಾಪುರ ತಾಲೂಕಿನಲ್ಲಿ ಜನ ಜಾಗೃತಿಗೆಂದು ತೆರಳಿತು.

ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ತಲೆಬಾಗಿ ವಿಮಾ ಉದ್ದಿಮೆಯನ್ನು ಖಾಸಗೀಕರಿಸುವ ನಾಚಿಕೆಗೇಡಿ ಕ್ರಮ

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡನೆ

ವಿಮಾ ಉದ್ದಿಮೆಯನ್ನು ಖಾಸಗೀ ಕರಿಸುವ, ಅದನ್ನು ವಿದೇಶಿ ಬಂಡವಾಳಕ್ಕೆ 40% ದ ವರೆಗೆ ತೆರೆಯುವ ವಾಜಪೇಯಿ ಸರ್ಕಾರದ ನಿರ್ಣಯವನ್ನು ಸಿಪಿಐ(ಎಂ) ಪೊಲಿಬ್ಯೂರೋ ಬಲವಾಗಿ ಖಂಡಿಸಿದೆ. 26% ದವರೆಗೆ ವಿದೇಶೀ ಪಾಲುದಾರಿಕೆ ಹಾಗೂ ಇನ್ನೂ 14% ದ ವರೆಗೆ ವಿದೇಶಿ ಹಣಕಾಸು ಸಂಸ್ಥೆಗಳು, ವಿದೇಶೀ ಕಂಪನಿ ಗಳು ಹಾಗೂ ಅನಿವಾಸಿ ಭಾರತೀಯರು ಬಂಡವಾಳ ಹೂಡುವ ಅವಕಾಶ ನೀಡಲು ಕೇಂದ್ರ ಮಂತ್ರಿಮಂಡಲ ನಿರ್ಧರಿಸಿದೆ.

ಈ ಒಂದು ಕ್ರಮದ ಮೂಲಕ ಬಿಜೆಪಿ ನೇತೃತ್ವದ ಸರಕಾರ ಈ ಅತ್ಯಂತ ಲಾಭದಾಯಕ ವಲಯಕ್ಕೆ ಬಂದು ದೇಶದ ಆರ್ಥಿಕ ಅಭಿವೃದ್ಧಿಗೆ ಅತ್ಯವಶ್ಯಕವಾದ ಪ್ರಧಾನ ಸಂಪನ್ಮೂಲಗಳನ್ನು ಹೀರಿಕೊಂಡು ಹೊರಗೊಯ್ಯಲು ಅವಕಾಶ ನೀಡುತ್ತಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ. ಎಲ್.ಐ.ಸಿ. ಮತ್ತು ಜಿ.ಐ.ಸಿ. ಅಪಾರ ಸಂಪನ್ಮೂಲಗಳನ್ನು ಸಂಗ್ರಹಿಸಿ ರಾಷ್ಟ್ರೀಯ ಆದ್ಯತೆಗಳ ಪ್ರಕಾರ ಅಭಿವೃದ್ಧಿ ಯೋಜನೆಗಳಲ್ಲಿ ತೊಡಗಿಸಲು ಸರಕಾರದ ಹಾಗೂ ಹಣಕಾಸು ಸಂಸ್ಥೆಗಳ ಮುಂದಿಟ್ಟಿದೆ. ಆದರೆ ಈಗ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಒತ್ತಡಕ್ಕೆ ಮಣಿದು ಸರಕಾರ ಈ ಸಂಪೂರ್ಣವಾಗಿ ನಾಚಿಕೆಗೇಡಿ ಹಾಗೂ ಅಸಮರ್ಥನೀಯ ಕ್ರಮ ಕೈಗೊಳ್ಳುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ತೀಕ್ಷ್ಣವಾಗಿ ಖಂಡಿಸಿದೆ. ಈ ಮೂಲಕ ಬಿಜೆಪಿ ವಿಮಾ ವಲಯದಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶ ನೀಡುವುದಿಲ್ಲ ಎಂಬ ತನ್ನ ವಚನವನ್ನೇ ಮುರಿದಿದೆ ಎಂದು ಸಿಪಿಐ(ಎಂ) ಹೇಳಿದೆ.

ವಿಮಾ ಹತೋಟಿ ಪ್ರಾಧಿಕಾರ (ಐ.ಆರ್.ಎ) ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದಾಗ ಅದನ್ನು ಸಿಪಿಐ(ಎಂ) ಮತ್ತು ಎಡಪಕ್ಷಗಳು ಖಂಡತುಂಡವಾಗಿ ವಿರೋಧಿ ಸುವುದಾಗಿ ಹೇಳಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಎಲ್ಲಾ ದೇಶಪ್ರೇಮಿ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ಕ್ರಮವನ್ನು ವಿರೋಧಿಸಬೇಕು, ಮುಂಬರುವ ಡಿಸೆಂಬರ್ 11ರ ಸಾರ್ವತ್ರಿಕ ಮುಷ್ಕರದಲ್ಲಿ ಈ ಮಹತ್ವದ ವಿಷಯದತ್ತ ಗಮನ ಕೇಂದ್ರೀ ಕರಿಸುವಂತೆ ಮಾಡಬೇಕೆಂದು ಕರೆ ನೀಡಿದೆ.

ಬಾಬಾಬುಡಾನ್ ಗಿರಿಯಲ್ಲಿ ಶಾಂತಿಭಂಗ ಯತ್ನ

ಸಿಪಿಐ(ಎಂ) ರಾಜ್ಯ ಸಮಿತಿಯಿಂದ ಖಂಡನೆ

ಬಾಬರಿ ಮಸೀದಿ ಧ್ವಂಸದ ರಾಜಕೀಯ ರಕ್ತದ ರುಚಿ ಉಂಡ ಸಂಘ ಪರಿವಾರದ ಕರ್ನಾಟಕದ ಮಂದಿ ಈದ್ಗಾ ವಿವಾದದ ನಂತರ ಈಗ ಮತ್ತೊಂದು ವಿವಾದ ಸೃಷ್ಟಿಸುತ್ತಿದ್ದಾರೆ. ಪ್ರಜಾಪ್ರಭುತ್ವವಾದಿಗಳಲ್ಲಿ ಆತಂಕವನ್ನುಂಟುಮಾಡಿದ್ದಾರೆ. ಈ ಬಗ್ಗೆ ಸಿಪಿಐ(ಎಂ) ರಾಜ್ಯ ಸಮಿತಿ ನವೆಂಬರ್ 24 ರಂದು ನಡೆದ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯವನ್ನು ಇಲ್ಲಿ ಕೊಡಲಾಗಿದೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ತನ್ನ ದಿನಗಳನ್ನು ಎಣಿಸಲು ತೊಡಗುತ್ತಿದ್ದಂತೆ ರಾಜ್ಯದಲ್ಲಿ ಅಧಿಕಾರದ ರುಚಿ ಸವಿಯುವ ಕನಸು ಕಾಣುತ್ತಿದ್ದ ಯಡಿಯೂರಪ್ಪ ಮತ್ತು ಕಂಪೆನಿಗೆ ನಡುಕ ಉಂಟಾಗಿದೆ. ಚುನಾವಣಾ ಭರವಸೆಗಳೆಲ್ಲಾ ಹುಸಿಯಾಗಿ ಬಿಜೆಪಿಯ ಭಾರೀ ಎತ್ತರದ ಮುಖಂಡರಾದ ವಾಜಪೇಯಿ, ಅಡ್ವಾಣಿ ಮೊದಲಾದವರು ತಮ್ಮ ವೈಫಲ್ಯ ಮರೆಮಾಚಲು ಹೆಣಗಾಡುತ್ತಿರುವುದು ಕರ್ನಾಟಕದ ಬಿಜೆಪಿ ವಲಯದಲ್ಲಿ ಸಹಜವಾಗಿಯೇ ಗಾಬರಿಯನ್ನುಂಟು ಮಾಡಿದೆ. ಕೇವಲ ಭರವಸೆ ಗಳಿಂದ ಕನ್ನಡಿಗರ ಮತಗಳನ್ನು ಬುಟ್ಟಿಗೆ ಹಾಕಿಕೊಳ್ಳಲು ಸಾಧ್ಯವಾಗದು ಎಂದು ರಾಜ್ಯದ ಬಿಜೆಪಿಗೆ ಖಚಿತವಾಗುತ್ತಿದ್ದಂತೆ ಕೋಮು ಆಧಾರಿತ ಧೃವೀಕರಣಕ್ಕಾಗಿ ಅದು ಕಾರ್ಯೋನ್ಮುಖವಾಗಿದೆ. ವಿಶ್ವಹಿಂದೂ ಪರಿಷತ್ ಭಜರಂಗದಳ ಮೊದಲಾದ ಸಂಘ ಪರಿವಾರದ ಘಟಕಗಳು ಬಾಬರಿ ಮಸೀದಿ ಅಥವಾ ಹುಬ್ಬಳ್ಳಿಯ ಈದ್ಗಾದಂತಹ ಒಂದು ವಿವಾದವನ್ನು ಹುಟ್ಟುಹಾಕಿ ರಾಜ್ಯ ಬಿಜೆಪಿಯ ನೆರವಿಗೆ ಬರಲು ನಿರ್ಧರಿಸಿವೆ. ರಾಜ್ಯದಲ್ಲಿ ಕೋಮು ಭಾವನೆ ಗಳನ್ನು ಕೆರಳಿಸಿ ಅದರ ರಾಜಕೀಯ ಲಾಭ ಪಡೆಯಲು ಈ ಸಲ ಭಜರಂಗ ದಳವು ಆಯ್ಕೆ ಮಾಡಿರುವ ಸ್ಥಳ ಬಾಬಾಬುಡನ್‌ಗಿರಿ.

ದಾದಾ ಪಹಾಡ್ ಎಂದೇ ಕರೆಯಲ್ಪಡುತ್ತಿರುವ ಬಾಬಾಬುಡನ್‌ಗಿರಿ ಬೆಟ್ಟವು ಚಿಕ್ಕಮಗಳೂರು ಜಿಲ್ಲೆಯ ಒಂದು ಪ್ರೇಕ್ಷಣೀಯ ಸ್ಥಳವಾಗಿದೆ. ಇಲ್ಲಿಯ ರಮಣೀಯವಾದ ಜಲಪಾತಗಳು ಹಾಗೂ ಕಣ್ಮನ ಸೆಳೆಯುವ ಸಸ್ಯಸಂಪತ್ತು ಪ್ರತಿದಿನ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಇಲ್ಲಿ ಹರಿಯುವ ನೀರು ಲವಣ ಯುಕ್ತವಾಗಿದ್ದು ರೋಗನಿವಾರಕ ಗುಣಹೊಂದಿದೆ ಎಂಬ ನಂಬಿಕೆ ಪ್ರಚಲಿತದಲ್ಲಿದೆ. ಇಲ್ಲಿನ ಅರಣ್ಯದಲ್ಲಿ ಅನೇಕ ವಿಧದ ಅಪರೂಪದ ಗಿಡಮೂಲಿಕೆಗಳು ದೊರೆಯುತ್ತವೆ.

ಕ್ರಿ.ಶ. 1670 ರಲ್ಲಿ ಬಾಬಾ ಬುಡನ್ ಎಂಬುವರು ಯೆಮೆನ್‌ದಿಂದ ಕಾಫಿ ಬೀಜಗಳನ್ನು ತಂದು ಇಲ್ಲಿ ಮೊಟ್ಟ ಮೊದಲು ಪರಿಚಯಿಸಿದ್ದರಿಂದ ಈ ಬೆಟ್ಟಕ್ಕೆ ಬಾಬಾಬುಡಾನ್‌ಗಿರಿ ಎಂದು ಹೆಸರು ಬಂದಿದೆ. ಬೆಟ್ಟದ ಮೇಲಿನ ಗುಹೆಗಳಲ್ಲಿ ಸೂಫಿ ಸಂತರು ನೆಲೆಸಿದ್ದಾರೆಂದು ಹೇಳಲಾಗುತ್ತದೆ. ಇಲ್ಲಿನ ದಾದಾ ಹಯಾತ್ ಫೀರ್ ಖಲಂದರ್ ದರ್ಗಾ ಶತಮಾನಗಳಿಂದ ಹಿಂದೂ ಮುಸ್ಲಿಂ ಭಕ್ತಾದಿಗಳನ್ನು ಆಕರ್ಷಿಸುತ್ತಾ ಬಂದಿದೆ. ಇಲ್ಲಿ ವರ್ಷಕ್ಕೊಮ್ಮೆ ನಡೆಯುವ ಉರುಸ್ ಕಾರ್ಯಕ್ರಮದಲ್ಲಿ ಹಿಂದು-ಮುಸಲ್ಮಾನರು ಇಂದಿಗೂ ಬೇಧ ಭಾವವಿಲ್ಲದೆ ಭಾಗವಹಿಸುತ್ತಾರೆ. ಕೋಮು ಸಾಮರಸ್ಯದ ಸಂಕೇತವಾಗಿ ಬೆಳೆದು ಬಂದಿರುವ ಈ ಕ್ಷೇತ್ರಕ್ಕೆ ಈಗ ಭಜರಂಗದಳವು ಲಗ್ಗೆ ಹಾಕಲು ಹೊರಟಿದೆ.

ಬಾಬಾ ಬುಡಾನ್‌ಗಿರಿ ಎಂದು ಕರೆಯಲ್ಪಡುವ ಈ ಬೆಟ್ಟವು ಪುರಾಣಗಳಲ್ಲಿ ಚಂದದ್ರೋಣ ಪರ್ವತ ಎನಿಸಿಕೊಂಡಿತ್ತೆಂದೂ ಇದು ದತ್ತಾತ್ರೇಯ ತಪಸ್ಸು ಮಾಡಿದ ಸ್ಥಳವೆಂದೂ, ಇಲ್ಲಿ ಹಿಂದೂ ಪೂಜಾ ವಿಧಿಗಳು ಮಾತ್ರ ನಡೆಯಬೇಕೆಂದೂ, ಬಾಬಾಬುಡನ್‌ಗಿರಿ ಎಂಬ ಹೆಸರನ್ನು ದತ್ತಾತ್ರೇಯ ಪೀಠ ಎಂದು ಬದಲಾಯಿಸಿ ಅದನ್ನು ತಮ್ಮ ವಶಕ್ಕೆ ನೀಡಬೇಕು ಎನ್ನುವ ಬೇಡಿಕೆಯೊಂದಿಗೆ ಬಜರಂಗದಳ ಚಳುವಳಿಯೊಂದನ್ನು ಹುಟ್ಟುಹಾಕಿದೆ. ಚಳುವಳಿಯ ಅಂಗವಾಗಿ ಗುಲ್ಬರ್ಗಾ ಜಿಲ್ಲೆಯ ಗಾಣಗಾಪುರ, ರಾಯಚೂರು ಜಿಲ್ಲೆಯ ಕುರುಗಡ್ಡಿ, ಬೆಳಗಾವಿ ಜಿಲ್ಲೆಯ ನರಸೋಬವಾಡಿ ಮತ್ತು ಮಂಡ್ಯ ಜಿಲ್ಲೆಯ ಮೇಲುಕೋಟೆಯಿಂದ ನಾಲ್ಕು ರಥಯಾತ್ರೆಗಳು ಹೊರಟು ವಿವಿಧ ಜಿಲ್ಲೆಗಳಲ್ಲಿ 'ಜನಜಾಗೃತಿ'ಯನ್ನು ಉಂಟು ಮಾಡುತ್ತಾ ಡಿಸೆಂಬರ್ 3 ರಂದು ಬಾಬಾ ಬುಡನ್‌ಗಿರಿಗೆ ತಲುಪಲಿವೆ ಎಂದೂ, ಅಂದು ಅಲ್ಲಿ 25 ಸಾವಿರ ಹಿಂದೂಗಳ ಹೋರಾಟ ಪ್ರದರ್ಶನ ನಡೆಯುವುದೆಂದೂ ಈ ಪ್ರದರ್ಶನದಲ್ಲಿ ಪೇಜಾವರ ಮಠಾಧೀಶರು, ಬೆಂಗಳೂರಿನ ಬೇಲಿ ಮಠದ ಸ್ವಾಮಿಗಳು ಮತ್ತು ಭಜರಂಗದಳದ ರಾಷ್ಟ್ರೀಯ ಮುಖಂಡರಾದ ಪ್ರಕಾಶ್ ಶರ್ಮಾ ಅವರು ಭಾಗವಹಿಸಲಿದ್ದಾರೆ ಎಂದು ಹೇಳಲಾಗುತ್ತಿದೆ.

ಮೂಡಿಗೆರೆಯಲ್ಲಿ ತ್ರಿಶೂಲ ಹಸ್ತಾಂತರಿಸಿ ರಥ ಯಾತ್ರೆಯನ್ನು ಉದ್ಘಾಟಿಸಿ ಮಾತನಾಡಿದ ಕೆನರಾ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದ ಅನಂತಕುಮಾರ್ ಹೆಗಡೆ ಬಾಬಾಬುಡಾನ್ ಗಿರಿಯನ್ನು ಹಿಂದುಗಳಿಗೆ ಬಿಟ್ಟುಕೊಡದಿದ್ದರೆ ಅದರ ಮುಕ್ತಿಗಾಗಿ ಆತ್ಮಾಹುತಿ ದಳವನ್ನು ಕಳುಹಿಸಬೇಕಾಗುತ್ತದೆ ಎಂದಿದ್ದಾರೆ.

ರಾಜ್ಯದಲ್ಲಿ ಹತಾಶಗೊಂಡ ಬಿಜೆಪಿ ಹುಬ್ಬಳ್ಳಿ ಈದ್ಗಾ ವಿವಾದದ ನಂತರ ಈಗ ಬಾಬಾ ಬುಡಾನ್‌ಗಿರಿಯಲ್ಲಿ ಕೋಮು ವಿವಾದವೊಂದನ್ನು ಹುಟ್ಟುಹಾಕಿ ರಾಜ್ಯದಲ್ಲಿ ಮತ್ತೊಮ್ಮೆ ಪ್ರಕ್ಷುಬ್ಧತೆಯನ್ನುಂಟುಮಾಡಲು ಹೊರಟಿರುವುದನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಬಲವಾಗಿ ಖಂಡಿಸುತ್ತದೆ. ಭಜರಂಗದಳ ಹಮ್ಮಿಕೊಂಡಿರುವ ಜಾಥಾಗಳಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು ರಾಜ್ಯಾದ್ಯಂತ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದಲ್ಲಿ ಭೀತಿಯನ್ನುಂಟು ಮಾಡಿದೆ. ಈ ರಥಯಾತ್ರೆಗಳಿಂದ ಶಾಂತಿ ಭಂಗವಾಗುವ ಅಪಾಯ ಇರುವುದರಿಂದ ಅವುಗಳನ್ನು ನಿರ್ದಾಕ್ಷಿಣ್ಯವಾಗಿ ನಿಷೇಧಿಸಬೇಕೆಂದೂ ಬಾಬಾ ಬುಡನ್‌ಗಿರಿಯಲ್ಲಿ ಗೂಂಡಾಗಿರಿಗೆ ಅವಕಾಶ ಮಾಡಿಕೊಡುವ ಪ್ರದರ್ಶನಕ್ಕೆ ಅನುಮತಿ ನೀಡಬಾರದೆಂದೂ ಸಿಪಿಐ(ಎಂ) ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತದೆ. ಬಾಬಾ ಬುಡನ್‌ಗಿರಿಯಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗಲು ಹಾಗೂ ಕಾನೂನು ಉಲ್ಲಂಘನೆಗೆ ಅವಕಾಶ ನೀಡದಿರಲು ಬಿಗಿಯಾದ ಕ್ರಮಗಳನ್ನು ತಕ್ಷಣದಿಂದಲೇ ಕೈಗೊಳ್ಳಬೇಕೆಂದು ಒತ್ತಾಯಿಸುತ್ತದೆ. ರಾಜ್ಯದ ಜಾತ್ಯಾತೀತ ರಾಜಕೀಯ ಪಕ್ಷಗಳೊಂದಿಗೆ ಮತ್ತು ಸಂಘಟನೆ ಗಳೊಂದಿಗೆ ಸಮಾಲೋಚಿಸಿ ಬಿಜೆಪಿಯ ಈ ಕುತಂತ್ರದ ವಿರುದ್ಧ ಅವಶ್ಯಕ ಜನಾಂದೋಲನವನ್ನು ರೂಪಿಸಲು ನಾವು ಮುಂದಾಗಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ನಿರ್ಧರಿಸುತ್ತದೆ.

ಕರ್ನಾಟಕದಲ್ಲಿ ಕಳೆದವಾರ

ನವೆಂಬರ್ -20

- ರೈತರ ಕ್ಷೇಮಾಭಿವೃದ್ಧಿ ನಿಧಿ ರಚಿಸಲು ಕೇಂದ್ರಕ್ಕೆ ರಾಜ್ಯ ಮನವಿ.
- ದಳ ಬಿಕ್ಕಟ್ಟು ಸಮಾಲೋಚನಾ ಸಭೆಗೆ ಸಿದ್ದರಾಮಯ್ಯ ಗೈರುಹಾಜರಿ.
- ವನ್ಯ ಪ್ರಾಣಿಗಳ ಅಕ್ರಮ ಬಂಧನ, ಪ್ರದರ್ಶನ. ಐವರ ಬಂಧನ.

ನವೆಂಬರ್ 21

- ಅತಿವೃಷ್ಟಿ ಹಾನಿ ಸಂತ್ರಸ್ತರಿಗೆ ಹತ್ತು ಸಾವಿರ ಆಶ್ರಯ ಮನೆ.
- ರಾಜ್ಯದಲ್ಲಿ ಆತಂಕಕಾರಿಯಾಗಿ ಬೆಳೆಯುತ್ತಿರುವ ಏಡ್ಸ್, ತಜ್ಞರ ಕಳವಳ.
- ಭಾರತ ದರ್ಶನಕ್ಕೆ ರಾಜ್ಯ ರೈತರ ಪ್ರಯಾಣ.

ನವೆಂಬರ್ 22

- ಭಜರಂಗ ದಳದ ಯಾತ್ರೆಯಿಂದ ಕೋಮು ಸೌಹಾರ್ದತೆಗೆ ಧಕ್ಕೆ - ಸಚಿವ ಸಿಂಧ್ಯಾ.
- ಸಂಪುಟ ಪುನರ್ರಚನೆ-ಪಟೇಲ್ ಹೇಳಿಕೆಗೆ ಭಿನ್ನರ ಆಕ್ಷೇಪ.
- ವೀರಪ್ಪನ್ ಪ್ರತಿಕಾರ: ಮತ್ತೆ ಮೂವರ ಬಂಧನ.

ನವೆಂಬರ್ 23

- ಹುಬ್ಬಳ್ಳಿ -ಧಾರವಾಡ ಹತ್ತಿ ವರ್ತಕರ ಮುಷ್ಕರ, ಖರೀದಿ ಸ್ಥಗಿತ.
- ಕೊಡಗು ಪ್ರತ್ಯೇಕತೆ ವಿರುದ್ಧ ಪ್ರಜಾವೇದಿಕೆಯಿಂದ ಸೋಮವಾರ ಪೇಟೆಯಲ್ಲಿ ಮೆರವಣಿಗೆ.
- ಹೊಸನಗರ-ಆಯನೂರು ಮಂಜುನಾಥ ಆಯ್ಕೆ ಕ್ರಮಬದ್ಧ ಎಂದು ಹೈಕೋರ್ಟ್.

ನವೆಂಬರ್ 24

- ಬೀಜಾಂತ್ಯ ತಂತ್ರಜ್ಞಾನ ತಡೆಗಟ್ಟಲು ರಾಜ್ಯದ ಆಗ್ರಹ.
- ಹತ್ತಿ ಮಾರಾಟದ ಕೊನೆಹಂತದಲ್ಲಿ ತೆರಿಗೆ ವಿಧಿಸಲು ಸರ್ಕಾರದ ಸಮ್ಮತಿ.
- ಬಿಜಾಪುರ-ಯಡಿಯೂರಪ್ಪ ಎದುರು ಬಿಜೆಪಿ ಪದಾಧಿಕಾರಿಗಳ ಮಾರಾಮರಿ.

ನವೆಂಬರ್ 25

- ಬಾಬಾ ಬುಡಾನ್‌ಗಿರಿ ವಿವಾದ-ಪರಿಸ್ಥಿತಿ ಹತೋಟಿಗೆ ರಾಷ್ಟ್ರೀಯ ಭದ್ರತಾ ಕಾಯ್ದೆ ಬಳಕೆಗೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ.
- ಹಿರಿಯ ಕವಿ ಡಾ|| ಜಿ.ಎಸ್. ಶಿವರುದ್ರಪ್ಪನವರಿಗೆ 1997ನೇ ಸಾಲಿನ ಪಂಪ ಪ್ರಶಸ್ತಿ.
- ದಳ ನಾಯಕತ್ವ ಪ್ರಶ್ನೆ ಶರದ್ ಯಾದವ್ ನಿರ್ಧಾರಕ್ಕೆ ಬದ್ಧ - ದೇವೇಗೌಡ.

ನವೆಂಬರ್ 26

- 1997-98ನೇ ಸಾಲಿನ ಚಲನಚಿತ್ರ ರಾಜ್ಯ ಪ್ರಶಸ್ತಿ ಪ್ರಕಟ - 'ತಾಯಿಸಾಹೇಬ' ಗೆ ಆರು ಪ್ರಶಸ್ತಿ.
- ಮೈಸೂರು ಅರಮನೆ ವಿವಾದ: ರಾಷ್ಟ್ರಪತಿ ಮೊರೆ ಹೋಗಲು ರಾಜ್ಯ ನಿರ್ಧಾರ.
- ಗ್ರಾಮೀಣ ಅಭ್ಯರ್ಥಿಗಳ ಕೃಪಾಂಕ ರದ್ಧತಿ ವಿರುದ್ಧ ವ್ಯಾಪಕಗೊಂಡ ಪ್ರತಿಭಟನೆ.

ಜನವಾದಿ ಮಹಿಳಾ ಸಂಘಟನೆಯ ಖಂಡನೆ

ಬೆಲೆ ಏರಿಕೆ, ದೌರ್ಜನ್ಯ ನಿರುದ್ಯೋಗ ಸಮಸ್ಯೆಗಳಿಂದ ಜನ ತತ್ತರಿಸುತ್ತಿರುವ ಪರಿಸ್ಥಿತಿ, ಅತಿವೃಷ್ಟಿ, ಬರಗಾಲ, ಭೂಕುಸಿತಗಳಿಂದ ಕಂಗಾಲಾದ ಜನ ಸಮುದಾಯಕ್ಕೆ ಭರವಸೆಯ ಬಾಯಿ ಮಾತಿನ ಬಿಜೆಪಿಯ ಬಗ್ಗೆ ಭ್ರಮನಿರಸನ ವಾಗುತ್ತಿದ್ದಂತೆ ಸಮಸ್ಯೆಗಳಿಂದ ವಿಮುಖ ಗೊಳಿಸಿ ಬಿಜೆಪಿಯ ರಕ್ಷಣೆಗಾಗಿ ಧಾವಿಸಿ ಬಂದಿರುವ ಭಜರಂಗದಳದ ಹೊಸ ಅಸ್ತ್ರ ಇದು ಎಂದು ಜನವಾದಿ ಮಹಿಳಾ ಸಂಘಟನೆ ಖಂಡಿಸಿದೆ.

ದೇಶದ ಜನ ಹೊಟ್ಟೆ ಬಟ್ಟೆಗಾಗಿ ಪರದಾಡುತ್ತಿರುವಾಗ ಆ ಸಮಸ್ಯೆಗಳಿಗೆ ಸ್ಪಂದಿಸದೆ ಆಹಾರ ಸಾಮಗ್ರಿಗಳನ್ನು ಕಳ್ಳದಾಸ್ತಾನು ಮಾಡುವುದನ್ನು ಸಮರ್ಥಿಸಿಕೊಳ್ಳುತ್ತಿರುವ ಪ್ರಧಾನಿಗಳು, ಜನರಲ್ಲಿ ಕೋಮು ಭಾವನೆಯನ್ನು ಪ್ರಚೋದಿಸುತ್ತಿರುವ ಮಠಾಧಿಪತಿಗಳು ಮತ್ತು ಭಜರಂಗದಳದವರನ್ನು ಬೆಂಬಲಿಸಿ "ಆತ್ಮಾಹುತಿದಳ" ರಚಿಸುವುದಾಗಿ ಹೇಳುತ್ತಿರುವ ಸಂಸತ್ ಸದಸ್ಯ ಅನಂತಕುಮಾರ್ ಹೆಗ್ಡೆಯವರು- ಇವರಿಗೆ ಕೋಮುಗಲಭೆಗಳಿಂದಾಗುವ ಅನಾಹುತಗಳ ಅರಿವಿದೆಯೇ ಎಂಬುದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಪ್ರಶ್ನಿಸಿದೆ.

ಹಿಂದೆ ಬಾಬ್ರಿ ಮಸೀದಿಯ ದುರಂತದ ಸಂದರ್ಭದ ಹಿಂದೆ-ಮುಂದೆ ನಡೆದ ಗಲಭೆಗಳಲ್ಲಿ ದೇಶದಾದ್ಯಂತ ಮಹಿಳೆಯರು ಹರಿಸಿದ ಕಣ್ಣೀರು, ಕೋಮುವಾದಿ ರಕ್ಕಸರು ಹರಿಸಿದ ರಕ್ತದೋಕುಳಿಯನ್ನು ನಾವೆಂದೂ ಮರೆಯಲಾರೆವು ಎಂದಿರುವ ಜೆಂ.ಎಂ.ಎಸ್. ಕರ್ನಾಟಕ ಸರ್ಕಾರ ಈ ಕೂಡಲೇ ಕ್ರಮ ಕೈಗೊಂಡು ಯಾವುದೇ ರಥಯಾತ್ರೆಗಳು ನಡೆಯಲಾರದಂತೆ ತಡೆಯಬೇಕು ಎಂದು ಆಗ್ರಹಿಸಿದೆ. ಕರ್ನಾಟಕ ರಾಜ್ಯದ ಸಮಸ್ತ ನಾಗರಿಕರು ಕೋಮುವಾದಿಗಳ ಈ ಸಂಚಿಗೆ ಬಲಿಯಾಗದೇ ರಾಜ್ಯದಲ್ಲಿ ಶಾಂತಿ ಕಾಪಾಡಲು ಮುಂದಾಗಬೇಕೆಂದು ಸಂಘಟನೆ ಕರೆ ನೀಡಿವೆ.

ವಿವಾದವನ್ನು ಹುಬ್ಬಳ್ಳಿ, ಬೆಂಗಳೂರಿನಲ್ಲಿ ಸೃಷ್ಟಿಸಲಾಗಿದೆ

ಎನ್ನುತ್ತಾರೆ ದತ್ತಾತ್ರೇಯ ಪೀಠದ ನಿತ್ಯಾನಂದ ಸ್ವಾಮಿ

'ಬಾಬಾ ಬುಡನ್‌ಗಿರಿಯಲ್ಲಿ ಯಾವುದೇ ವಿವಾದ ಸಮಸ್ಯೆಗಳಿಲ್ಲ. ಅದನ್ನು ಹುಬ್ಬಳ್ಳಿ, ಬೆಂಗಳೂರಿನಲ್ಲಿ ಕುಳಿತು ಸೃಷ್ಟಿಸಲಾಗಿದೆ. ಇಲ್ಲಿನ ಜನಕ್ಕೆ ಈ ವಿವಾದ ಏನೆಂಬುದೂ ಗೊತ್ತಿಲ್ಲ'- ಕಳೆದ ನಾಲ್ಕು ವರ್ಷಗಳಿಂದ ದತ್ತಾತ್ರೇಯ ಪೀಠಕ್ಕೆ ಸಂಬಂಧಿಸಿದಂತೆ ಇರುವ ಕಚೇರಿಯಲ್ಲಿ ವ್ಯವಹಾರ ನೋಡಿ ಕೊಳ್ಳುತ್ತಿರುವ, ತಪಸ್ವಿ ನಿತ್ಯಾನಂದ ಸ್ವಾಮಿ ಗಳನ್ನು ಮಂಗಳೂರಿನ 'ಜನವಾಹಿನಿ' ಪತ್ರಿಕೆ ಯು ಸಂದರ್ಶಿಸಿದಾಗ ಹೇಳಿದ ಮಾತಿದು.

ಇಲ್ಲಿ ಗೋಹತ್ಯೆ ನಡೆದು ಸ್ಥಳವನ್ನು ಅಪವಿತ್ರಗೊಳಿಸಲಾಗುತ್ತಿದೆಯೆಂಬ ಬಿಜೆಪಿ, ಭಜರಂಗ ದಳದ ಆರೋಪದ ಬಗ್ಗೆ, ಪ್ರಶ್ನಿಸಿದಾಗ, 'ನಾನು ನಾಲ್ಕು ವರ್ಷಗಳಿಂದ ಇಲ್ಲಿದ್ದೇನೆ. ಕುರಿ, ಕೋಳಿ ಕಡಿಯೋದಿದೆ ಹೊರತು, ದನ ಕಡಿಯುವುದನ್ನು ನಾನು ಕಂಡಿಲ್ಲ' ಎಂದು ಅವರು ವಿವರಣೆ ನೀಡಿದರು.

'ಮನುಷ್ಯನಿಗೆ ಸಂಕುಚಿತ ಬುದ್ಧಿ ಬಂದಾಗ, ಘರ್ಷಣೆಗಳು ಸಹಜವಾಗಿಯೇ ಉದ್ಭವಿಸುತ್ತವೆ. ಮನುಷ್ಯ ಅದನ್ನು ಮೀರದಿದ್ದರೆ ಉದ್ಧಾರ ಆಗೋಲ್ಲ. ಇಲ್ಲಿ ದಾದಾ ಅಂತ ಕರೀರಿ, ದತ್ತಾತ್ರೇಯ ಅಂತ ಕರೀರಿ. ಅವರವರ ಮನಸ್ಸಿಚ್ಛೆಯದು. ಇಲ್ಲಿ ಹಿಂದೂ-ಮುಸ್ಲಿಂ ಅನ್ನೋ ಭಾವನೆಯಂತೂ ಇಲ್ಲವೇ ಇಲ್ಲ. ಪ್ರತಿವರ್ಷ ಬಂದು ಇಲ್ಲಿ ಪೂಜೆ ಮಾಡುತ್ತಾರೆ. ಮುಸ್ಲಿಮರು ಬಹಳ ಸಾಮರಸ್ಯದಿಂದಲೇ ಇದರಲ್ಲಿ ಭಾಗವಹಿಸು ತ್ತಾರೆ. ಭಕ್ತಾದಿಗಳು ಇಲ್ಲಿ ಹಾಡು, ಹಸೆ, ಪೂಜೆ, ಭಜನೆ, ಅಭಿಷೇಕ ನಡೆಸುತ್ತಾರೆ' ಎಂದು ಅವರು ವಿವರಿಸಿದರು.

'ಈಗ ನೋಡಿ, ಬಾಬಾ ಬುಡನ್ ಗಿರಿಯ ಶಾಂತ ಸ್ಥಳದ ಬಗ್ಗೆ ವಿವಾದವೆಬ್ಬಿದೆ. ಇದು ಯಾರಿಂದಲೋ ಸೃಷ್ಟಿಸಲ್ಪಟ್ಟದ್ದು. ದೇವರ ಬಗ್ಗೆ ನಂಬಿಕೆ ಇರೋದು ವೈಯಕ್ತಿಕ. ಆ ನಂಬಿಕೆಯನ್ನು ವಿವಾದಗಳನ್ನು ಹುಟ್ಟು ಹಾಕುವ ಸಲುವಾಗಿ ಬಳಸಿಕೊಳ್ಳಲಾಗುತ್ತಿದೆ' ಎಂದು ಹೇಳಿದರು.

ತಾನು ಎಲ್ಲರೊಳಗೊಬ್ಬನೆಂಬ ಭಾವನೆ ಬಂದಾಗ ತಪ್ಪು ಕಾಣೋದಿಲ್ಲ. ಹೊಡೆದಾಡುವ ಪೈಲ್ವಾನರಲ್ಲಿಯೂ ವಿವೇಕದ ಬಲಿಷ್ಟ ಪೈಲ್ವಾನನೊಬ್ಬ ಇರುತ್ತಾನೆ. ಸಮಸ್ಯೆಗಳು ಯಾವುದೇ ಇರಲಿ ಕುಳಿತು ಬಗೆಹರಿಸಿಕೊಳ್ಳಬೇಕು ಎಂದು ಅವರು ಹೇಳಿದರು. ಬಾಬಾ ಬುಡನ್‌ಗಿರಿಗೆ ಬಂದ ಉದ್ದೇಶದ ಬಗ್ಗೆ ಕೇಳಿದಾಗ 'ನನ್ನ ಗುರುಗಳಾದ ಶ್ರೀಧರ ಸ್ವಾಮಿಗಳ ಆದೇಶವಿತ್ತು. ಇಲ್ಲಿಗೆ ಅನುಷ್ಠಾನಕ್ಕೆಂದು ಬಂದು ಇಲ್ಲಿ ಪಲ್ಲಂಗ್ ತಲಾಬ್(ಗಾಳಿಕೆರೆ)ಯಲ್ಲಿ ತಪಸ್ಸು ಕೈಗೊಂಡೆ ಎಂದು ಸ್ವಾಮೀಜಿಯವರು ಹೇಳಿದರು.

'ನಾನು ಇಲ್ಲಿಗೆ ಬರುವ ಮೊದಲೇ ವೇದಗಳನ್ನು ಗಿಳಿಪಾಠ ಮಾಡಿಕೊಂಡಿದ್ದೆನಾದರೂ, ಇಲ್ಲಿಗೆ ಬಂದಾಗಲೇ ವೇದಗಳ ಅರ್ಥಗಳು ಹೊಳೆದದ್ದು, ಎಲ್ಲಾ ವೇದಗಳನ್ನು ಅರ್ಥ ಮಾಡಿಕೊಂಡಿದ್ದು ಇಲ್ಲಿಯೇ...' ಎಂದು ಸ್ವಾಮೀಜಿಯವರು 'ಈ ವಿವಾದಗಳು ಅಶಾಂತಿ ಹುಟ್ಟು ಹಾಕಿಬಿಡುತ್ತವೆ, ನಾನು ಶಾಂತಿಗಾಗಿ ಇಲ್ಲಿಗೆ ಬಂದವನು. ಈ ಗಲಾಟೆ ಮುಗಿಯುವ ವರೆಗೆ ನಾನು ಇಲ್ಲಿ ಕಾಣಸಿಕೊಳ್ಳಲಾರೆ' ಎಂದು ನೊಂದ ಧ್ವನಿಯಲ್ಲಿ ಹೇಳಿದರು.

ಕೃಪೆ: ಜನವಾಹಿನಿ, ಮಂಗಳೂರು

"ಮಾನ್‌ಸಾಂಟೋ ನಪುಂಸಕ ಬೀಜವನ್ನು, ಅದರ ತಂತ್ರಜ್ಞಾನ ಸಮೇತ ಕಂಪೆನಿಯನ್ನು ದೇಶದಾಚೆಗಟ್ಟಿ"

-ಕರ್ನಾಟಕ ಪ್ರಾಂತ ರೈತ ಸಂಘದ ಒತ್ತಾಯ

ಕರ್ನಾಟಕ, ಆಂಧ್ರ ಪ್ರದೇಶ, ಮಹಾರಾಷ್ಟ್ರ ರಾಜ್ಯಗಳಲ್ಲಿ ಮಾನ್‌ಸಾಂಟೋ ಬೀಜ ಕಂಪೆನಿಯು ಇಲ್ಲಿನ ಟಾಟಾ ಸಂಶೋಧನಾ ಸಂಸ್ಥೆಯೊಂದಿಗೆ ಸೇರಿಕೊಂಡು ಮುಖ್ಯವಾಗಿ ಹತ್ತಿ ಬೆಳೆಯ ನಪುಂಸಕ ಬೀಜ ತಯಾರಿಯಲ್ಲಿ ತೊಡಗಿ ಮೊದಲೇ ನಲುಗಿಹೋದ ರೈತಾಪಿ ಜನತೆಯನ್ನು ಇಂತಹ ಬಹುರಾಷ್ಟ್ರೀಯ ಕಂಪೆನಿಗಳ ಗುಲಾಮತನಕ್ಕೆ ದೂಡಲು ಮುಂದಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯು ಉಗ್ರವಾಗಿ ಖಂಡಿಸಿದೆ.

ಕೇಂದ್ರ ಸರ್ಕಾರದ ಜಾಗತೀಕರಣ ಹಾಗೂ ಉದಾರವಾದಿ ಹೊಸ ಆರ್ಥಿಕ ಮತ್ತು ಹೊಸ ಕೃಷಿ ನೀತಿಗಳ ಪರಿಣಾಮ ಸಾಮಾನ್ಯ ರೈತರ ಮೇಲೆ ತೀವ್ರ ಹೊರೆಯನ್ನು ಹೇರಿ ಆತ್ಮಹತ್ಯೆ ಮಾಡಿಕೊಳ್ಳುವಂತಹ ಒತ್ತಡವನ್ನು ಹೇರಿದೆ. ಈ ಬೀಜಗಳಿಂದ ಬರುವ ಸಸ್ಯಗಳು ಕೊಡುವ ಹೊಸ ಬೀಜಗಳು ನಾಟಿಮಾಡಲು ಬಾರದವುಗಳಾಗಿದ್ದು ಇಂತಹ ನಪುಂಸಕ ಬೀಜದ ಜೊತೆ ಅದರ ಹೇಯ ತಂತ್ರಜ್ಞಾನವನ್ನು ಸೇರಿಸಿ ಬಹುರಾಷ್ಟ್ರೀಯ ಸಂಸ್ಥೆಗಳನ್ನು ದೇಶದಾಚೆ ದೂಡಲು ಜನತೆಗೆ ಕರೆ ನಿಡಿದೆ.

ಈ ಹಿಂದಿನ ನರಸಿಂಹರಾವ್ ಸರ್ಕಾರದ ಆರ್ಥಿಕ ನೀತಿಯ ಬಾಲಬಡುಕ ತನವನ್ನು ಮುಂದುವರಿಸಿದ ಬಿಜೆಪಿ ನಾಯಕತ್ವದ ಕೇಂದ್ರ ಸರ್ಕಾರವು ಒಂದೆಡೆ ಸ್ವದೇಶಿ ಮಂತ್ರವನ್ನು ಜಪಿಸುತ್ತಾ ವಿದೇಶಿ ಗುತ್ತೇದಾರಿ ಕಂಪೆನಿಗಳ ದಾಸ್ಯಕ್ಕೆ ರೈತಾಪಿ ಜನತೆಯನ್ನು ದೇಶವನ್ನು ದೂಡಲು ತುದಿಗಾಲ ಮೇಲೆ ನಿಂತು ತೀವ್ರ ಮುತುವರ್ಜಿ ವಹಿಸುತ್ತಿರುವುದನ್ನು ಎಲ್ಲಾ ದೇಶಪ್ರೇಮಿ ಜನತೆ ರೈತಸಂಘಗಳ ಜೊತೆ ಸೇರಿ ಬಲವಾಗಿ ಪ್ರತಿಭಟಿಸಲು ಈ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವೂ ಪಾಲ್ಗೊಳ್ಳುವಂತೆ ಕರ್ನಾಟಕ ಪ್ರಾಂತ ರೈತ ಸಂಘ ಆಗ್ರಹಿಸಿದೆ.

ಈ ಬಗ್ಗೆ ರಾಜ್ಯದಲ್ಲಿ ಪ್ರಚಲಿತವಿರುವ ರೈತ ಸಂಘಗಳ ಪ್ರತಿನಿಧಿಗಳ ಸಭೆಯನ್ನು ಕರೆದು ರೈತರ ಸ್ವಾವಲಂಬಿ ಬದುಕಿನ ವಿರೋಧಿ ನಪುಂಸಕ ಬೀಜವನ್ನು ಹೊಡೆದಟ್ಟಲು ರಾಜ್ಯ ಸರ್ಕಾರದ ಕೃಷಿಸಚಿವರಾದ ಮಾನ್ಯ ಶ್ರೀ ಸಿ. ಬೈರೇಗೌಡರು ಮುಂದಾಗಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ಒತ್ತಾಯಿಸಿದೆ. ರೈತರು ಒಗ್ಗೂಡಿ ಹೋರಾಡಲು ಸಾಧ್ಯವಾಗುವಂತೆ ಬೇರೆ ಬೇರೆ ರೈತ ಹಾಗೂ ರೈತ ಕೂಲಿಕಾರ ಸಂಘಗಳನ್ನು ಸಂಪರ್ಕಿಸಲು ಕರ್ನಾಟಕ ಪ್ರಾಂತ ರೈತ ಸಂಘ ತಯಾರಿ ನಡೆಸಿದೆಯೆಂದು ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಪ್ರಧಾನ ಕಾರ್ಯದರ್ಶಿ ಪಿ. ಜಗನ್ನಾಥ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಏಜೆನ್ಸಿದಾರರಲ್ಲಿ ಮತ್ತೊಮ್ಮೆ ಮನವಿ

'ಐಕ್ಯರಂಗ' ಅತ್ಯುತ್ತಮ ಹಾಗೂ ಅತ್ಯುಪಯುಕ್ತ ರೀತಿಯಲ್ಲಿ ಪ್ರಕಟವಾಗಿವಲ್ಲಿ ನಮ್ಮ ಮಾನ್ಯ ಏಜೆನ್ಸಿದಾರರ ಸಹಕಾರದ ಮಹತ್ವವನ್ನು ನಾವು ಮತ್ತೆ - ಮತ್ತೆ ನೆನಪಿಸುತ್ತಾ ಬಂದಿದ್ದೇವೆ. ಅಭೂತಪೂರ್ವ ಬೆಲೆಯೇರಿಕೆಯ ಈ ದಿನಗಳಲ್ಲಿ ಇದು ಇನ್ನಷ್ಟು ಮುಖ್ಯವಾಗಿದೆ. ಆದರೆ ದುರದೃಷ್ಟವಶಾತ್ ಕೆಲವು ಏಜೆನ್ಸಿದಾರರು ಪರಿಸ್ಥಿತಿಯ ಗಂಭೀರತೆಯನ್ನು ಇನ್ನೂ ಅರಿತುಕೊಂಡಂತಿಲ್ಲ, ಇಂತಹ ಏಜೆನ್ಸಿದಾರರು ಇನ್ನು ಒಂದು ತಿಂಗಳೊಳಗೆ ತಮ್ಮ ಬಾಕಿಯನ್ನು ಚುಕ್ತಾ ಮಾಡದಿದ್ದರೆ ಅವರಿಗೆ ಜನವರಿ 1999 ರಿಂದ ಪತ್ರಿಕೆಯನ್ನು ನಿಲ್ಲಿಸದೆ ನಿರ್ವಾಹವಿಲ್ಲವಾಗಿದೆ. ಸಂಬಂಧಪಟ್ಟ ಏಜೆನ್ಸಿದಾರರಿಗೆ ಈ ಬಗ್ಗೆ ಪ್ರತ್ಯೇಕವಾಗಿ ತಿಳಿಸಲಾಗುತ್ತಿದೆ. ದುಡಿಯುವ ಜನರ ಈ ಪತ್ರಿಕೆಯ ಪ್ರಕಟಣೆಯಲ್ಲಿ ಸಂಪೂರ್ಣ ಸಹಕಾರ ನೀಡಬೇಕೆಂದು ಮತ್ತೊಮ್ಮೆ ಏಜೆನ್ಸಿದಾರರಲ್ಲಿ ವಿನಂತಿಸಿಕೊಳ್ಳುತ್ತೇವೆ.

- ಐಕ್ಯರಂಗ

ಮೂರನೇ ಜಗತ್ತಿನ ದೇಶಗಳ ಆರ್ಥಿಕಗಳನ್ನು ಧ್ವಂಸಗೈದ ಹಣಕಾಸು ಜಾಗತೀಕರಣ



ಇಂಡೋನೇಶ್ಯಾದ ಹಣಕಾಸು ಬಿಕ್ಕಟ್ಟಿನ ಹೊರೆ ಹೊರಲಾದ ನಾಗರಿಕರು ಬದುಕಿಗಾಗಿ ಅಂಗಲಾಚುವಂತಾಗಿದೆ. ಖಾಸಗೀ ಸಂಸ್ಥೆಯೊಂದು ಡಿಸ್ಕೌಂಟ್ ದರಗಳಲ್ಲಿ ಆಹಾರ ವಿತರಣೆ ಮಾಡುವುದಾಗಿ ಹೇಳಿದ 50 ಸಾವಿರ ಜನ ಧಾವಿಸಿ ಬಂದಾಗಿನ ದೃಶ್ಯ.

ಇತ್ತೀಚಿನ ಅವಧಿಯಲ್ಲಿ ಹಣಕಾಸು ಬಂಡವಾಳ ವಿಪರೀತವಾಗಿ ಬೆಳೆದಿದೆ. ಪ್ರತಿದಿನ ಒಂದೂವರೆ ಲಕ್ಷ ಕೋಟಿ ಡಾಲರುಗಳಷ್ಟು (ಸುಮಾರು ೬೦ ಲಕ್ಷ ಕೋಟಿ ರೂಪಾಯಿಗಳಷ್ಟು)ಹಣ ವಿಶ್ವದ ಹಣಕಾಸು ಮಾರುಕಟ್ಟೆಗಳಿಗೆ ಬಂದು ಹೋಗುತ್ತಿರುತ್ತದಂತೆ. ಗಮನಿಸಬೇಕಾದ ಸಂಗತಿಯೆಂದರೆ ಈ ಅಪಾರ ಬಂಡವಾಳ ಯಾವುದೇ ಮೌಲ್ಯವನ್ನು ಸೃಷ್ಟಿಸುತ್ತಿಲ್ಲ. ಅಂದರೆ ದೇಶಗಳ ಸಂಪತ್ತನ್ನು ಹೆಚ್ಚಿಸುತ್ತಿಲ್ಲ. ಆದರೆ ಇದು ಹಲವು ದೇಶಗಳ, ಮುಖ್ಯವಾಗಿ ನಮ್ಮಂತಹ ಮೂರನೇ ಜಗತ್ತಿನ ದೇಶಗಳ ಆರ್ಥಿಕವನ್ನು ಧ್ವಂಸಮಾಡುವ ಸಾಮರ್ಥ್ಯ ಹೊಂದಿವೆ. ಬೃಹತ್ ಬಹುರಾಷ್ಟ್ರೀಯ ಬ್ಯಾಂಕುಗಳ, ಹಣಕಾಸು ಕಂಪನಿಗಳ ಸೂಪರ್ ಲಾಭಗಳಿಗೆ ಸಂಪೂರ್ಣ ಅವಕಾಶ ಕೊಡಬೇಕೆನ್ನುವ ಈ ಹಣಕಾಸು ಜಾಗತೀಕರಣದ ಸಿದ್ಧಾಂತ ಈ ಮೂಲಕ ಸ್ವತಂತ್ರ ದೇಶಗಳ ಸಾರ್ವಭೌಮತೆಯ ಮೇಲೆಯೇ ಧಾಳಿ ಮಾಡಲು ಅವಕಾಶ ನೀಡಿದೆ. ಮುಂದುವರಿದ ದೇಶಗಳಿಂದ ಬಂದ ಹಣಕಾಸು ಬಂಡವಾಳ ಇತರ ಎಲ್ಲಾ ದಶಗಳ ಹಣಕಾಸು ಬಂಡವಾಳವನ್ನು ಹೀರಿಕೊಳ್ಳುವುದರ ಮುಖ್ಯ ಗುರಿ ಸಟ್ಟಾ ಬಜಾರಿನಲ್ಲಿ ತ್ವರಿತವಾಗಿ ಲಾಭ ಗಿಟ್ಟಿಸಿ ಕೊಳ್ಳುವುದು. ಆದ್ದರಿಂದ ನಿಜವಾದ ಆರ್ಥಿಕ ಬೆಳವಣಿಗೆಯನ್ನು ತಡೆದು ಬೀಗುವ ಪರಾವಲಂಬಿಯದು. ಮೆಕ್ಸಿಕೋ, ದಕ್ಷಿಣ-ಪೂರ್ವ ಏಶ್ಯಾದಲ್ಲಿನ ಇತ್ತೀಚಿನ ಅನುಭವಗಳೇ ಇದಕ್ಕೆ ಸಾಕ್ಷಿ. ಭಾರತವೂ ಇದೇ ದಾರಿ ಹಿಡಿಯಬಹುದೇ?; ಇದು ಹಲವರಲ್ಲಿ ಎದ್ದಿರುವ ಆತಂಕ. ನವೆಂಬರ್ 1997 ರಲ್ಲಿ ಡಾಲರಿಗೆ 36 ಇದ್ದ ರೂಪಾಯಿ ಬೆಲೆ 40 ರ ಮಟ್ಟ ದಾಟಿದಾಗ ಈ ಭಯ ತೀವ್ರಗೊಂಡಿತ್ತು. "ನಾವು ಆ ದಾರಿ ಹಿಡಿಯುತ್ತಿಲ್ಲ" ಎಂದು ರಿಝರ್ವ್ ಬ್ಯಾಂಕ್ ಗವರ್ನರ್ ಹೇಳುತ್ತಾರೆ. ಏಕೆ? ಏಕೆಂದರೆ ನಮ್ಮ ಮೂಲಭೂತ ಆರ್ಥಿಕ ಅಂಶಗಳು ಗಟ್ಟಿಯಾಗಿವೆ-ಇದು ಅವರ ಸಮಜಾಯಿಷಿ. ಮೆಕ್ಸಿಕೋ, ಥಾಯ್ಲೆಂಡಿನ ಮೂಲಭೂತ ಆರ್ಥಿಕ ಅಂಶಗಳೂ ಬಿಕ್ಕಟ್ಟಿನ ಕೆಲವು ತಿಂಗಳ ಹಿಂದೆ ಗಟ್ಟಿಯಾಗಿಯೇ ಇದ್ದವು. ಭಾರತ ಈ ದಾರಿಯನ್ನು ಇದುವರೆಗೆ ಹಿಡಿಯದಿದ್ದರೆ ಅದಕ್ಕೆ ಕಾರಣ ಭಾರತದ ಹಣಕಾಸು ವಲಯದ 'ಉದಾರೀಕರಣ' ಮಂದಗತಿಯಲ್ಲಿ ಸಾಗಿರುವುದು ಎನ್ನುತ್ತಾರೆ ತಜ್ಞರು. ಆಳುವ ಮಂದಿಯೂ ಪರೋಕ್ಷವಾಗಿ ಇದನ್ನು ಒಪ್ಪಿಕೊಳ್ಳುತ್ತಾರೆ. ಹೀಗೆ ಮಂದಗತಿಯಲ್ಲಿ ಸಾಗುವಲ್ಲಿ ಜನರ ಪ್ರತಿರೋಧ ದೊಡ್ಡ ಪಾತ್ರ ವಹಿಸಿದೆ ಎಂಬುದನ್ನು ಮರೆಯುವಂತಿಲ್ಲ. ಆದರೆ ಬಿಜೆಪಿ ನೇತೃತ್ವದ ಸರಕಾರ ಈ ಅನುಭವಗಳ ಹಿನ್ನೆಲೆಯಲ್ಲಿ ಈ ಮಂದಗತಿಯನ್ನು ತೀವ್ರಗೊಳಿಸಲು ಶತಪ್ರಯತ್ನ ನಡೆಸುತ್ತಿರುವುದೇಕೆ? ರಾತ್ರಿ ಕಂಡ ಬಾವಿಗೆ ಹಾಡುಹಗಲೇ ಬೀಳಲೆಂದೇ? - ಇದು ದೇಶದ ಕೋಟ್ಯಾಂತರ ದುಡಿಯುವ ಜನ ಮೆಕ್ಸಿಕೋ, ಥಾಯ್ಲೆಂಡ್, ದಕ್ಷಿಣ ಕೋರಿಯಾ, ಮಲೇಶ್ಯಾ, ಇಂಡೋನೇಶ್ಯಾ, ರಶ್ಯಾದ ದುಡಿಯುವ ಜನರೊಂದಿಗೆ ಕೇಳುತ್ತಿರುವ ಪ್ರಶ್ನೆ.

ತನ್ನ ತೈಲ ಸಂಪತ್ತನ್ನೇ ಒತ್ತೆಯಿಟ್ಟ ಮೆಕ್ಸಿಕೋ 'ಮಾದರಿ'!

ಡಿಸೆಂಬರ್ 20, 1994. ಹೊಸದಾಗಿ ಅಧ್ಯಕ್ಷರಾಗಿ ಚುನಾಯಿತರಾದ ಅರ್ನೆಸ್ಟೋ ಝೆಡಿಲ್ಲೋ ಮೆಕ್ಸಿಕೋದ ನಾಣ್ಯ ಪೆಸೋವನ್ನು 13% ಅಪಮೌಲ್ಯಗೊಳಿಸುವ ನಿರ್ಧಾರ ಪ್ರಕಟಿಸಿದರು. ಮುಂದಿನ ಎರಡು ದಿನಗಳಲ್ಲಿ 500 ಕೋಟಿ ಡಾಲರುಗಳ ವಿದೇಶಿ ಬಂಡವಾಳ ಮೆಕ್ಸಿಕೋದಿಂದ ಪಲಾಯನ ಮಾಡಿತು. ಪರಿಣಾಮವಾಗಿ ಮೆಕ್ಸಿಕೋ ನಾಣ್ಯದ ಮೌಲ್ಯ ಪಾತಾಳಕ್ಕೆ ಇಳಿಯಲಾರಂಭಿಸಿತು. ಒಂದೇ ತಿಂಗಳೊಳಗೆ ಮೆಕ್ಸಿಕೋ ಶೇರು ಮಾರುಕಟ್ಟೆ ಕುಸಿದು ತನ್ನ ಅರ್ಧದಷ್ಟು ಮೌಲ್ಯ ಕಳಕೊಂಡಿತು. ಸುತ್ತ ಮುತ್ತಲಿನ ದೇಶಗಳ ಶೇರು ಮಾರುಕಟ್ಟೆಗಳೂ ಕುಸಿದವು. ಡಾಲರಿಗೆ 3.5 ಪೇಸೋ ಇದ್ದದ್ದು ಮಾರ್ಚ್ 1995 ರ ವೇಳೆಗೆ 7.5 ಪೆಸೋಗಿಳಿಯಿತು. ಇನ್ನೇನು ಮೆಕ್ಸಿಕೋಗೆ ತನ್ನ ವಿದೇಶಿ ಸಾಲ ತೀರಿಸಲಾಗದೆ ದಿವಾಳಿಯೇಳುವ ಪರಿಸ್ಥಿತಿ ಬಂದು ಬಿಟ್ಟಿತು. ಮೆಕ್ಸಿಕೋ ಸರಕಾರ 290 ಕೋಟಿ ಡಾಲರುಗಳ ಸಾಲಪತ್ರ ಹೊರಡಿಸಿದರೂ ಪ್ರಯೋಜನವಾಗಲಿಲ್ಲ. ಅಮೆರಿಕಾವನ್ನೇ ಅಂಗಲಾಚಿತು ಅದು. ಐ.ಎಂ.ಎಫ್.-ವಿಶ್ವ ಬ್ಯಾಂಕ್ ಮತ್ತು ತನ್ನಂತ ಇತರ ಶ್ರೀಮಂತ ದೇಶಗಳಿಂದ 5000 ಕೋಟಿ ಡಾಲರುಗಳ ಅಂತರ್‌ರಾಷ್ಟ್ರೀಯ ಸಾಲದ ವ್ಯವಸ್ಥೆ ಮಾಡಿತು. ಅದಕ್ಕಾಗಿ ಮೆಕ್ಸಿಕೋದ ತೈಲ ಸಂಪತ್ತುಗಳನ್ನು ಒತ್ತೆಯಿಟ್ಟುಕೊಂಡಿತು. ಪ್ರತಿಯಾಗಿ ಮೆಕ್ಸಿಕೋ ಸರ್ಕಾರ ಬಡ ಮೆಕ್ಸಿಕನ್ನರ ಮೇಲೆ ಪ್ರಹಾರ ಮಾಡಲಾರಂಭಿಸಿತು. ಎರಡೇ ತಿಂಗಳಲ್ಲಿ ಏಳೂವರೆ ಲಕ್ಷ ಮೆಕ್ಸಿಕನ್ನರು ಕೆಲಸ ಕಳಕೊಂಡರು. ಕೆಲಸ ಉಳಿಸಿಕೊಂಡ ಕಾರ್ಮಿಕರ ವೇತನಗಳು 30% ರಷ್ಟು ಇಳಿದವು.

ಏಕೆ ಹೀಗಾಯಿತು? ಮೆಕ್ಸಿಕೋದ ಹಣಕಾಸು ಪರಿಸ್ಥಿತಿ ಅಷ್ಟು ಹದಗೆಟ್ಟಿತ್ತೇ? ಖಂಡಿತಾ ಇಲ್ಲ. ಅದುವರೆಗೆ ಐ.ಎಂ.ಎಫ್. ವಿಶ್ವ ಬ್ಯಾಂಕುಗಳು ಮೆಕ್ಸಿಕೋದ್ದು 'ಯಶಸ್ಸಿನ ಗಾಥೆ' ಎಂದು ಹಾಡಿಹೊಗಳುತ್ತಿದ್ದರು. ಸುತ್ತಲಿನ ಲ್ಯಾಟಿನ್ ಅಮೆರಿಕಾದ ದೇಶಗಳು ಈ ಮಾದರಿಯನ್ನು ಅನುಸರಿಸಬೇಕು ಎಂದು ಹೇಳುತ್ತಿದ್ದರು.

ಮೆಕ್ಸಿಕೋ ಸರಕಾರ ಐ.ಎಂ.ಎಫ್-ವಿಶ್ವಬ್ಯಾಂಕ್ ಸಲಹೆಗಳ ಪ್ರಕಾರ ಆರಂಭಿಸಿದ ನವ- ಉದಾರೀಕರಣವಾದಿ ಧೋರಣೆಗಳಿಂದಾಗಿ 1990-93ರ ನಡುವೆ 9000 ಕೋಟಿ ಡಾಲರುಗಳಷ್ಟು ವಿದೇಶಿ ಬಂಡವಾಳ ಮೆಕ್ಸಿಕೋಗೆ ಹರಿದು ಬಂತು. 1988 ರಿಂದ 1994 ರ ನಡುವೆ ಒಟ್ಟು ಆಂತರಿಕ ಉತ್ಪಾದನೆ 3.1% ದರದಲ್ಲಿ ಏರಿತ್ತು. ಹಣದುಬ್ಬರ 145% ದಿಂದ 6% ಕ್ಕಿಳಿದಿತ್ತು. ವಿದೇಶಿ ಹೂಡಿಕೆದಾರರು ಮೆಕ್ಸಿಕೋ ಅರ್ಥಿಕದ ಬಗ್ಗೆ ಅಪಾರ ವಿಶ್ವಾಸ ಹೊಂದಿದ್ದರು. ಆದರೂ ಹೀಗಾಯಿತು- ಇದ್ದಕ್ಕಿದ್ದಂತೆ.

ಇದಕ್ಕೆ ಕಾರಣ ರಪ್ತು - ಆಧಾರಿತ ನವ-ಉದಾರವಾದಿ ಮಾರುಕಟ್ಟೆಯ ನೀತಿಗಳು ಹಾಗೂ ಹಣಕಾಸು ಬಂಡವಾಳದ ಜಾಗತೀಕರಣ. ಮೆಕ್ಸಿಕೋಗೆ "ವಿಶ್ವಾಸ"ದಿಂದ ಹರಿದು ಬಂದ ಬಂಡವಾಳ ದೇಶಕ್ಕೆ ಕಾರ್ಖಾನೆಗಳು, ಯಂತ್ರಗಳ ರೂಪದಲ್ಲಿ ಸ್ಥಿರಾಸ್ತಿಗಳನ್ನು ಒದಗಿಸಲು ಬಂದಿರಲಿಲ್ಲ, ಬೇಗನೇ ಆದಷ್ಟು ಲಾಭ ಸೂರೆಗೊಳ್ಳಲು ಶೇರು ಮಾರುಕಟ್ಟೆಗೆ ಬಂದ ಹಣವಾಗಿತ್ತು. 'ವಿಶ್ವಾಸ' ಹಾರಿಹೋಗುವ ಪರಿಸ್ಥಿತಿ ಉಂಟಾದಾಗ ಅಷ್ಟೇ ನಿಷ್ಕರುಣೆಯಿಂದ ಮೆಕ್ಸಿಕೋದ ಆರ್ಥಿಕವನ್ನು ಹಾಳುಗೆಡವಿ ಆ ಬಂಡವಾಳ ಹಿಂದಕ್ಕೆ 'ಹಾರಿ ಹೋಯಿತು'.

ದೇಶಕ್ಕೆ ಬಂದಿದ್ದ ಈ ವಿದೇಶೀ ಹಣವನ್ನು ಮೆಕ್ಸಿಕೋದ ಆಳುವ ವರ್ಗ ಭೋಗವಸ್ತುಗಳ ಆಮದಿಗೆ ಬಳಸಿತು. ಇದರಿಂದ ಹೆಚ್ಚಿದ ರಫ್ತಿನಿಂದಾಗಿ ಆಮದು ಖರ್ಚುಕೂಡಾ ಹೆಚ್ಚಿತು- ಇನ್ನಷ್ಟು ತ್ವರಿತವಾಗಿ ಹೆಚ್ಚಿತು. ಎಷ್ಟೆಂದರೆ 1994 ರ ವೇಳೆಗೆ ವ್ಯಾಪಾರ ಕೊರತೆ 3000 ಕೋಟಿ ಡಾಲರುಗಳಿಗೇರಿತು. ಇದು ದೇಶದ ಒಟ್ಟು ಆಂತರಿಕ ಉತ್ಪಾದನೆಯ 8% ವಾಗಿತ್ತು. ಇದು ಅಭೂತಪೂರ್ವ ಕೊರತೆ. ಈ ಕೊರತೆ ನೀಗಿಸಲು ಶೇರು ಮಾರುಕಟ್ಟೆಗೆ ಬಂದ ವಿದೇಶಿ ಹಣದ 72% ರಷ್ಟನ್ನು ಸರಕಾರ ಬಳಸಲಾರಂಭಿಸಿತು. ಅತ್ತ ಮಾರುಕಟ್ಟೆಗಳು ಅನುಭೋಗದ ಸರಕುಗಳಿಂದ ತುಂಬಿ ಹೋಗಿದ್ದವು. ಇವನ್ನು ಕೊಳ್ಳಲು ಉದಾರವಾಗಿ ಸಾಲಗಳನ್ನೂ ನೀಡಲಾಯಿತು. ಮೆಕ್ಸಿಕನ್ನರ, ಅವರ ಬ್ಯಾಂಕುಗಳ ಸಾಲದ ಹೊರೆ ಏರಿತು. ಇಡೀ ಮೆಕ್ಸಿಕೋ ಕೊಳ್ಳುಬಾಕ ಸಂಸ್ಕೃತಿಗೆ ಶರಣಾಗಿ ಹಾಸಿಗೆಗಿಂತಲೂ ಹೆಚ್ಚು ತನ್ನ ಕಾಲು ಚಾಚಿತ್ತು.

ಈ ವೇಳೆಗೆ ಎರಡು ರಾಜಕೀಯ ಘಟನೆಗಳು ನಡೆದವು. ಅಮೆರಿಕಾದಲ್ಲಿ ಬಡ್ಡಿದರ ಹೆಚ್ಚಲಾರಂಭಿಸಿತು. ಇತ್ತ ಜನವರಿ 1994 ರಲ್ಲಿ ದಕ್ಷಿಣ ಮೆಕ್ಸಿಕೋದ ಚಿಯಾಪಾಸ್‌ನಲ್ಲಿ ಉದಾರೀಕರಣದ ನೀತಿಗಳಿಂದ ಸೋತು ಸುಣ್ಣವಾಗಿದ್ದ ರೈತರು ಝಪಾಟಿಸ್ಟಾ ಎಂಬ ಸಂಘಟನೆಯ ನೇತೃತ್ವದಲ್ಲಿ ದಂಗೆಯೆದ್ದರು. ಈ ವೇಳೆಗೆ ಹಿಂದೆ ಬಹಳ ದಿನ ಮೆಕ್ಸಿಕೋವನ್ನಾಳಿದ್ದ ಪಕ್ಷ ಪಿ.ಆರ್.ಐ.ನಿಂದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಅಭ್ಯರ್ಥಿಯ ಕೊಲೆಯಾಯಿತು (ಮಾರ್ಚ್ 1994). ಆರುತಿಂಗಳೊಳಗೆ ಇದೇ ಪಕ್ಷದ ಪ್ರಧಾನ ಕಾರ್ಯದರ್ಶಿಯು ಕೊಲೆಯಾಯಿತು. ಚಿಯಾಪಾಸ್‌ನಲ್ಲಿ ವರ್ಷಾಂತ್ಯದ ವೇಳೆಗೆ ಮತ್ತೆ ಗಲಭೆ ಭುಗಿಲೆದ್ದಿತು. ಬೇಗನೇ ಗರಿಷ್ಟ ಲಾಭ ಬಾಚಿಕೊಳ್ಳಲು ಬಂದಿದ್ದ ವಿದೇಶಿ ಹೂಡಿಕೆದಾರರು ಇವೆಲ್ಲದರಿಂದ ಹೆದರಿ ತಮ್ಮ ಬಂಡವಾಳವನ್ನು ಇದ್ದಕ್ಕಿದ್ದಂತೆ ಹೆಚ್ಚು ಬಡ್ಡಿ ಕೊಡುತ್ತಿದ್ದ ಅಮೆರಿಕಾಕ್ಕೆ ಒಯ್ಯಲಾರಂಭಿಸಿದರು. ಎರಡೇ ದಿನಗಳಲ್ಲಿ 500 ಕೋಟಿ ಡಾಲರುಗಳು ಮೆಕ್ಸಿಕೋದಿಂದ ಹೊರಗೆ ಹೋಯಿತು. ಸಿರಿವಂತ ಮೆಕ್ಸಿಕನ್ನರು ತಮ್ಮ ಹಣವನ್ನು ಡಾಲರಿಗೆ ಬದಲಿಸಿಕೊಂಡರು. ಮೆಕ್ಸಿಕೋ ನಾಣ್ಯ ಪೆಸೋದ 13% ಅಪಮೌಲ್ಯವಾಯಿತು. ವಿದೇಶಿಯರ ಹಣವನ್ನೇ ಆಧರಿಸಿದ್ದ ಮೆಕ್ಸಿಕೋದ ಅರ್ಥಿಕ ಕುಸಿಯಿತು. ಜತೆಗೆ ಐ.ಎಂ.ಎಫ್- ವಿಶ್ವ ಬ್ಯಾಂಕಿನ ಈ 'ಮಾದರಿ'ಯೂ ಕುಸಿಯಿತು.

ಆದರೆ ಮಾರುಕಟ್ಟೆ ಶಕ್ತಿಗಳು ಉಂಟುಮಾಡಿದ ಈ ಬಿಕ್ಕಟ್ಟಿಗೆ ಬೆಲೆ ತೆತ್ತದ್ದು ಆ ಮಾರುಕಟ್ಟೆ ಶಕ್ತಿಗಳಲ್ಲ- ಮೆಕ್ಸಿಕೋದ ಕಾರ್ಮಿಕರು, ಬಡಜನರು. 21 ಲಕ್ಷ ಜನ ಕಡು ಬಡತನಕ್ಕಿಳಿದರು, 4 ಲಕ್ಷ ಜನ ಬಡತನದ ರೇಖೆ ಕೆಳಕ್ಕೆ ತಳ್ಳಲ್ಪಟ್ಟರು. ಗ್ರಾಮೀಣ ಮೆಕ್ಸಿಕೋದಲ್ಲಿ ಪೋಷಕಾಂಶ ಕೊರತೆಯಿಂದ ನರಳುವ ಮಕ್ಕಳ ಸಂಖ್ಯೆ 7.2% ದಿಂದ 1998 ರಲ್ಲಿ 15.1% ಕ್ಕೇರಿತು. ಮೆಕ್ಸಿಕೋ ಸಾಮಾಜಿಕ ಘರ್ಷಣೆಗಳ ತಾಣವಾಯಿತು. ○

ಥಾಯ್ಲೆಂಡ್ ಬಿಕ್ಕಟ್ಟು- ರಫ್ತು ಆಧಾರಿತ 'ಮಾದರಿ' ಯ ಕುಸಿತ

ಮೆಕ್ಸಿಕೋ ಬಿಕ್ಕಟ್ಟಿನ ಎರಡು ವರ್ಷಗಳ ನಂತರ 1997 ರ ಮಧ್ಯಭಾಗದಲ್ಲಿ ಆಗ್ನೇಯ ಮತ್ತು ಪೂರ್ವ ಏಷ್ಯಾದ ದೇಶಗಳೂ ಇಂತಹ ಬಿಕ್ಕಟ್ಟಿನ ಸುಳಿಯಲ್ಲಿ ಸಿಲುಕಿಕೊಂಡವು. ಥಾಯ್ಲೆಂಡ್‌ನಲ್ಲಿ ಆರಂಭವಾದ ಬಿಕ್ಕಟ್ಟು ಮಲೇಶ್ಯಾ, ಇಂಡೋನೇಶ್ಯಾ, ಫಿಲಿಫೈನ್ಸ್ ಮತ್ತು ದಕ್ಷಿಣ ಕೋರಿಯಾವನ್ನು ತಟ್ಟಿತು- ಬಲವಾಗಿಯೆ ತಟ್ಟಿತು. ಥಾಯ್ಲೆಂಡಿನ ನಾಣ್ಯ ಬಾಹ್ತ್‌ನ ಅಪಮೌಲ್ಯದೊಂದಿಗೆ ಆರಂಭವಾದ ಇದು ಒಂದು ದೊಡ್ಡ ಹಣಸಾಕು ಬಿಕ್ಕಟ್ಟಾಗಿ ಮಾರ್ಪಟ್ಟಿತು.

ಒಂದು ವರ್ಷದ ಹಿಂದೆಯಷ್ಟೇ ಐಎಂಎಫ್ ಮತ್ತು ವಿಶ್ವಬ್ಯಾಂಕ್ ಮಾತ್ರವಲ್ಲ ವಿಶ್ವಸಂಸ್ಥೆಯ ವ್ಯಾಪಾರ ಸಂಘಟನೆ ಅಂಕ್ಟಾಡ್(UNCTAD) ಕೂಡಾ ಈ ದೇಶಗಳು ಕಮ್ಮಿ ಆದಾಯದ ದೇಶಗಳಿಗೊಂದು ಮಾದರಿಯೆಂದು ಡಂಗುರ ಸಾರಿದ್ದವು. ಈ ದೇಶಗಳ 'ಯಶಸ್ಸ'ನ್ನು ಬೇರೆ ದೇಶಗಳಲ್ಲೂ ಪುನರಾವರ್ತಿಸಲು ಸಾಧ್ಯ ಎಂದು ಅವು ಸಲಹೆ ಮಾಡಿದ್ದವು.

ಈ ಸಲಹೆ ಅವರ ಮಟ್ಟಿಗೆ ಸಹಜವೂ ಅನಿಸಿತ್ತು. ಏಕೆಂದರೆ ಅದುವರೆಗೆ ಈ ದೇಶಗಳ, ಮುಖ್ಯವಾಗಿ ಥಾಯ್ಲೆಂಡಿನ ಆರ್ಥಿಕ ಸೂಚ್ಯಂಕಗಳೆಲ್ಲಾ ಚೆನ್ನಾಗಿಯೆ ಇದ್ದವು. 1980 ರ ದಶಕದಲ್ಲಿ ಥಾಯ್ಲೆಂಡ್ ರಫ್ತು ಆಧಾರಿತ ಕಾರ್ಯತಂತ್ರವನ್ನು ಅನುಸರಿಸಲಾರಂಭಿಸಿದ್ದರಿಂದ (ಅದರ ಮೊದಲು ಆ ದೇಶ ಆಮದಿನ ಬದಲಿ ಕಾರ್ಯತಂತ್ರವನ್ನು ಅಂದರೆ ಆಮದು ಮಾಡಬೇಕಾಗಿರುವ ಸರಕುಗಳ ಉತ್ಪಾದನೆಯನ್ನು ದೇಶದಲ್ಲಿಯೇ ಅಭಿವೃದ್ಧಿಪಡಿಸುವ ತಂತ್ರ)ಅನುಸರಿಸಿತ್ತು. 1995-96ರ ಅವಧಿಯಲ್ಲಿ ಒಟ್ಟು ರಾಷ್ಟ್ರೀಯ ಉತ್ಪಾದನೆ 9.8% ವಾರ್ಷಿಕ ದರದಲ್ಲಿ ಹೆಚ್ಚಿತ್ತು, ವಿದೇಶೀ ಸಾಲಭಾರ ಕ್ರಮೇಣ ಕಡಿಮೆಯಾಗಿತ್ತು, ಹಣಕಾಸು ಕೊರತೆಯಿರಲಿಲ್ಲ. ಬದಲಿಗೆ 1995 ರಲ್ಲಿ 2.5% ಮಿಗುತೆಯಿತ್ತು. ಒಟ್ಟು ರಾಷ್ಟ್ರೀಯ ಉತ್ಪನ್ನಕ್ಕೆ ಹೋಲಿಸಿದರೆ ರಫ್ತು ಹೆಚ್ಚುತ್ತಾ ಬಂದು 1995 ರಲ್ಲಿ ಅದು 41.5% ಪ್ರಮಾಣ ತಲುಪಿತು. ಐದೂವರೆ ತಿಂಗಳ ಅವಧಿಗೆ ಬೇಕಾದಷ್ಟು ವಿದೇಶೀ ವಿನಿಮಯವಿತ್ತು. ಆ ದೇಶದ ನಾಣ್ಯ ಬಾಹ್ತ್ ಕೆಲವೇ ತಿಂಗಳಲ್ಲಿ ಸಟ್ಟಾಕೋರ ಧಾಳಿಗೆ ಒಳಗಾಗುತ್ತದೆ ಎಂಬ ಸಂದೇಹವೂ ಯಾರಿಗೂ ಇರಲಿಲ್ಲ. ಕೃಷಿ ಉತ್ಪಾದನೆ ಮತ್ತು ವ್ಯಾಪಾರ ಬಾಕಿ ಮಾತ್ರ ಕಳವಳಕಾರಿಯಾಗಿತ್ತು. ಆದರೆ ಇವು ಅಲ್ಲಿನ ಶೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸುವವರನ್ನು ಬಾಧಿಸಿರಲಿಲ್ಲ.

ಸಟ್ಟಾಕೋರರ ಧಾಳಿ ನಡೆದೇ ಬಿಟ್ಟಿತು.

1996 ರಲ್ಲಿ ರಫ್ತಿನಲ್ಲಿ ಸ್ಥಗಿತತೆ ಕಂಡುಬಂತು. ವಿಶ್ವ ಆರ್ಥಿಕದಲ್ಲಿ ಇಲೆಕ್ಟ್ರಾನಿಕ್ಸ್ ಮಾರುಕಟ್ಟೆಯಲ್ಲಿ ಬೇಡಿಕೆ ಇಳಿತ, ಕೃಷಿ ರಫ್ತುಗಳಿಗೆ ಅಮೆರಿಕನ್, ಯೂರೋಪಿಯನ್ ಮಾರುಕಟ್ಟೆಗಳಲ್ಲಿ

ಪುಟ 7ನೋಡಿ

ಇರಿಯಾದ ದಕ್ಷಿಣ ಕೋರಿಯಾದ 'ಹುಲಿ'


ಥಾಯ್ಲೆಂಡಿನ ಬಾಹ್ತ್ ಮೇಲೆ ಅಂತರ್‍ರಾಷ್ಟ್ರೀಯ ಸಟ್ಟಾಕೋರರ ಧಾಳಿಯ ಪರಿಣಾಮ ಸಾಂಕ್ರಾಮಿಕ ರೋಗದಂತೆ ದಕ್ಷಿಣ ಪೂರ್ವ ಮತ್ತು ಪೂರ್ವ ಏಶ್ಯಾದ ದೇಶಗಳನ್ನು ವ್ಯಾಪಿಸಿತು. ಇದು ಅತಿ ಹೆಚ್ಚಾಗಿ ತಟ್ಟಿದ್ದು ಇಂಡೊನೇಶ್ಯಾ, ಮಲೇಶ್ಯಾ, ಫಿಲಿಫೈನ್ಸ್ ಮತ್ತು ದಕ್ಷಿಣ ಕೊರಿಯಾವನ್ನು. 1980 ರ ದಶಕದಲ್ಲಿ ತಮ್ಮ ಹಣಕಾಸು ವಲಯವನ್ನು ಉದಾರೀಕರಿಸಿದ, ಜಾಗತೀಕರಣಕ್ಕೆ ತೆರೆದಿದ್ದ ದೇಶಗಳಿವು. ದಕ್ಷಿಣ ಕೊರಿಯಾದ ಅನುಭವವನ್ನು ನೋಡೋಣ.

ಏಶ್ಯಾದ 'ಪವಾಡ' ಎನಿಸಿಕೊಂಡ ದಕ್ಷಿಣ ಕೊರಿಯಾದ ನಾಣ್ಯ ವೊನ್‌ನ ಕುಸಿತ ಹಲವರನ್ನು ಆಶ್ಚರ್ಯಚಕಿತಗೊಳಿಸಿತು. ಜುಲೈ 1997 ರಿಂದ ಜನವರಿ 1998 ರ ನಡುವೆ ಅದರ ಬೆಲೆ ಅರ್ಧಕ್ಕಿಂತಲೂ ಕಮ್ಮಿಯಾಯಿತು. ಶ್ರೀಮಂತ ದೇಶಗಳ ಕ್ಲಬ್ ಎನಿಸಿದ ಒ-ಇ-ಸಿ-ಡಿ ಗೆ ಪ್ರವೇಶ ಗಿಟ್ಟಿಸಿದ ಪ್ರಥಮ ಏಶ್ಯನ್ ದೇಶ(ಜಪಾನಿನ ನಂತರ) ಎನಿಸಿದ ಈ ದೇಶದ ಹಣಕಾಸು ಪರಿಸ್ಥಿತಿ ಇಷ್ಟೊಂದು ಕುಸಿಯಿತೇಕೆ?

ಈ ದೇಶ ಬಂಡವಾಳವನ್ನು ರಿಯಲ್ ಎಸ್ಟೇಟ್‌ನಂತಹ ಸಟ್ಟಾ ವ್ಯವಹಾರಗಳಲ್ಲಿ ತೊಡಗಿಸಲಿಲ್ಲ. ಆದರೆ ವಿದೇಶೀ ಖಾಸಗಿ ಬ್ಯಾಂಕುಗಳಿಂದ, ಹಣಕಾಸು ಸಂಸ್ಥೆಗಳಿಂದ, ಮುಖ್ಯವಾಗಿ ಯೂರೋಪಿಯನ್ ಬ್ಯಾಂಕುಗಳಿಂದ ಅಲ್ಪಾವಧಿ ಸಾಲಗಳ ಮೇಲೆ ವಿಪರೀತ ಅವಲಂಭಿಸಿದ್ದೇ ಅದರ ದೊಡ್ಡ ತಪ್ಪು ಎಂದು ಈಗ ಹೇಳಲಾಗುತ್ತಿದೆ. ಎರಡೂವರೆ ವರ್ಷಗಳಲ್ಲೇ ಈ ಸಾಲ ದ್ವಿಗುಣ ಹೊಂದಿತು. ಇವುಗಳಲ್ಲಿ 700 ಕೋಟಿ ಡಾಲರುಗಳಷ್ಟನ್ನು ಸಾಲವನ್ನು 1997 ರಿಂದ 1998 ರ ಮಧ್ಯಭಾಗದೊಳಗೆ ತೀರಿಸಲೇ ಬೇಕಾಗಿತ್ತು. ದೇಶದ ಬಹಳಷ್ಟು ದೊಡ್ಡ ಕಂಪನಿಗಳು ದಿವಾಳಿಯ ಅಂಚಿಗೆ ಬಂದು ನಿಂತವು. ಜನವರಿ 1997 ರಲ್ಲಿ ಪ್ರಮುಖ ಕಂಪನಿ ಹಾನ್ಬೋಸ್ಟೀಲ್ 600 ಕೋಟಿ ಡಾಲರುಗಳ ಸಾಲದಿಂದ ಕುಸಿಯಿತು. ಮಾರ್ಚ್‌ನಲ್ಲಿ ಸಮ್ಮೀ ಸ್ಟೀಲ್ ಕಂಪನಿ ಕುಸಿಯಿತು. ಜುಲೈನಲ್ಲಿ ದೇಶದ ಮೂರನೇ ಅತಿದೊಡ್ಡ ಕಾರು ಕಂಪನಿ 'ಕಿಯಾ' ತುರ್ತು ಸಾಲಕ್ಕೆ ಕೈಯೊಡ್ಡಿತು. ಬ್ಯಾಂಕುಗಳು ಸಾಲ ನಿರಾಕರಿಸಿದವು. ದಕ್ಷಿಣ ಕೊರಿಯಾದ ಕ್ರೆಡಿಟ್‌ರೇಟಿಂಗ್ ಇಳಿಯಿತು. ದೇಶದ ನಾಣ್ಯ ವೊನ್‌ನ ಬೆಲೆಯೂ ಕುಸಿಯಲಾರಂಭಿಸಿತು. ಅಧ್ಯಕ್ಷ ಕಿಮ್ ಯಂಗ್ ಸಾಮ್ ಹಣಕಾಸು ಮಂತ್ರಿಯನ್ನು ವಜಾ ಮಾಡಿ ಐಎಂಎಫ್ ನ ಅಧಿಕಾರಿ ಲಿಮ್ ಚಾಂಗ್ ಯೂಲ್‌ನನ್ನು ಹಣಕಾಸು ಮಂತ್ರಿಯನ್ನಾಗಿ ನೇಮಿಸಿದರು. ಈತ ಹಣಕಾಸು ಮಾರುಕಟ್ಟೆಯನ್ನು ಮತ್ತಷ್ಟು ತೆರೆಯುವ 'ಉದಾರ' ನೀತಿಗಳನ್ನು ಘೋಷಿಸಿದ - 2000 ಕೋಟಿ ಡಾಲರುಗಳ ಕಠಿಣಶರತ್ತುಗಳ ಐಎಂಎಫ್ ಸಾಲಕ್ಕೆ ದೇಶ ಕೈಯೊಡ್ಡುವಂತಾಯಿತು. ಆದರೆ ವೊನ್‌ನ ಕುಸಿತ ನಿಲ್ಲಲಿಲ್ಲ.

ಐಎಂಎಫ್‌ನ 'ಪರಿಹಾರ ಸಾಲ' ದ ಶರತ್ತುಗಳ ಪರಿಣಾಮವಾಗಿ ಇನ್ನಷ್ಟು ಉದ್ದಿಮೆಗಳು ದಿವಾಳಿಯಾಗುತ್ತಿವೆ. ಇದರಿಂದ 1 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಕಳಕೊಂಡಿದ್ದಾರೆ. ಲಕ್ಷಾಂತರ ಕಾರ್ಮಿಕರು ಬೀದಿಗಿಳಿದಿದ್ದಾರೆ. ○

ಸರ್ಕಾರ ಬದಲಾವಣೆಗಳಿಂದಲೇ ಆರ್ಥಿಕ ನೀತಿ ಬದಲಾಗದು ಜನತೆಯ ಹೋರಾಟದಿಂದ ಮಾತ್ರ ಇದು ಸಾಧ್ಯ



ಎಸ್.ಸೂರ್ಯನಾರಾಯಣ ರಾವ್

ದೇಶದ ಕೋಟ್ಯಾಂತರ ಜನಸಾಮಾನ್ಯರು - ಕಾರ್ಮಿಕರು, ನೌಕರರು, ರೈತರು, ಕೃಷಿ ಕೂಲಿಕಾರರು, ಮಹಿಳೆಯರು, ವಿದ್ಯಾರ್ಥಿ-ಯುವಜನ ಈಗ ಅನುಭವಿಸುತ್ತಿರುವ ಸಂಕಟಗಳು ಸರ್ಕಾರ ಬದಲಾದ ಮಾತ್ರಕ್ಕೆ ಪರಿಹಾರವಾಗವು. ಜಗತ್ತಿನಲ್ಲಾಗಿರುವ ಬದಲಾವಣೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ನೀತಿಗಳು ಬದಲಾಗುವುದೇ ಎಂದು ನೋಡಬೇಕು. ಜನತೆಯ ಹೋರಾಟವಿದ್ದರೆ ಈ ನೀತಿಯನ್ನು ಬದಲಿಸಲು ಸಾಧ್ಯ - ಇದೇ ಮುಂಬರುವ ಡಿಸೆಂಬರ್ 11 ರ ಸಾರ್ವತ್ರಿಕ ಮುಷ್ಕರ ಹಾಗೂ ಪ್ರತಿಭಟನೆಯ ಮಹತ್ವ ಎನ್ನುತ್ತಾರೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ. ಸೂರಿ. ಡಿಸೆಂಬರ್ 11ರ ಕಾರ್ಯಾಚರಣೆಗೆ ರಾಜ್ಯದ ಶ್ರಮಿಕರೂ ಅಣಿಯಾಗುತ್ತಿರುವ ಸಂದರ್ಭದಲ್ಲಿ ಈ ಹಿರಿಯ ಕಾರ್ಮಿಕ ಮುಖಂಡರೊಡನೆ 'ಐಕ್ಯರಂಗ' ದ ಸಂದರ್ಶನ.

● *1991 ರಿಂದ ಸರ್ಕಾರ ಬದಲಾದರೂ ಹೊಸ ಆರ್ಥಿಕ ನೀತಿ ಮುಂದುವರಿಯುತ್ತಿದೆಯಲ್ಲ ಏಕೆ?*

ಕಾಂ.ಸೂರಿ.: ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಕೇಂದ್ರದಲ್ಲಿ ಇರುವುದು ಬಂಡವಾಳಿಗರ, ಜಮೀನ್ದಾರರ ಒಂದು ಸರ್ಕಾರ. ಅದರ ನಾಯಕತ್ವ ಹಿರಿಯ ಬಂಡವಾಳಿಗರ ಕೈಯಲ್ಲಿದೆ. ಇವರು ತಾಂತ್ರಿಕತೆಯನ್ನು ಉಪಯೋಗಿಸಿಕೊಂಡು ಐಎಂಎಫ್ ಮತ್ತು ವಿಶ್ವಬ್ಯಾಂಕ್‌ನ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ.

ಸೋವಿಯತ್ ಒಕ್ಕೂಟದ ಕುಸಿತದ ಪರಿಣಾಮವಾಗಿ ಕಮ್ಯುನಿಸ್ಟ್ ಸಿದ್ಧಾಂತ ಬಿದ್ದುಹೋಗಿದೆ, ಆದಕ್ಕೆ ಬಂಡವಾಳಶಾಹಿ ವ್ಯವಸ್ಥೆಯೇ ಪರಿಹಾರ ಎಂದು ಬಿಂಬಿಸುತ್ತಿವೆ. ಅಮೆರಿಕಾದ ಒಲವು ಮಾರುಕಟ್ಟೆ ವ್ಯವಸ್ಥೆಗೆ ಹೊಂದಿಕೊಳ್ಳಬೇಕೆಂಬುದೇ. ಐಎಂಎಫ್, ವಿಶ್ವಬ್ಯಾಂಕ್ ಆಶಯಗಳಿಗೆ ಭಾರತ ಹಾಗೂ ಇತರ ದೇಶಗಳ ಆಳುವ ವರ್ಗಗಳು ತಲೆಬಾಗಿವೆ.

ನರಸಿಂಹರಾವ್ ಆರ್ಥಿಕ ಧೋರಣೆಗಳಿಂದ ಜನಸಾಮಾನ್ಯರ ಸಮಸ್ಯೆಗಳ ಪರಿಹಾರ ವಾಗುವುದಕ್ಕೆ ಬದಲು ಮತ್ತಷ್ಟು ಉಲ್ಬಣ ಗೊಂಡಿತು. ಕಾರ್ಮಿಕ ವರ್ಗ ಈ ನೀತಿಯುನ್ನು ಪ್ರತಿಭಟಿಸಿತು. ಇದರ ಪರಿಣಾಮ ಕಾಂಗ್ರೆಸ್ ದಯನೀಯ ಸೋಲನ್ನನು ಭವಿಸಿತು.

ಎಡಪಕ್ಷಗಳು 3-4 ರಾಜ್ಯಗಳಲ್ಲಿ ಬಿಟ್ಟರೆ ಬೇರೆ ರಾಜ್ಯಗಳಲ್ಲಿ ಪ್ರಬಲವಾಗಿರದಿದ್ದರಿಂದ ಬಿಜೆಪಿ ಅತೃಪ್ತಿಯನ್ನು ಉಪಯೋಗಿಸಿ 1996 ರ ಚುನಾವಣೆಯಲ್ಲಿ ದೊಡ್ಡ ಪಕ್ಷವಾಗಿ ಬಂದು ಅಧಿಕಾರ ಮಾಡಲು ರಾಷ್ಟ್ರಾಧ್ಯಕ್ಷರಿಗೆ ಮನವಿ ಸಲ್ಲಿಸಿತು. ರಾಷ್ಟ್ರಾಧ್ಯಕ್ಷರು ಬಿಜೆಪಿ ಮುಖಂಡರು ಸಂಸತ್ತಿನಲ್ಲಿ ಬಹುಮತ ಸಾಬೀತುಪಡಿಸುವ ಮಾತನ್ನು ನಂಬಿ ಅಧಿಕಾರ ಸ್ವೀಕರಿಸಲು ಆಹ್ವಾನಿಸಿದರು. ಹೀಗಾಗಿ ವಾಜಪೇಯಿ ಪ್ರಧಾನಿಯಾದರು. ಲೋಕಸಭೆಯಲ್ಲಿ 2 ದಿನಗಳ ಕಾಲ ಭಾರೀ ಚರ್ಚೆ ನಡೆದು ಮತಕ್ಕೆ ಹಾಕುವ ಮೊದಲೇ ಬಹುಮತ ಸಾಬೀತು ಪಡಿಸುವುದಾಗಿ ತಿಳಿಸಿದ್ದ ವಾಜಪೇಯಿ ರಾಜಿನಾಮೆ ಸಲ್ಲಿಸಿದರು. ಇಂತಹ ಪರಿಸ್ಥಿತಿಯಲ್ಲಿ ಸಂಯುಕ್ತ ರಂಗ ಅಧಿಕಾರ ವಹಿಸಿಕೊಂಡಿತು. ಸಿಪಿಐ(ಎಂ) ಸಂಯುಕ್ತ ರಂಗ ಸರ್ಕಾರಕ್ಕೆ ಬೆಂಬಲ ನೀಡಿದರೂ ಸರ್ಕಾರದಲ್ಲಿ ಭಾಗವಹಿಸದಿರಲು ತೀರ್ಮಾನಿಸಿತು. ಅಷ್ಟೇ ಅಲ್ಲ ಐಎಂಎಫ್, ವಿಶ್ವಬ್ಯಾಂಕ್ ನೀತಿಯನ್ನು ವಿರೋಧಿಸುವುದಾಗಿಯೂ ಸ್ಪಷ್ಟಪಡಿಸಿತು.

ಸಂಯುಕ್ತ ರಂಗ ಸರ್ಕಾರದಲ್ಲಿ ಎಡ ಪಕ್ಷಗಳನ್ನು ಬಿಟ್ಟು ಎಲ್ಲಾ ಬಂಡವಾಳಶಾಹಿ ಪಕ್ಷಗಳು. ಐಎಂಎಫ್ ಒತ್ತಡಕ್ಕೆ ವಾಲಿದ್ದರಿಂದ ಅದೇ ನೀತಿ ಅನುಸರಿಸಬೇಕಾಯಿತು. ನರಸಿಂಹ ರಾಯರ ಕಾಲದಲ್ಲಿ ನಡೆದ ಹೋರಾಟಗಳು ಸಂಯುಕ್ತ ರಂಗ ಸರ್ಕಾರದ ಅವಧಿಯಲ್ಲಿ ಮುಂದುವರಿಯಲಿಲ್ಲ. ಜೈನ್ ಆಯೋಗದ ವರದಿಯ ನೆಪವೊಡ್ಡಿ ಕಾಂಗ್ರೆಸ್ ಬೆಂಬಲ ವಾಪಸ್ಸು ಪಡೆದಿದ್ದರಿಂದ ಮಧ್ಯಂತರ ಚುನಾವಣೆ ಅನಿವಾರ್ಯವಾಯಿತು.

ಮೇಲೇಳಿದ ಹಾಗೆ ಕಾಂಗ್ರೆಸ್ ಅನುಸರಿಸಿದ ನೀತಿ ಆ ಪಕ್ಷಕ್ಕೆ ಸೋಲನ್ನು ತಂದ ಹಾಗೆ ಸಂಯುಕ್ತ ರಂಗದ ಬಂಡವಾಳಶಾಹಿ ಪಕ್ಷಗಳು ಈ ನೀತಿಯನ್ನು ಮುಂದುವರಿಸಿದ್ದರಿಂದ ಜನರ ಅತೃಪ್ತಿಯನ್ನು ಉಪಯೋಗಿಸಿಕೊಂಡು ಬಿಜೆಪಿ ಪುನಃ ದೊಡ್ಡ ಪಕ್ಷವಾಗಿ ಆರಿಸಿ ಬಂದಿತು. ಆದರೆ ಬಿಜೆಪಿ ಒಂದಕ್ಕೇ ಬಹುಮತ ಇಲ್ಲವಾದ್ದರಿಂದ ಬೇರೆ ಭ್ರಷ್ಟ ಬಂಡವಾಳಶಾಹಿ ಜೊತೆಗೂಡಿ ಅಧಿಕಾರ ನಡೆಸುತ್ತಿದೆ.

ಬಿಜೆಪಿ ಲೋಕಸಭೆಯಲ್ಲಿ ವಿರೋಧ ಪಕ್ಷವಾಗಿದ್ದಾಗ ಜೀವವಿಮಾ ನಿಗಮವನ್ನು ವಿದೇಶಿ ಸಂಸ್ಥೆಗಳಿಗೆ ತೆರೆಯುವುದಕ್ಕೆ ಶೇರು ಮಾರಾಟಕ್ಕೆ ವಿರೋಧಿಸಿತು. ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವು ರಾಷ್ಟ್ರಗಳು ಆರ್ಥಿಕ ಬಿಕ್ಕಟ್ಟಿನಲ್ಲಿವೆ. ದಕ್ಷಿಣ ಪಶ್ಚಾದ ಹುಲಿಗಳೆಂದು ಹೆಸರುವಾಸಿಯಾದ ಜಪಾನ್, ಮಲೇಶಿಯಾ ಆರ್ಥಿಕ ಕುಸಿತದಿಂದ ಬಿಕ್ಕಟ್ಟು ಉಂಟಾಗಿದೆ. ಬಂಡವಾಳಶಾಹಿ ದೇಶಗಳಲ್ಲೂ (ಅಮೇರಿಕಾ ಬಿಟ್ಟು) ಬಿಕ್ಕಟ್ಟು ಇದೆ. ಆದ್ದರಿಂದ ಐಎಂಎಫ್-ವಿಶ್ವಬ್ಯಾಂಕ್ ತನ್ನ ಯೋಜನೆಯನ್ನು ಭಾರತದಲ್ಲಿ ಅನುಷ್ಠಾನಕ್ಕೆ ತರಬೇಕೆಂದು ಬಿರುಸಾದ ಒತ್ತಡ ಹೇರುತ್ತಿದೆ.

ಬಿಜೆಪಿ ಸರ್ಕಾರ ಪೋಖ್ರಾನ್ ಅಣುಸ್ಫೋಟದ ನಂತರ ಪಕ್ಷಕ್ಕೆ ಭಾರಿ ಅನುಕೂಲ ಆಗುವುದೆಂದು ಭಾವಿಸಿತು. ಆದರೆ ಆ ಆಸೆ ಕೈಗೂಡಲಿಲ್ಲ. ಕಾರಣ ಬಿಜೆಪಿ ಸರ್ಕಾರ ಮಂಡಿಸಿದ ಮುಂಗಡ ಪತ್ರದಲ್ಲಿ ನಮ್ಮ ದೇಶದ ಉದ್ದಿಮೆಗಳ ಶೇರುಗಳ ಶೇ 74 ರಷ್ಟನ್ನು ಇತರರಿಗೆ ಹಂಚಲಾಗುತ್ತಿದೆ ಮತ್ತು ಅವರು ಅನುಸರಿಸಿದ ಧೋರಣೆ ಬೆಲೆಗಳು ಏರುವುದಕ್ಕೆ ಕಾರಣವಾಯಿತು.

● *ಬಿಜೆಪಿಯು ಏಕೆ ಅದೇ ಆರ್ಥಿಕ ನೀತಿಯನ್ನು ಮುಂದುವರಿಸಿದೆ.*

ಕಾಂ. ಸೂರಿ.: ಬಿಜೆಪಿಯು ವ್ಯಾಪಾರಿಗಳನ್ನು ಪ್ರತಿನಿಧಿಸುವ ಪಕ್ಷವಾದ್ದರಿಂದ ಇತ್ತೀಚೆಗೆ ಕಾಂಗ್ರೆಸ್ ಶಕ್ತಿ ಕಮ್ಮಿಯಾದಾಗ ನಮ್ಮ ದೇಶದ ಭೂಮಾಲಕರ, ಹಿರೇ ಬಂಡವಾಳಿಗರ ಗುಂಪು ಇತ್ತ ವಾಲಿತು. ಆದ್ದರಿಂದ ಇವರರಿಗೆ ತಕ್ಕ ನೀತಿಯನ್ನು ಅನುಸರಿಸುತ್ತಿದೆ. ಕಾಂಗ್ರೆಸ್‌ಗಿಂತಲೂ ಐಎಂಎಫ್, ವಿಶ್ವಬ್ಯಾಂಕ್ ನೀತಿಯನ್ನು ಬಿರುಸಾಗಿ ಅನುಷ್ಠಾನಕ್ಕೆ ತರುತ್ತಿದೆ.

● *ಜನ ಸಾಮಾನ್ಯರಿಗೆ ಭಾಧಕವಾದ ಈ ನೀತಿಯನ್ನು ಹಿಮ್ಮೆಟ್ಟಿಸುವುದು ಹೇಗೆ?*

ಕಾಂ. ಸೂರಿ: ಹೊಸ ಆರ್ಥಿಕ ನೀತಿ ಬದಲಾವಣೆಗೆ ಕೇವಲ ಸರ್ಕಾರಗಳ ಬದಲಾವಣೆಯಿಂದ ಸಾಧ್ಯವಿಲ್ಲ. ಇದಕ್ಕೆ ಪರ್ಯಾಯವಾದ ಧೋರಣೆ ಹೊಂದಿರುವ ಎಡ ಮತ್ತು ಪ್ರಜಾಸತ್ತಾತ್ಮಕ ಸಾಮೂಹಿಕ ಸಂಘಟನೆಗಳ ಮುಖಾಂತರ ಹೋರಾಟ ಮುಂದುವರಿಸಿದರೆ ಆ ನೀತಿ ಬದಲಿಸಲು ಸಾಧ್ಯ.

● *ಹೊಸ ಆರ್ಥಿಕ ನೀತಿಗೆ ಪರ್ಯಾಯ ನೀತಿಯೆಂಬುದು ಇದೆಯೇ?*

ಕಾಂ. ಸೂರಿ: ಪರ್ಯಾಯ ನೀತಿ ಇದೆ. ಅದು ಜನಗಳ ಸಮಸ್ಯೆಗಳಿಗೆ ಸ್ಪಂದಿಸುವ, ನಿವಾರಿಸುವ ದೃಷ್ಟಿಯಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮ.

1. ಗ್ರಾಮಾಂತರ ಪ್ರದೇಶಗಳಲ್ಲಿ ಜನತೆಯ ಕೊಳ್ಳುವ ಶಕ್ತಿಯನ್ನು ಬಲಪಡಿಸಿ ಒಳ ಮಾರುಕಟ್ಟೆ ಅಭಿವೃದ್ಧಿ ಪಡಿಸಲು ಭೂಸುಧಾರಣೆ ಕೈಗೊಳ್ಳುವುದು.
2. ನಮ್ಮ ದೇಶದ ಅಭಿವೃದ್ಧಿಗೆ ಸಂಪನ್ಮೂಲ ಒದಗಿಸುವ ಬ್ಯಾಂಕ್ ಮತ್ತು ಜೀವ ವಿಮಾ ನಿಗಮಗಳನ್ನು ಇನ್ನೂ ಬಲಪಡಿಸಿ ಅಲ್ಲಿರುವ ಅಡಳಿತಶಾಹಿ ಹಿಡಿತ ಕಡಿಮೆಗೊಳಿಸಿ ಈ ಎರಡೂ ಸಂಸ್ಥೆಗಳು ದೇಶದ ಅಭಿವೃದ್ಧಿಗೆ ಹಾಗೂ ಬಡಜನತೆಯ ಕಲ್ಯಾಣಕ್ಕೆ ನಿಲ್ಲುವಂತೆ ಮಾಡುವುದು.

ಪುಟ 6 ನೋಡಿ


ಶಿಕ್ಷಣದ ಕಾವೀಕರಣ ಮತ್ತು ಖಾಸಗೀಕರಣ

ಡಿಸೆಂಬರ್ 11ರ ಐತಿಹಾಸಿಕ ಸಾರ್ವತ್ರಿಕ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು ಏಕೆ ಭಾಗವಹಿಸುತ್ತಿದ್ದಾರೆ? ಭಾರತ ವಿದ್ಯಾರ್ಥಿ ಫೆಡರೇಷನ್‌ನ ರಾಜ್ಯ ಕಾರ್ಯದರ್ಶಿ ವಿವರಿಸುತ್ತಾರೆ.

ಪ್ರಕಾಶ್.ಕೆ

ಸ್ವಾತಂತ್ರ್ಯ ಹೋರಾಟದಲ್ಲಿ ಜನತೆಯ ಹಿತದ ವಿರುದ್ಧ ಸದಾ ಕಾಲ ಕೆಲಸ ಮಾಡಿದ್ದು ಆರ್.ಎಸ್.ಎಸ್. ಇದರ ಸ್ಥಾಪಕರಾದ ಡಾ|| ಹೆಡ್ಗೇವಾರ್ ಈ ರೀತಿ ಹೇಳುತ್ತಾರೆ "ಹಿಂದೂ ಸಮಾಜವನ್ನು ರಕ್ಷಿಸುವ ಕಣ್ಣೋಟದಲ್ಲಿ ನೀವು ಅಂತಹ ಮನೋಭಾವವನ್ನು ಬೆಳೆಸುವ ಮೂಲಕ ಹಿಂದೂ ಸಮಾಜವನ್ನು ಸಂಘಟಿಸಬೇಕು. ಅಗತ್ಯವೆನಿಸಿದರೆ, ಈ ಉದ್ದೇಶವನ್ನು ಈಡೇರಿಸುವುದಕ್ಕೆ 'ಸಾಯುವ' ಮನೋಭಾವವನ್ನು ನೀವು ಬೆಳೆಸಬೇಕು"

ಇದೇ ದಾರಿಯಲ್ಲಿ ಕೇಂದ್ರದಲ್ಲಿ ಬಿಜೆಪಿ ಸರ್ಕಾರದ ಸ್ಥಾಪನೆಯೊಡನೆ ಕಾವಿ ಕಾರ್ಯಯೋಜನೆಯು ತೀವ್ರವಾಗಿ ಜಾರಿಯಾಗುತ್ತಿದೆ. ಇದರಿಂದ ದೇಶದ ಶಿಕ್ಷಣವು ಒಂದು ಅಪಾಯಕಾರಿ ತಿರುವಿನಲ್ಲಿ ಸಿಕ್ಕಿಕೊಂಡಿದೆ. ಜನರಿಗಾಗಲೀ, ಜನರ ಪ್ರತಿನಿಧಿಗಳಿಗಾಗಲೀ ಜವಾಬ್ದಾರವಲ್ಲದ ಆರ್.ಎಸ್.ಎಸ್. ನ ಬಚ್ಚಿಟ್ಟ ಅಜೆಂಡಾವನ್ನು ಜಾರಿ ಮಾಡುವ ಅಂಗವಾದ ಬಿಜೆಪಿಯು ಪಠ್ಯವಿಷಯವನ್ನು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಅಪಾರ ಪ್ರಮಾಣದಲ್ಲಿ ಕೋಮುವಾದೀಗೊಳಿಸುವ ಮತ್ತು ಇಡೀ ಶಿಕ್ಷಣವನ್ನು ವ್ಯಾಪಾರೀಕರಿಸುವ ಪ್ರಯತ್ನ ಮಾಡುತ್ತಿದೆ. ಕೇಂದ್ರದಲ್ಲಿ ಅಧಿಕಾರವನ್ನು ಹಿಡಿದೊಡನೆಯೇ ಶಿಕ್ಷಣದಲ್ಲಿರುವ, ಜಾತ್ಯಾತೀತವಾದ, ಪ್ರಗತಿಪರವಾದ ಹಾಗೂ ಜನಪರವಾದ ವಿಚಾರಗಳನ್ನು ನಾಶ ಮಾಡುವ ಮತ್ತು ಇಂತಹ ವಿಚಾರಗಳನ್ನು ಪ್ರತಿಪಾದಿಸುವ ಜನರನ್ನು ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಂದ ಹೊರಹಾಕುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡುತ್ತಿದೆ.



ಇಂಡಿಯನ್ ಎಕ್ಸ್‌ಪ್ರೆಸ್ ನಲ್ಲಿ ಉನ್ನಿಯವರ ವ್ಯಂಗ್ಯ

ICHR(ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ), NCERT(ರಾಷ್ಟ್ರೀಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಮಂಡಳಿ),IIAS, ICSSR ಮುಂತಾದವುಗಳಲ್ಲಿ ಆರ್‌ಎಸ್‌ಎಸ್ ನ ಕೋಮುವಾದಿ ಇತಿಹಾಸ ತಜ್ಞರನ್ನು 'ಹಿಂದೂರಾಷ್ಟ್ರ'ದ ಪ್ರತಿಗಾಮಿ ಸಿದ್ಧಾಂತದಡಿಯಲ್ಲಿ ಭಾರತದ ಇತಿಹಾಸವನ್ನು ಬರೆಯಲು ತುಂಬಲಾಗಿದೆ.

ಇತ್ತೀಚೆಗೆ ದೆಹಲಿಯಲ್ಲಿ ನಡೆದ ರಾಜ್ಯ ಶಿಕ್ಷಣ ಮಂತ್ರಿಗಳ ಸಮ್ಮೇಳನದಲ್ಲಿ 'ತಜ್ಞರ' ಸಲಹೆಗಳೆಂಬ ಹೆಸರಲ್ಲಿ ಮಾನವ ಸಂಪನ್ಮೂಲ ಸಚಿವರು ಮಂಡಿಸಿದ ದಸ್ತಾವೇಜುಗಳು ಶಿಕ್ಷಣದ ಮೇಲಿನ ತೀವ್ರವಾದ ಕೋಮುವಾದಿ ಹೊಡೆತಗಳಾಗಿವೆ. ಅದರ ಕೆಲವಂಶಗಳು ಹೀಗಿವೆ:

★ ಹತ್ತನೇ ತರಗತಿಯವರೆಗೆ ಸಂಸ್ಕೃತ ಕಡ್ಡಾಯ, 4 ಸಂಸ್ಕೃತಿ ವಿ.ವಿ.ಗಳ ಸ್ಥಾಪನೆ.
★ ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೆ ಎಲ್ಲಾ ವಿದ್ಯಾರ್ಥಿಗಳಿಗೂ 'ಹಿಂದೂ ಸಂಸ್ಕೃತಿ'ಯ ಭೋದನೆ. ವೇದ-ಉಪನಿಷತ್ತುಗಳ ಕಲಿಕೆ.
★ ಸರಸ್ವತಿ ವಂದನೆಯನ್ನು ಎಲ್ಲಾ ಹಂತಗಳಲ್ಲೂ ಜಾರಿಗೊಳಿಸುವುದು.(ನಮ್ಮ ಬಹುಸಂಸ್ಕೃತಿಯ ಸಂವಿಧಾನ ಇದಕ್ಕೆ ಅವಕಾಶ ಕೊಡದಿದ್ದರೂ, ರಾಷ್ಟ್ರಗೀತೆಯ ಜಾಗದಲ್ಲಿ ಇದನ್ನು ತರುವ ಪ್ರಯತ್ನ)
★ ಹೆಣ್ಣು ವಿದ್ಯಾರ್ಥಿಗಳಿಗೆ ಲಿಂಗ ತಾರತಮ್ಯದ 'ಮನೆ ನೋಡಿಕೊಳ್ಳುವ' ಪ್ರತ್ಯೇಕ ಪಠ್ಯಗಳನ್ನು ಜಾರಿ ಗೊಳಿಸುವುದು (ಹೆಣ್ಣು ಸ್ವಾವಲಂಬಿಯಾಗುವ ಬದಲಿಗೆ ಮನೆಗಷ್ಟೇ ಸೀಮಿತಗೊಳ್ಳಬೇಕೆಂಬ ಬಿಜೆಪಿಯ ಉದ್ದೇಶವನ್ನು ಇದು ಬಯಲು ಮಾಡಿದೆ)
★ ಶಿಕ್ಷಣದ ಸಂಸ್ಥೆಗಳನ್ನು ಆರಂಭಿಸಲು ಖಾಸಗಿ ವಲಯಕ್ಕೆ ಉತ್ತೇಜನ.
★ ಹತ್ತು ವರ್ಷಗಳಿಂದ ನಡೆಯುತ್ತಿರುವ ಎಲ್ಲಾ ಖಾಸಗಿ ಶಾಲೆಗಳನ್ನು ತಾನೇ ತಾನಾಗಿ ಅಂಗೀಕಾರಗೊಳಿಸುವುದು. (ಈ ಸೂಚನೆಯ ಮುಖ್ಯ ಉದ್ದೇಶವೆಂದರೆ, ಆರ್‌ಎಸ್‌ಎಸ್ ನಡೆಸುವ ಎಲ್ಲಾ ಶಾಲೆಗಳನ್ನು ಅಂಗೀಕಾರ ಮಾಡಿಸುವುದು ಮತ್ತು ಇಡೀ ಶಾಲಾ ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸುವುದು. ಈ ಸೂಚನೆಯ ಮುಖಾಂತರ ರಾಜ್ಯ ಸರ್ಕಾರಗಳ ಹಿಡಿತವನ್ನು ತಪ್ಪಿಸುವುದು.)

.... ಇತ್ಯಾದಿ.

ಇವು ಸಂಪೂರ್ಣವಾಗಿ ನಮ್ಮ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿವೆ. ಮತ್ತು ನಮ್ಮ ಒಕ್ಕೂಟ ವ್ಯವಸ್ಥೆಯನ್ನೇ ನಾಶ ಮಾಡುತ್ತವೆ. ಸಮ್ಮೇಳನದಲ್ಲಿ ವ್ಯಕ್ತವಾದ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಈ ಪ್ರಸ್ತಾವನೆಗಳನ್ನು ಚರ್ಚೆಯ ವ್ಯಾಪ್ತಿಯಿಂದ ಹೊರಗಿಡಲಾಯಿತಾದರೂ, ಉದ್ದೇಶವನ್ನು ಕೈ ಬಿಟ್ಟಿಲ್ಲ. ಮತ್ತು ಇದನ್ನು ಸರಳವಾಗಿ ಭಾವಿಸುವ ಹಾಗಿಲ್ಲ. ಏಕೆಂದರೆ ಬಿಜೆಪಿ ಆಡಳಿತ ನಡೆಸುವ ರಾಜ್ಯಗಳಲ್ಲಿ ಇಂತಹ ಪ್ರಯತ್ನಗಳು ಗಂಭೀರ ಸ್ವರೂಪವನ್ನು ತಾಳಿವೆ. ಇದರ ಕೆಲವು ಉದಾಹರಣೆಗಳನ್ನು ಗಮನಿಸೋಣ.

ಮಹಾರಾಷ್ಟ್ರ: ಶಾಲಾ ಪಠ್ಯಗಳಲ್ಲಿ ಮಧ್ಯಯುಗದ ಇತಿಹಾಸವು ಶಿವಾಜಿಯೊಂದಿಗೆ ಪ್ರಾರಂಭವಾಗಿ ಅಲ್ಲಿಗೆ ಮುಗಿಯುತ್ತದೆ, 4ನೇ ತರಗತಿಯ ಪಠ್ಯವು 19 ಪಾಠಗಳನ್ನು ಹೊಂದಿದ್ದು ಇದರಲ್ಲಿ ವಿಶೇಷವಾಗಿ ಶಿವಾಜಿಗೆಂದೇ 75 ಪುಟಗಳಿವೆ. ಶಿವಾಜಿಯನ್ನು ಹಿಂದೂ ಪುನರೋದ್ಧಾರಕನೆಂದು ಚಿತ್ರಿಸುವ ಪ್ರಯತ್ನವಿದು. ಇಂತಹುದೇ ಇನ್ನೂ ಅನೇಕ ಪಾಠಗಳಿವೆ.

ರಾಜಸ್ಥಾನ್: ಕಳೆದ 8 ವರ್ಷಗಳಿಂದ ಹಿಂದುತ್ವವನ್ನು ಹೇರಲು ವ್ಯವಸ್ಥಿತ ಪ್ರಯತ್ನ ನಡೆದಿದೆ. ಆರ್‌ಎಸ್‌ಎಸ್ ದೃಷ್ಟಿಯ ಭಾರತೀಯ ಚರಿತ್ರೆ ಮತ್ತು ಸಂಸ್ಕೃತಿಯನ್ನು ಹೇರುವ ಉದ್ದೇಶದಿಂದ 'ಸಂಸ್ಕೃತಿ ಜ್ಞಾನ' ಹೆಸರಿನ ಕಿರುಹೊತ್ತಿಗೆಗಳ ಸರಣಿಯನ್ನು ಸುಮಾರು 6000 ಸರಸ್ವತಿ ಶಿಶು ಮಂದಿರ ಹಾಗೂ ವಿದ್ಯಾಭಾರತಿ(ಆರ್‌ಎಸ್‌ಎಸ್ ನಿಯಂತ್ರಿತ) ಶಾಲೆಗಳಲ್ಲಿ ಹಂಚಲಾಗುತ್ತಿದೆ. ಇವುಗಳಲ್ಲಿ ಭಾರತದ ಭೂಪಟವನ್ನು ಪಾಕಿಸ್ತಾನ, ಬಾಂಗ್ಲಾದೇಶ, ಭೂತಾನ, ನೇಪಾಳ, ಟಿಬೆಟ್, ಮ್ಯಾನ್‌ಮಾರ್ ದೇಶಗಳು ಸೇರಿದಂತೆ ಚಿತ್ರಿಸಲಾಗಿದೆ. ಹುಸಿ ಭ್ರಮೆಗಳ ಯುದ್ಧಕೋರತನಕ್ಕೆ ಸಾಕ್ಷಿ ಇನ್ನೇನು ಬೇಕು?

"ರಾಮಜನ್ಮಭೂಮಿ ದೇವಾಲಯ ನಾಶ ಮಾಡಿದ ಮೊದಲ ಮುಸ್ಲಿಂ ಯಾರು?", "ಇಲ್ಲಿ ದೇವಸ್ಥಾನ ಕಟ್ಟಿದವರಾರು?", "ಇದು ಏಕೆ ಮಸೀದಿಯಲ್ಲ?", "ಹೋಮರ್‌ನ (ಇಲಿಯಾಡ್ ಮತ್ತು ಒಡಿಸ್ಸೀ ಕೃತಿಗಳನ್ನು ರಚಿಸಿದ ಗ್ರೀಸ್‌ನ ಮಹಾನ್ ಕವಿ) ಕೃತಿಗಳಿಗೆ ರಾಮಾಯಣ ಸ್ಫೂರ್ತಿ", "ಉತ್ತರ ಅಮೇರಿಕಾದ ಮೂಲನಿವಾಸಿಗಳ ಭಾಷೆಗಳು ಭಾರತದ ಪುರಾತನ ಭಾಷೆಗಳಿಂದ ಹುಟ್ಟಿದ್ದು"......... ಇಂತಹ ಅನೇಕ ಹಸಿ ಸುಳ್ಳುಗಳ ಮಹಾಪೂರವೇ ಹರಿದಿದೆ.

ಉತ್ತರ ಪ್ರದೇಶ: ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ನೈತಿಕ ಮತ್ತು ದೈಹಿಕ ಬೆಳವಣಿಗೆಗಾಗಿ 'ಕುಲ್ಪ್' ಯೋಜನೆ ಜಾರಿ ಮಾಡಲಾಗಿದೆ ಇದರ ಕೆಲವಂಶಗಳು ಹೀಗಿವೆ:

★ ಶಾಲೆಗಳಲ್ಲಿ 'ನೈತಿಕ ಶಿಕ್ಷಣ' ನೀಡುವಲ್ಲಿ, ಮುಖ್ಯವಾಗಿ ಗ್ರಾಮಾಂತರದಲ್ಲಿ ಆರ್‌ಎಸ್‌ಎಸ್ ಪ್ರಚಾರಕರನ್ನು ಒಳಗೊಂಡಿರಬೇಕು.
★ ಶಾಲೆಗಳು ಮತ್ತು ಅದರಲ್ಲಿನ ವಿದ್ಯಾರ್ಥಿಗಳು - ರಕ್ಷಾ ಬಂಧನ, ಗುರುದಕ್ಷಿಣೆ, ರಾಮನವಮಿ, ದಸರಾ ಇಂತಹ ಧಾರ್ಮಿಕ ಹಬ್ಬಗಳನ್ನು ಆಚರಿಸಬೇಕು. ಆರ್‌ಎಸ್‌ಎಸ್ ಸ್ಥಾಪಕ ಹೆಡ್ಗೇವಾರ್ ಮತ್ತು ಶಾಮಪ್ರಸಾದ್ ಮುಖರ್ಜಿ ಇಂತಹವರ ಜಯಂತಿ ಮತ್ತು ವರ್ಧಂತಿಗಳನ್ನು ಆಚರಿಸಬೇಕು...... ಇತ್ಯಾದಿ.
★ ಭಾರತದ ಸ್ವಾತಂತ್ರ್ಯ ಸಂಗ್ರಾಮವು ಬ್ರಿಟಿಷರ ಆಗಮನದೊಂದಿಗೆ ಪ್ರಾರಂಭವಾಯಿತು ಎಂಬುದು ಐತಿಹಾಸಿಕ ಸತ್ಯವಾಗಿದೆ. ಇಲ್ಲಿ ಈ ಸತ್ಯವನ್ನು ಕೋಮುವಾದಿ ಕಾರಣಕ್ಕಾಗಿ ತಿರುಚಲಾಗಿದೆ. 5ನೇ ತರಗತಿಯ ಪಠ್ಯದಲ್ಲಿ ಭಾರತದ 'ಒಟ್ಟಾರೆ ಚರಿತ್ರೆಯನ್ನು ಸ್ವಾತಂತ್ರ್ಯ ಹೋರಾಟದ ಚರಿತ್ರೆಯನ್ನಾಗಿ ಬರೆಯಲಾಗಿದೆ. ಆರ್ಯರು ಭಾರತದ ಮೂಲನಿವಾಸಿಗಳು ಎಂಬ ಸುಳ್ಳನ್ನು ಒಪ್ಪಿಸಲು ಇಂತಹ ಪ್ರಯತ್ನ.
★ ಸ್ವಾತಂತ್ರ್ಯ ಹೋರಾಟದ ಮೊದಲ

ಪುಟ 6ನೋಡಿ

ಸ್ವರ್ಗದಿಂದ ಉದುರುವುದೇ ಈರುಳ್ಳಿ!

ಬಿಜೆಪಿ ಅಂದರೆ ಬಿಜಲಿ ನಹಿ, ಜಲ್ ನಹಿ, ಪ್ಯಾಜ್ ನಹಿ....

ವಿಶ್ವರಂಗದ ಈ ಸಂಚಿಕೆ ಓದುಗರ ಕೈ ಸೇರುವ ಹೊತ್ತಿಗೆ ನಾಲ್ಕು ರಾಜ್ಯ ವಿಧಾನಸಭೆ ಚುನಾವಣೆಗಳ ಫಲಿತಾಂಶ ಹೊರಬಂದಿರುತ್ತದೆ. ದೆಹಲಿ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಮಿಜೋರಾಂ ವಿಧಾನಸಭೆಗಳಿಗೆ ಚುನಾವಣೆಗೆ ನವೆಂಬರ್ 25 ರಂದು ಮತದಾನ ನಡೆದಿದೆ. ವಿಧಾನಸಭೆ ಸ್ಥಾನಗಳ ಸಂಖ್ಯೆ: ಮಧ್ಯಪ್ರದೇಶ-320 ರಾಜಸ್ಥಾನ-197, ದೆಹಲಿ 69, ಮಿಜೋರಾಂ -40. ಮಿಜೋರಾಂ ಬಿಟ್ಟರೆ ಉಳಿದ ಮೂರು ರಾಜ್ಯಗಳ ಚುನಾವಣೆ ಫಲಿತಾಂಶ ರಾಜಕೀಯವಾಗಿ ನಿರ್ಣಾಯಕವಾದದ್ದು ಮಹತ್ವವಾದದ್ದು. ಈ ಚುನಾವಣೆ ಒಂದು ರೀತಿಯಲ್ಲಿ ಜಾತ್ಯತೀತ ಶಕ್ತಿಗಳು ಮತ್ತು ಕೋಮುವಾದಿಗಳ ನಡುವಿನ ಸಮರವಾಗಿತ್ತು. ಬೆಲೆಯೇರಿಕೆ ಈ ಚುನಾವಣೆಯ ಪ್ರಚಾರ ಕಾರ್ಯಗಳಲ್ಲಿ ಪ್ರಸ್ತಾವಗೊಂಡ ಒಂದು ಪ್ರಮುಖ ವಿಷಯವಾಗಿತ್ತು. ಗಗನಕ್ಕೇರಿ ಜನಸಾಮಾನ್ಯರ ಕೈಗೆಟುಕದ ಈರುಳ್ಳಿ ಬೆಲೆಯೇ ಪ್ರಧಾನವಾಗಿ ಪ್ರಸ್ತಾವಗೊಂಡಿದ್ದು ಸಹಜವಾಗಿಯೇ ಇತ್ತು.

ಪ್ರತಿಪಕ್ಷಗಳು ಬಿಜೆಪಿ ಮೇಲೆ ಪ್ರಹಾರ ಮಾಡಲು ಈ ಸಮಸ್ಯೆಯನ್ನು ಬಹಳ ಪರಿಣಾಮಕಾರಿಯಾಗಿ ಬಳಸಿಕೊಂಡದ್ದು ಪ್ರಚಾರಾಂಗಣದಿಂದ ಬಂದಿರುವ ವರದಿಗಳಿಂದ ಸ್ಪಷ್ಟವಾಗುತ್ತದೆ.

ಈರುಳ್ಳಿ ಬಲೂನು, ಹಾರ...

ಈರುಳ್ಳಿ ಆಕಾರದ ಬಲೂನುಗಳು ಆಕಾಶದಲ್ಲಿ ಹಾರಾಡಿದವು. ಇದು ವಾಸ್ತವದಲ್ಲಿ ಈರುಳ್ಳಿ ಬೆಲೆ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿತ್ತು. ಈರುಳ್ಳಿ ಕುರಿತು ಬರೆದ ಅಣಕ ಹಾಡುಗಳು ಜನರ ಮನಸ್ಸನ್ನು ಎಷ್ಟರ ಮಟ್ಟಿಗೆ ನಾಟಿದವು ಎನ್ನುವುದು ಫಲಿತಾಂಶ ಬಂದ ಮೇಲಷ್ಟೆ ಗೊತ್ತಾಗುತ್ತದೆ. ಬಹಳಷ್ಟು ಪ್ರಚಾರ ಮಾಡಿದರು. ಅನೇಕ ಮಂದಿ ಈರುಳ್ಳಿ 'ತುಲಾಭಾರ' ಮಾಡಿಸಿಕೊಂಡರು!

ಆಲೂ ತಿಂದರು! ಈರುಳ್ಳಿ ತಿಂದರು!

ಅಟಲ್‌ಜೀ ಕಾ ದೇಖೋ ರಾಜ್, ಖಾಗಯೇ ಆಲೂ, ಖಾಗಯೇ ಪ್ಯಾಜ್... ಇದು ಮಧ್ಯಪ್ರದೇಶದಲ್ಲಿ ಮೊಳಗಿದ್ದ ಘೋಷಣೆ.

ಅಟಲ್ ಬಿಹಾರಿ ವಾಜಪೇಯಿಯವರ ಆಡಳಿತ ನೋಡಿ - ಆಲೂಗಡ್ಡೆ ತಿಂದು ಹಾಕಿದರು ಈರುಳ್ಳಿಯನ್ನು ತಿಂದು ಮುಗಿಸಿದರು ಎನ್ನುವುದು ಇದರ ಅರ್ಥ.

ಈರುಳ್ಳಿ ಮಾತ್ರವಲ್ಲ ಇತರ ಅನೇಕ ಜನಸಾಮಾನ್ಯರ ದಿನಬಳಕೆ ವಸ್ತುಗಳ ಬೆಲೆಗಳೂ ರಾಕೆಟ್‌ನಂತೆ ಆಗಸಕ್ಕೆ ನೆಗೆಯುವುದನ್ನು ಕಂಡು ಭಾರತೀಯ ಜನತಾ ಪಕ್ಷವನ್ನು ಲೇವಡಿ ಮಾಡುವ ಒಂದು ಘೋಷಣೆಯೂ ಪ್ರಚಲಿತವಾಗಿತ್ತು.

ಬಿ.ಜೆ.ಪಿ: ಬಿ. ಬಿಜಲ್ (ವಿದ್ಯುತ್) ನಹಿ, ಜೆ. ಜಲ್ (ನೀರು) ನಹಿ, ಪಿ. ಪ್ಯಾಜ್ (ಈರುಳ್ಳಿ) ನಹಿ ಎಂಬುದೇ ಆ ಘೋಷಣೆ. ಉಪ್ಪು ಕೂಡ ತುಟ್ಟಿಯಾಗಿದ್ದನ್ನು ಕಂಡರೆ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಇನ್ನು ಸ್ವಲ್ಪ ಕಾಲ ಅಧಿಕಾರದಲ್ಲೆ ಮುಂದುವರಿದರೆ ಪರಿಸ್ಥಿತಿ ಬಿಗಡಾಯಿಸಲಿರುವುದು ನಿಶ್ಚಿತ.

ಬಿಜೆಪಿ ಆಡಳಿತದಲ್ಲಿ ಈರುಳ್ಳಿ ದೊರಕುವುದು ರೇಶನ್ ಅಂಗಡಿಗಳಲ್ಲಿ

ಬಿಜೆಪಿ ಕೆ ಶಾಸನ್ ಮೇ

ಪ್ಯಾಜ್ ಬಿಕೇಗಿ ರೇಶನ್ ಮೇ

ಎಂಬುದು ಚುನಾವಣೆ ಪ್ರಚಾರಕ್ಕಾಗಿ ರೂಪಿಸಿದ ಆಕರ್ಷಕ ಘೋಷಣೆಯಾದರೂ ಅದು ಅತಿಶಯೋಕ್ತಿಯೂ ಅಲ್ಲ ಎಂದು ಕೂಡ ಹೇಳಬಹುದಾಗಿದೆ.

ಮಿತ್ರ ಪಕ್ಷಗಳಿಂದಲೇ ತರಾಟೆ:

ಬೆಲೆಯೇರಿಕೆ ಪ್ರತಿಪಕ್ಷಗಳು ಬಿಜೆಪಿಯನ್ನು ಇಕಟ್ಟಿಗೆ ಸಿಲುಕಿಸಲು ದುರುದ್ದೇಶಪೂರ್ವಕವಾಗಿ ಬಳಸಿರುವ ವಿಷಯವಲ್ಲ ಎಂಬುದು ಸ್ವತಃ ಮಿತ್ರಪಕ್ಷಗಳೇ ಅದನ್ನು ಪ್ರಚಾರಕ್ಕೆ ಬಳಸಿಕೊಂಡಿರುವುದರಿಂದ ಸಾಬೀತಾಗುತ್ತದೆ.

ಮಮತಾ ಪಕ್ಷ; ಅಲ್ಲಲ್ಲ, ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಈ ವಿಚಾರದಲ್ಲಿ ಬಿಜೆಪಿಯನ್ನು ಬಹುವಾಗಿ ತರಾಟೆಗೆ ತೆಗೆದು ಕೊಂಡಿತು. ಸಮತಾ ಪಕ್ಷವನ್ನು ಬೆಂಬಲಿಸಿ ಅನೇಕ ಕಡೆ ಮಮತಾ ಬ್ಯಾನರ್ಜಿ ಅನೇಕ ಕಡೆ ಪ್ರಚಾರ ಭಾಷಣ ಮಾಡಿದರು. ಈ ರ್‍ಯಾಲಿಗಳಲ್ಲೆಲ್ಲ ಆಕಾಶಕ್ಕೇರುತ್ತಿರುವ ಈರುಳ್ಳಿ ಬೆಲೆಗಳನ್ನು ಅವರು ಪ್ರಸ್ತಾವ ಮಾಡಿದರು.

ಈರುಳ್ಳಿ ದರ ಏರಿಕೆಗೆ ಹವಾಮಾನ ವೈಪರೀತ್ಯ ಕಾರಣವೇ ಹೊರತು ಅವ್ಯವಸ್ಥಿತ ಆಡಳಿತವಲ್ಲ ಎಂದು ಪ್ರಧಾನಿ ವಾಜಪೇಯಿ ಹೇಳುತ್ತಿದ್ದರೆ, ಇದನ್ನು ಮಮತಾ ಕಟುವಾಗಿ ಟೀಕಿಸಿದ್ದಾರೆ. ಪ್ರಧಾನಿಯ ಹೇಳಿಕೆಯನ್ನು ಪ್ರಸ್ತಾವಿಸಿದ ಅವರು ಈರುಳ್ಳಿ ಏನು ಸ್ವರ್ಗದಿಂದ ಉರುಳುತ್ತವೆಯೇ ಎಂದು ಬಹಿರಂಗ ಸಭೆಗಳಲ್ಲಿ ಪ್ರಶ್ನಿಸಿ ವಾಜಪೇಯಿ ಬಿಜೆಪಿ ಮುಖಕ್ಕೆ ಮಂಗಳಾರತಿ ಎತ್ತಿದರು.

ಗೋಗರೆದ ಸುಷ್ಮಾ ಹತಾಶೆಯ ಪ್ರತೀಕ:

ಈರುಳ್ಳಿ ಬೆಲೆ ಪ್ರಶ್ನೆ ಒಂದಷ್ಟೇ ಇಟ್ಟುಕೊಂಡು ಬಿಜೆಪಿಯ ಕೈ ಬಿಡ ಬೇಡಿ ಎಂದು ದೆಹಲಿ ಮುಖ್ಯಮಂತ್ರಿ ಸುಷ್ಮಾ ಸ್ವರಾಜ್ ಮತದಾರರಲ್ಲಿ ಗೋಗರೆದಿದ್ದಾರೆ. ಇದು ಬಿಜೆಪಿಯಲ್ಲಿ ಉಂಟಾಗಿರುವ ಹತಾಶೆಯ ಪ್ರತೀಕವಾಗಿದೆ.

ಇನ್ನು ಸುಷ್ಮಾರ ಮನವಿಯನ್ನೇ ಪರಿಗಣಿಸುವುದಾದರೆ, ಹೌದು ಸುಷ್ಮಾಜೀ ಮತದಾರರು ಈರುಳ್ಳಿ ಒಂದನ್ನೇ ನೋಡುವುದಿಲ್ಲ! ಕುಸಿದು ಬಿದ್ದಿರುವ ಕಾನೂನು ಸುವ್ಯವಸ್ಥೆ ಪರಿಸ್ಥಿತಿ ಮತ್ತಿತರ ಹಲವು ವಿಚಾರಗಳನ್ನು ಗಮನಿಸುತ್ತಾರೆ ಎಂದು ಖಂಡಿತಾ ಹೇಳಬೇಕಾಗುತ್ತದೆ.

ರಿಗ್ಗಿಂಗ್ ಯೋಜಿಸಿದ್ದ ಕೇಸರಿ ಕೂಟ:

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಲಾಗಾಯ್ತಿನಿಂದಲೂ ಮಿತ್ರಪಕ್ಷಗಳ ಬೆಂಬಲದ ವಾಪಸಿನಿಂದಲೇ ಯಾವತ್ತಾದರೂ ಉರುಳುವ ಭೀತಿಯಲ್ಲೇ ಇರುವ ಕೇಂದ್ರ ಸಮ್ಮಿಶ್ರ ಕೂಟ ಸರಕಾರದ ನೇತೃತ್ವ ಪಕ್ಷವಾದ ಭಾರತೀಯ ಜನತಾ ಪಕ್ಷ ನವೆಂಬರ್ 25 ರ ಚುನಾವಣೆಯನ್ನು ತನ್ನ ಅಳಿವು ಉಳಿವಿನ ಪ್ರಶ್ನೆಯನ್ನಾಗಿ ಮಾಡಿ ಪ್ರತಿಷ್ಠೆಯನ್ನೇ ಪಣಕ್ಕಿಟ್ಟಿತು ಎನ್ನುವುದು ನಿರ್ವಿವಾದ.

ದೆಹಲಿ, ರಾಜಸ್ಥಾನ, ಮತ್ತು ಮಧ್ಯಪ್ರದೇಶದಲ್ಲಿ ಹೇಗಾದರೂ ಮಾಡಿ ಗೆಲ್ಲಲೇ ಬೇಕೆಂಬ ಹಟದಿಂದ ಬಿಜೆಪಿ ಮತ್ತು ಆರೆಸ್ಸೆಸ್ ಕೂಟ ಚುನಾವಣೆಯಲ್ಲಿ ಅಕ್ರಮಗಳನ್ನು (ರಿಂಗ್ಗಿಂಗ್) ನಡೆಸಲು ಸಕಲ ಸಿದ್ಧತೆ ನಡೆಸಿತ್ತು ಎಂಬ ಅಂಶ ಇದೀಗ ಬೆಳಕಿಗೆ ಬಂದಿದೆ.

ರಿಗ್ಗಿಂಗ್ ಕಾರ್ಯಾಚರಣೆ ಸಿದ್ಧತೆಗಾಗಿ ಆರೆಸ್ಸೆಸ್ ನವೆಂಬರ್ 22 ರಂದು ಉತ್ತರ ಪ್ರದೇಶದಲ್ಲಿ ಶಿಬಿರವೊಂದನ್ನು ವ್ಯವಸ್ಥೆಗೊಳಿಸಿತ್ತು. ಈ ಶಿಬಿರಕ್ಕಾಗಿ ಉತ್ತರ ಪ್ರದೇಶದ ಕಲ್ಯಾಣ್ ಸಿಂಗ್ ನೇತೃತ್ವದ ಸರಕಾರ ಆಡಳಿತ ಯಂತ್ರದ ದುರುಪಯೋಗ ನಡೆಸಿತ್ತು.

ಈ ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಸೋಲಿಸಲು ಯಾವ ಮಟ್ಟಕ್ಕೂ ಇಳಿಯಲು ಹೇಸದಿರಿ ಎಂದು ತನ್ನ ಕಾರ್ಯಕರ್ತರಿಗೆ ಆರೆಸ್ಸೆಸ್ ಸೂಚಿಸಿತು ಎಂಬ ಅಂಶ ಕೇಸರಿ ಪಡೆಯಲ್ಲಿ ಉಂಟಾಗಿರುವ ನಡುಕ ಹಾಗೂ ಹತಾಶೆಗೆ ಸಾಕ್ಷಿಯಾಗಿದೆ.

ಹಾಗೂ ಇದೊಂದು ಅಪ್ಪಟ ಫ್ಯಾಸಿಸ್ಟ್ ಮಾದರಿ ಸಂಸ್ಥೆ ಎಂಬ ಪ್ರಗತಿಪರ ಶಕ್ತಿಗಳ ವಿಶ್ಲೇಷಣೆ ಸರಿ ಎಂಬುದನ್ನು ಸಾಬೀತು ಪಡಿಸುತ್ತದೆ.

ದಲಿತರು, ಅಲ್ಪಸಂಖ್ಯಾತರು, ಅಥವಾ ಹಿಂದುಳಿದ ವರ್ಗಗಳ ಮತದಾರರು ತಮ್ಮ ಮತವನ್ನು ಚಲಾಯಿಸದಂತೆ ನೋಡಿಕೊಳ್ಳುವಂತೆ ಆರೆಸ್ಸೆಸ್ ಕಾರ್ಯಕರ್ತರಿಗೆ ಸೂಚಿಸಲಾಗಿತ್ತು. ಬಿಜೆಪಿಗೆ ಮತ ಹಾಕದಿರುವ ಈ ವಿಭಾಗಗಳ ಜನರ ಹೆಸರಿನ ಮುಂದೆ ಕೆಂಪು ಶಾಯಿಯಿಂದ ಗುರುತು ಮಾಡುವಂತೆಯೂ ನಿರ್ದೇಶಿಸಲಾಗಿತ್ತು.

ಕೇಸರಿ ಕೂಟದ ಹೇಯ ಪಿತೂರಿಯನ್ನು ಕಾಂಗ್ರೆಸ್ ಪಕ್ಷದ ವಕ್ತಾರರು ನವೆಂಬರ್ 21 ರಂದು ಸುದ್ದಿಗೋಷ್ಠಿಯಲ್ಲಿ ಬಯಲಿಗೆಳೆದಿದ್ದರು. ಬಹುಶಃ ಇದರಿಂದ ಎಚ್ಚೆತ್ತೋ ಏನೋ ಶಿಬಿರದಲ್ಲಿ ಬಹಿರಂಗವಾಗಿ ಈ ವಿಚಾರವಾಗಿ ಏನೂ ಚರ್ಚೆ ನಡೆಸದ ಆರೆಸ್ಸೆಸ್ ವಂದೇ ಮಾತರಂ ಹಾಡುವಿಕೆ, ದೇಶಾಭಿಮಾನ, ಭ್ರಷ್ಟಾಚಾರ ಮುಂತಾದ ವಿಷಯಗಳಿಗೆ ಒತ್ತು ಕೊಟ್ಟು ಚರ್ಚೆ ನಡೆಸಿತು.

ಆದರೆ ಮೇಲ್ನೋಟಕ್ಕೆ ಹೀಗೆ ಕಂಡರೂ ಅಂತರಿಕವಾಗಿ ಅದು ರಿಗ್ಗಿಂಗ್ ಯೋಜನೆಯನ್ನು ಚರ್ಚಿಸಿದ್ದಿರಲೇಬೇಕು. ಆರೆಸ್ಸೆಸ್ ಹುಟ್ಟುಗುಣವೇ ಅಂಥದ್ದಲ್ಲವೇ? ತಾನೊಂದು ಸಾಂಸ್ಕೃತಿಕ ಸಂಘಟನೆ ಎಂದು ಹೇಳಿಕೊಳ್ಳುವ ಅದು ಅಲ್ಪಸಂಖ್ಯಾತರ ವಿರುದ್ಧ ಬಹಿರಂಗವಾಗಿಯೇ ಕತ್ತಿ ಮಸೆದು ರಕ್ತಪಾತಕ್ಕೆ ಎಡೆ ಮಾಡಿ ಕೊಡುವುದಿಲ್ಲವೇ? ದಲಿತರು ಹಿಂದುಳಿದ ವರ್ಗಗಳ ಪ್ರಗತಿಗೆ ಅಡ್ಡಗಾಲು ಹಾಕುವುದಿಲ್ಲವೇ?.

ಚುನಾವಣೆ ಆಯೋಗದಿಂದ ಬಿಜೆಪಿಗೆ ಛೀಮಾರಿ

ಚುನಾವಣೆ ಪ್ರಚಾರದಲ್ಲಿ ವ್ಯಕ್ತಿಗತ ಅಪಪ್ರಚಾರಕ್ಕೆ ಅವಕಾಶ ಇರಲಾರದು ಎಂಬ ಚುನಾವಣೆ ಆಯೋಗದ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಕ್ಕಾಗಿ ಭಾರತೀಯ ಜನತಾ ಪಕ್ಷ ಆಯೋಗದಿಂದ ಛೀಮಾರಿಗೆ ಒಳಗಾಗಿದೆ. ಈ ಪಕ್ಷದ ಚುನಾವಣೆ ಕುರಿತ ಜಾಹಿರಾತೊಂದನ್ನು ಆಯೋಗ ನಿಷೇದಿಸಿದೆ.

ದೆಹಲಿಯ ದಿನ ಪತ್ರಿಕೆಯೊಂದರಲ್ಲಿ ಬಿಜೆಪಿ ಪ್ರಕಟಿಸಿದ ಚುನಾವಣೆ ಜಾಹಿರಾತು ಆಕ್ಷೇಪಾರ್ಹವಾಗಿದೆ, ಇದು ಮಾದರಿ ನೀತಿ ಸಂಹಿತೆಯ 1 (2) ಪರಿಚ್ಛೇದದ ಉಲ್ಲಂಘನೆಯಾಗಿದೆ ಎಂದು ಕಾಂಗ್ರೆಸ್ ಚುನಾವಣೆ ಆಯೋಗಕ್ಕೆ ದೂರನ್ನು ಸಲ್ಲಿಸಿತ್ತು. ಇದನ್ನು ಎತ್ತಿಹಿಡಿದ ಆಯೋಗ ಬಿಜೆಪಿಯ ಜಾಹಿರಾತನ್ನು ನಿಷೇಧಿಸಿತ್ತು.

ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ.:

ಬಿಜೆಪಿ ಚುನಾವಣೆ ಆಯೋಗದ ಆದೇಶದ ಮೇರೆಗೆ ಆ ಜಾಹಿರಾತನ್ನು ಹಿಂದೆ ಪಡೆದಿದೆ. ಆದರೆ ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬ ರೀತಿಯಲ್ಲಿ ಅದು ವರ್ತಿಸುತ್ತಿದೆ.

ಚುನಾವಣೆ ಆಯೋಗದ ನಿರ್ಧಾರ ಏಕಪಕ್ಷೀಯವಾದದ್ದು ಎಂದು ಅದು ಅಪಪ್ರಚಾರ ಮಾಡಿದೆ.

ಎಡ ಪಕ್ಷಗಳ ಪಾತ್ರ ನಿರ್ಣಾಯಕ

ಈಗ ಅಧಿಕಾರದಲ್ಲಿರುವ ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯಪ್ರದೇಶ ಚುನಾವಣೆ ಕಣದಲ್ಲಿರುವ ಪ್ರಮುಖ ಪಕ್ಷಗಳು. ಅಧಿಕಾರವನ್ನು ಉಳಿಸಿಕೊಳ್ಳಲು ಕಾಂಗ್ರೆಸ್ ಮತ್ತು ಪುನಃ ಅಧಿಕಾರಕ್ಕೇರಲು ಬಿಜೆಪಿ ಯತ್ನಿಸಿವೆ.

ಆದರೆ ಇಲ್ಲಿಯಾವುದೇ ಪಕ್ಷಕ್ಕೆ ಬಹುಮತ ದೊರೆಯದೆ ಅಂತಂತ್ರ ವಿಧಾನಸಭೆ ರಚನೆಯಾಗುವ ಸಾಧ್ಯತೆಯನ್ನು ತಳ್ಳಿ ಹಾಕಲು ಆಗುವುದಿಲ್ಲ ಎಂದು ರಾಜಕೀಯ ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ.

ಅದೇ ರೀತಿ ಕಳೆದ ಸಲ ಶೇ. 22 ಮತಗಳಿಸಿದ್ದ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಮತ್ತು ಈ ಬಾರಿ 45 ಸ್ಥಾನಗಳಲ್ಲಿ ಸ್ಪರ್ಧಿಸಿರುವ ಎಡ ಪಕ್ಷಗಳು ಮಧ್ಯಪ್ರದೇಶದಲ್ಲಿ ಸರಕಾರ ರಚನೆಯಲ್ಲಿ ನಿರ್ಣಯಕ ಪಾತ್ರ ವಹಿಸುವ ಸಾಧ್ಯತೆ ಇದೆ ಎಂದೂ ರಾಜಕೀಯ ವಿಶೇಷಕರನ್ನು ಉಲ್ಲೇಖಿಸಿ ಸುದ್ದಿಸಂಸ್ಥೆಗಳು ವರದಿ ಮಾಡಿವೆ.

ಜನತೆಯ ಹೋರಾಟದಿಂದ ಮಾತ್ರ..........

ಪುಟ 5 ರಿಂದ

3. ನಮ್ಮ ದೇಶ ಇಷ್ಟರಮಟ್ಟಿಗೆ ಅಭಿವೃದ್ಧಿ ಸಾಧಿಸಬೇಕಾದರೆ ನೆಹರೂರವರ ಮುಂದಾಲೋಚನೆಯಿಂದ ಆದ ಸರ್ಕಾರಿ ಉದ್ದಿಮೆಗಳು. ಅದನ್ನು ಬಲಪಡಿಸಿದ್ದಲ್ಲಿ ಒಂದೆಡೆ ಉದ್ಯೋಗ ಸೃಷ್ಟಿ, ಇನ್ನೊಂದೆಡೆ ದೇಶಕ್ಕೆ ಅಗತ್ಯವಾದ ವಸ್ತು ತಯಾರಿಕೆಯಲ್ಲಿ ಉದ್ದಿಮೆ ಅವಶ್ಯಕವಾಗಿದೆ.

4. ಬ್ಯಾಂಕ್ ಮತ್ತು ಜೀವ ವಿಮೆ ಸರ್ಕಾರಿ ವಲಯದಲ್ಲಿದ್ದರೂ ಸಹ ಪ್ರಭುತ್ವದ ಹಿಡಿದ ಬಂಡವಾಳಿಗರಿಗೆ ಹೆಚ್ಚಾಗಿ ಇರುವುದರಿಂದ ಇದರಿಂದ 40 ಸಾವಿರ ಕೋಟಿ ರೂ. ತೆಗೆದುಕೊಂಡು ಅದನ್ನು ಈಗ ಅವರ ಒತ್ತಡಕ್ಕೆ ತಲೆಬಾಗಿ ಮನ್ನಾ ಮಾಡಲು ಹೊರಟಿದೆ. ಸರ್ಕಾರದ ಯೋಜನೆಗಳಿಗೆ ಹಣ ಒದಗಿಸಲು ಶ್ರೀಮಂತ ಜಮೀನ್ದಾರರಿಗೆ ಕೃಷಿ ಆದಾಯ ತೆರಿಗೆ ಹಾಕಬೇಕು ಜೊತೆಗೆ ಕಾಳಸಂತೆ ಖದೀಮರ ಮೇಲೆ ಉಗ್ರಕ್ರಮ ಕೈಗೊಂಡು ಕಪ್ಪು ಹಣ ಹೊರತೆಗೆಯುವುದು. ಇದು ಸುಮಾರು 1000 ಕೋಟಿಗೂ ಮಿಗಿಲಾಗಿದೆ.

● **ಈ ಪರಿಹಾರಗಳನ್ನು ಜಾರಿಗೆ ತರುವ ಮಾರ್ಗ ಏನು?**

ಕಾಂ. ಸೂರಿ.: ಪರಿಹಾರ ಜಾರಿಗೆ ತರಬೇಕಾದರೆ ಈ ನೀತಿಯಿಂದ ತೊಂದರೆಗೊಳಗಾದ ಎಲ್ಲ ಜನವಿಭಾಗಗಳನ್ನು ಹೋರಾಟಕ್ಕೆ ಅಣಿನೆರೆಸುವುದು. ಅದೇ ಡಿ. 11 ಸಾರ್ವತ್ರಿಕ ಮುಷ್ಕರ ಹಾಗೂ ಜನಾಂದೋಲನ.

● ***2 ರಾಜ್ಯಗಳಲ್ಲಿ ಸೋಲುತ್ತಿರುವ ಬಿಜೆಪಿ ತನ್ನ ಆರ್ಥಿಕ ನೀತಿ ಬದಲಿಸಬಹುದೇ?***

ಕಾಂ.ಸೂರಿ: ನಾನು ಮೊದಲೇ ಹೇಳಿದ ಹಾಗೆ ಸರ್ಕಾರ ಬದಲಾದರೆ ಸಂಕಷ್ಟ ಬದಲಾಗದು. ಚುನಾವಣೆ ಫಲಿತಾಂಶದಿಂದ ಅವರಲ್ಲಿ ಬಿಕ್ಕಟ್ಟು ಉಂಟಾಗಿ ಸರ್ಕಾರ ಬಿದ್ದು ಕಾಂಗ್ರೆಸ್ ಬಂದರೂ ಹೋರಾಟ ಮುಂದುವರಿಯುವುದು.

● ***ಇಷ್ಟಾದನಂತರ ಕಾಂಗ್ರೆಸ್ ನೀತಿ ಬದಲಾಗಬಹುದೇ? ಇದೇ ಆರ್ಥಿಕ ನೀತಿ ಮುಂದುವರಿಯುವುದೇ?***

ಕಾಂ.ಸೂರಿ: ಎಡಪಕ್ಷಗಳ ಬೆಂಬಲ ಬೇಕಿರುವುದರಿಂದ ಸ್ವಲ್ಪ ಬದಲಾಗಬಹುದು. ಕಾಂಗ್ರೆಸ್ ಪಕ್ಷ ಕೂಡ ಜಗತ್ತಿನ ಬದಲಾವಣೆ ಗಮನಿಸಬೇಕಾಗಿದೆ. ಇದರ ಜೊತೆಗೆ ಜನತೆಯ ಹೋರಾಟವಿದ್ದರೇ ಈ ನೀತಿ ಬದಲಿಸಲು ಸಾಧ್ಯ.

● ***ಡಿಸೆಂಬರ್ 11 ರ ಮುಷ್ಕರದ ಸಂದೇಶವೇನು?***

ಕಾಂ. ಸೂರಿ: ಕಾರ್ಮಿಕರು, ರೈತರು, ವಿದ್ಯಾರ್ಥಿ-ಯುವಜನತೆ, ಬ್ಯಾಂಕ್, ಎಲ್‌ಐಸಿ ಮುಂತಾದ ನೌಕರರು ಹಮ್ಮಿಕೊಂಡಿರುವ ಮುಷ್ಕರ ತಮ್ಮ ಜೀವನ ಸುಧಾರಿಸಲು. ಮತ್ತೊಂದೆಡೆ ಕೋಮುವಾದಿಗಳು ಬಲಿಷ್ಟಗೊಳ್ಳುತ್ತಿರುವಾಗ ತಮ್ಮ ಜೀವನ ಸುಧಾರಣೆಗಾಗಿ ಡಿಸೆಂಬರ್ 11ರ ಮುಷ್ಕರವನ್ನು ಸಮಗ್ರವಾಗಿ ನಡೆಸಿ ಯಶಸ್ವಿಗೊಳಿಸಬೇಕಾಗಿದೆ.

ಶಿಕ್ಷಣದ ಕಾವೀಕರಣ ಮತ್ತು ಖಾಸಗೀಕರಣ

ಪುಟ 4ರಿಂದ

ಭಾಗ ಅಲೆಕ್ಸಾಂಡರ್‌ನ ದಾಳಿಯಿಂದ ಪ್ರಾರಂಭವಾಗಿದ್ದರೆ, ಎರಡನೇ ಭಾಗ ಮಹಮ್ಮದ್ ಘಜನಿಯ ದಾಳಿಯೊಂದಿಗೆ ಪ್ರಾರಂಭವಾಗಿದೆ!

★ ಕುತುಬ್‌ಮಿನಾರ್ ಕಟ್ಟಿಸಿದ್ದು ಸಮುದ್ರ ಗುಪ್ತ! ಅದರ ಮೊದಲ ಹೆಸರು ವಿಷ್ಣು ಸ್ಥಂಭ!

★ ಮಹಮ್ಮದ್ ಘೋರಿಯನ್ನು ಕೊಂದದ್ದು ಪೃಥ್ವಿರಾಜ್!

★ ಮುಸ್ಲಿಮರು ವಿಗ್ರಹಾರಾಧನೆಯನ್ನು ನಂಬುವುದಿಲ್ಲ, ಆದರೂ ಅವರು ಪ್ರತಿವರ್ಷ 'ಶಿವಲಿಂಗ ದರ್ಶನ'ಕ್ಕೆ ಮೆಕ್ಕಾಗೆ ಹೋಗುತ್ತಾರೆ!

★ ಯೇಸುಕ್ರಿಸ್ತನು ಹಿಮಾಲಯದಲ್ಲಿ ಹಲವಾರು ದಿನಗಳನ್ನು ಕಳೆದನು ಮತ್ತು ಭಾರತದ ಸಾಧುಗಳಿಂದ ಹಲವು ಸಂಗತಿಗಳನ್ನು ಕಲಿತನು!

★ ಪ್ರಾಚೀನ ಈಜಿಪ್ಟ್ ಧರ್ಮವು ಭಾರತದ ಸಂಪ್ರದಾಯಗಳನ್ನು ಆಧರಿಸಿ ಹುಟ್ಟಿದೆ!

ಓಹ್! ಬರೀ ಸುಳ್ಳುಗಳ ಸರಮಾಲೆ, ಭಾರತದ ಚರಿತ್ರೆ ಮತ್ತು ಸಂಸ್ಕೃತಿಯ ಬಗ್ಗೆ ಪೂರ್ತಿಯಾಗಿ ಸುಳ್ಳು ಚಿತ್ರಣವನ್ನು ನೀಡುವ ಪ್ರಯತ್ನ ಇಲ್ಲಿ ನಡೆದಿದೆ. ಉತ್ತರ ಪ್ರದೇಶದ ಶಿಕ್ಷಣ ಮಂತ್ರಿಯ ಮಾತುಗಳಲ್ಲೇ ಹೇಳುವುದಾದರೆ, "ಭಾರತಕ್ಕೆ ಯಾವುದೆಲ್ಲಾ ಪ್ರಾಚೀನವೋ, ಅವು ವಿಶ್ವಕ್ಕೇ ಅತ್ಯಂತ ಆಧುನಿಕವಾದುದಾಗಿವೆ"!

ಇಂತಹ ಸುಳ್ಳು ರಾಷ್ಟ್ರೀಯವಾದದ ಹೆಸರಲ್ಲಿ ಧರ್ಮಾಂಧತೆಯನ್ನು, ಅಸಹಿಷ್ಣುತೆಯನ್ನು, ಅವೈಜ್ಞಾನಿಕತೆಯನ್ನು, ಕೋಮುವಾದವನ್ನು ಬೆಳೆಸಲು ಆರ್‌ಎಸ್‌ಎಸ್ ನೇತೃತ್ವದ ಬಿಜೆಪಿ ಸರಕಾರ ತೀರ್ಮಾನಿಸಿದೆ. ಇಂತಹ ಉದ್ದೇಶಕ್ಕೆ ಶಿಕ್ಷಣ ಸಚಿವರುಗಳ ಸಮ್ಮೇಳನವನ್ನು ಮಾನ್ಯ ಜೋಶಿಯವರು ಕರೆದದ್ದು ಎಂಬುದನ್ನು ಗುರುತಿಸಬೇಕು.

ಪೂರ್ಣಪ್ರಮಾಣದ ವ್ಯಾಪಾರಕ್ಕೆ ತಯಾರಿ: ಶಿಕ್ಷಣಕ್ಕೆ ಹೆಚ್ಚು ಹಣ ನೀಡುತ್ತೇವೆ, ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣ ನೀಡುತ್ತೇವೆ ಮುಂತಾದ ಮಂತ್ರಗಳನ್ನು ಜಪಿಸುತ್ತಲೇ 'ಸ್ವಂತ ಹಣದ ಶಿಕ್ಷಣ'ವನ್ನು ಹಿಂದಿನ ಕಾಂಗ್ರೆಸ್ ಸರ್ಕಾರಕ್ಕಿಂತಲೂ ಒಂದೆಜ್ಜೆ ಮುಂದೆ ಹೋಗಿ ಉನ್ನತ ಶಿಕ್ಷಣವನ್ನು ಈಗಿರುವುದಕ್ಕಿಂತ ವಿಸ್ತರಿಸಬಾರದು ಎಂದಿದ್ದಾರೆ. ಉನ್ನತ ಶಿಕ್ಷಣಕ್ಕೆ ನೀಡುತ್ತಿದ್ದ ಹಣವನ್ನು 2 ವರ್ಷಗಳಲ್ಲಿ ಶೇ. 25 ಕ್ಕೆ ಇಳಿಸುವುದಾಗಿ ಹೇಳಿದ್ದಾರೆ. ನಮ್ಮ ದೇಶದಲ್ಲಿ ಕಾಲೇಜಿಗೆ ಹೋಗಬಹುದಾದ ವಯೋಮಾನದಲ್ಲಿ ಕೇವಲ ಶೇ 6ರಷ್ಟು ಮಾತ್ರ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ ಎಂಬ ಗಂಭೀರ ಪರಿಸ್ಥಿತಿಯಲ್ಲಿ ಅಪ್ಪಟ ಚಡ್ಡಿದಾರಿ ಡಾ|| ಜೋಶಿಯವರ ಈ ಪ್ರಸ್ತಾಪಗಳನ್ನು ಗಮನಿಸಬೇಕಾಗಿದೆ. ಮುಂದಿನ ಚಳಿಗಾಲದ ಸಂಸತ್ ಅಧಿವೇಶನದಲ್ಲಿ ಖಾಸಗಿ ವಿ.ವಿ.ಗಳ ಮಸೂದೆಯನ್ನು (ಈಗ Self-Financing Universities Bill ಹೆಸರಲ್ಲಿ) ಮಂಡಿಸುವುದಾಗಿ ಹೇಳಿದ್ದಾರೆ.

ಇದರಿಂದ ಸಮಾಜದ ಹಿಂದುಳಿದ ವರ್ಗಗಳ, ಪ.ಜಾತಿ ಮತ್ತು ಪ.ಪಂಗಡಗಳ ಮೇಲೆ ಮತ್ತು ಮುಖ್ಯವಾಗಿ ಮಹಿಳೆಯರ, ಬಡಜನರ ಶೈಕ್ಷಣಿಕ ಪ್ರಗತಿಯ ಮೇಲೆ ಮಾರಕ ಪರಿಣಾಮಗಳು ಬೀರಲಿವೆ. ಒಂದು ಕಡೆ ಪ್ರಾಥಮಿಕ ಶಿಕ್ಷಣವನ್ನು ಖಾಸಗೀಕರಿಸುವುದು ಮತ್ತು ಆರ್.ಎಸ್.ಎಸ್.ನ ನಿಯಂತ್ರಣಕ್ಕೆ ತಂದು ಕೋಮುವಾದಿಗೊಳಿಸುವುದು, ಮತ್ತೊಂದು ಕಡೆ ಉನ್ನತ ಶಿಕ್ಷಣವನ್ನು ಶ್ರೀಮಂತ ವರ್ಗಕ್ಕೆ ಸೀಮಿತಗೊಳಿಸಿ ಸಾಮಾನ್ಯ ಜನರಿಗೆ ವಂಚಿಸುವುದು. ಮನುಧರ್ಮಾಧಾರಿತ ಮೋಸದ ನೀತಿಯನ್ನು ಜಾರಿಗೊಳಿಸಲು ಬಿಜೆಪಿ ಸರ್ಕಾರದ ಪ್ರಯತ್ನ ಹೀಗೆಲ್ಲಾ ನಡೆದಿದೆ.

ಇದುವರೆಗೆ ಜನತೆ ಸಾಧಿಸಿರುವ ಎಲ್ಲಾ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು, ಹಕ್ಕುಗಳನ್ನು, ಸಂವಿಧಾನದ ಆಶಯಗಳನ್ನು ನಾಶಮಾಡುವ ಪ್ರಯತ್ನಗಳಿವು. ಜನತೆಯ ತ್ಯಾಗ ಬಲಿದಾನಗಳಿಂದ ಬಂದ ಭಾರತದ ಸ್ವಾತಂತ್ರ್ಯವನ್ನು ಅದರ ಸರ್ಕಾರವನ್ನು ಇಂತಹ ಜನವಿರೋಧಿಗಳ, ಪ್ರಗತಿಯ ವಿರೋಧಿಗಳ ಕೈಗೆ ಬಿಟ್ಟು ಸುಮ್ಮನೆ ಕೂರುವ ಕಾಲವಲ್ಲ ಇದು. ಆದ್ದರಿಂದಲೇ ಡಿಸೆಂಬರ್ 11ರ ಮುಷ್ಕರ- ಇಡೀ ದೇಶದ ವಿದ್ಯಾರ್ಥಿಗಳು ಒಕ್ಕೂರಲಿನಿಂದ ನಡೆಸುತ್ತಿರುವ ಅ.ಭಾರತ ಶಾಲಾ ಕಾಲೇಜುಗಳ ಮುಷ್ಕರ.

ಥಾಯ್ಲೆಂಡಿನಲ್ಲಿ.......

ಪುಟ 4 ರಿಂದ

ಅಡಚಣೆ, ಚರ್ಚೆಗೆ ದೇಶದೊಳಗೆ ನೆರೆ ದೇಶಗಳಿಂದಾಗಿ ಕೃಷಿ ರಫ್ತಿನಲ್ಲಿ ಇಳಿಕೆ-ಇವೆಲ್ಲ ಈ ಸ್ಥಗಿತತೆಗೆ ಕಾರಣ ಎಂದು ಹೇಳಲಾಗುತ್ತಿದೆ.

ಮೆಕ್ಸಿಕೋದ ಆರ್ಥಿಕದಂತೆ ಅಂತರ್ರಾಷ್ಟ್ರೀಯ ಬ್ಯಾಂಕುಗಳಿಂದ ಪಡೆದ ಅಲ್ಪಾವಧಿಯ ಸಾಲಗಳು ಹಾಗೂ ಥಾಯ್ಲೆಂಡಿನ ಶೇರು ಮಾರುಕಟ್ಟೆಗೆ ವಿದೇಶಗಳಿಂದ ಬರುವ ಬಂಡವಾಳದ ಮೇಲೆಯೇ ಹೆಚ್ಚಾಗಿ ಅವಲಂಬಿಸಿರುವ ನೀತಿಯನ್ನು 1998 ರಿಂದ ಅನುಸರಿಸಿದ್ದು, ಹಣಕಾಸು ರಂಗದ ಮೇಲಿನ ನಿಯಂತ್ರಣಗಳನ್ನು ತೆಗೆದು ಅದನ್ನು ಮಾರುಕಟ್ಟೆ ಶಕ್ತಿಗಳಿಗೆ ತೆರೆದು ಕೊಟ್ಟದ್ದು ಮತ್ತೊಂದು ಪ್ರಮುಖ ಕಾರಣವೆನ್ನಲಾಗುತ್ತಿದೆ. ಬಂಡವಾಳ ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗದೆ ಜಮೀನು ಖರೀದಿಯಲ್ಲಿ, ರಿಯಲ್ ಎಸ್ಟೇಟ್‌ನಲ್ಲಿ ಹೆಚ್ಚೆಚ್ಚು ತೊಡಗಲಾರಂಭಿಸಿತು - ತಕ್ಷಣದ ಲಾಭದಾಸೆಯಿಂದ. ಇದರ ಪರಿಣಾಮವೆಂದರೆ ರಿಯಲ್ ಎಸ್ಟೇಟ್ (ಜಮೀನು ವ್ಯವಹಾರಗಳ) ಬೆಲೆ ಕುಸಿಯಲಾರಂಭಿಸಿತು. ಸಾಲಕ್ಕೆ ಆಧಾರವಾಗಿದ್ದ ಈ ಜಮೀನು ಬೆಲೆ ಕುಸಿತದಿಂದ ಬಹು ಪಾಲು ಹಣಕಾಸು ಸಂಸ್ಥೆಗಳು ಕುಸಿಯಲಾರಂಭಿಸಿದವು. ಫೆಬ್ರವರಿ 1997 ರಲ್ಲಿ ಥಾಯ್ಲೆಂಡಿನ ಅತಿ ದೊಡ್ಡ ಹಣಕಾಸು ಕಂಪನಿ 'ಫೈನಾನ್ಸ್ ಒನ್' ಕುಸಿಯಿತು. ದೇಶದಲ್ಲಿನ 91 ಹಣಕಾಸು ಕಂಪನಿಗಳಲ್ಲಿ 60 ಕ್ಕೂ ಹೆಚ್ಚು ಇಂತಹ ತೊಂದರೆಗಳಲ್ಲಿ ಸಿಲುಕಿಕೊಂಡಿವೆ ಎಂದು ಕಂಡ ಶೇರುಮಾರುಕಟ್ಟೆಯ ಜೂಜುಕೋರರು ತಮ್ಮ ಹಲ್ಲೆ ಆರಂಭಿಸಿದರು. ದೇಶೀ-ವಿದೇಶೀ ಹೂಡಿಕೆದಾರರು ತಮ್ಮಲ್ಲಿನ ಬಾಹ್ತ್ ಮಾರಿ ಡಾಲರುಗಳನ್ನು ಖರೀದಿಸಲಾರಂಭಿಸಿರು. ಥಾಯ್ಲೆಂಡಿನ ವಿನಿಮಯ ದರ ಪದ್ಧತಿ ಅದಕ್ಕೆ ನೆರವಾಯಿತು. ಬಾಹ್ತ್‌ನ ಮೇಲಿನ ಈ ಧಾಳಿಯನ್ನು ಎದುರಿಸಲು ಥಾಯ್ಲೆಂಡ್‌ನ ಕೇಂದ್ರೀಯ ಬ್ಯಾಂಕ್ 2300 ಕೋಟಿ ಡಾಲರುಗಳಷ್ಟು ಮೌಲ್ಯದ ಬಾಹ್ತ್‌ಗಳನ್ನು ಮಾರಿತು. ಬಡ್ಡಿ ದರಗಳನ್ನು ಹೆಚ್ಚಿಸಲಾಯಿತು. ಆದರೆ ಇದು ಸಮಸ್ಯೆಯನ್ನು ಪರಿಹರಿಸುವ ಬದಲು ಇನ್ನಷ್ಟು ಜಟಿಲಗೊಳಿಸಿತು. ಇದೇ ವೇಳೆಯಲ್ಲಿ ಅಂತರ್ರಾಷ್ಟ್ರೀಯ ಹಣಕಾಸು ಪರಿಸ್ಥಿತಿಯೂ ಕಠಿಣಗೊಂಡು ಥಾಯ್ಲೆಂಡಿನ ಶೇರು ಮಾರುಕಟ್ಟೆಗೆ ವಿದೇಶದಿಂದ ಬರುವ ಬಂಡವಾಳ ಇಳಿಮುಖವಾಯಿತು. ಮೇ 1997 ರಲ್ಲಿ ಶೇರು ಮಾರುಕಟ್ಟೆ ಬೆಲೆಗಳು 65% ದಷ್ಟು ಕುಸಿದವು. ಬಾಹ್ತ್‌ನ ಮೌಲ್ಯ ಡಾಲರಿಗೆದುರಾಗಿ 20% ದಷ್ಟು ಇಳಿಯಿತು.

ಆಗಸ್ಟ್ 1997 ರಲ್ಲಿ ಥಾಯ್ಲೆಂಡ್ ಈ ಬಿಕ್ಕಟ್ಟಿನಿಂದ ಪಾರಾಗಲು ಜಪಾನಿನ ಮುಂದೆ ಕೈಯೊಡ್ಡಬೇಕಾಯಿತು. ಜಪಾನ್ ನಿರಾಕರಿಸಿತು, ಆದರೆ ಐ.ಎಂ.ಎಫ್.ನ ಆಶ್ರಯದಲ್ಲಿ 'ಆರ್ಥಿಕ ಪುನರ್ರಚನೆ'ಯ ಹೆಸರಲ್ಲಿ ಭಾಗವಹಿಸುವುದಾಗಿ ಹೇಳಿತು. ಥಾಯ್ಲೆಂಡ್ ಸರಕಾರ ಐ.ಎಂ.ಎಫ್. ಎದುರು ಕೈಯೊಡ್ಡಿತು-ಕಠಿಣ ಶರತ್ತುಗಳ 1720 ಕೋಟಿ ಡಾಲರುಗಳ 'ಪರಿಹಾರ ಸಾಲ' ಪಡೆಯಿತು.

ಯಥಾಪ್ರಕಾರ ಹಣಕಾಸು ಜೂಜುಕೋರರ ಈ ಧಾಳಿಯ ಪರಿಣಾಮವನ್ನು ಎದುರಿಸಬೇಕಾಗಿ ಬಂದದ್ದು ಥಾಯ್ಲೆಂಡಿನ ಜನಸಾಮಾನ್ಯರು, ಕಾರ್ಮಿಕರು. ಹಣಕಾಸು ಕಂಪನಿಗಳು ಮುಚ್ಚಿ ಕನಿಷ್ಟ 40 ಸಾವಿರ ಮಂದಿ ಕೆಲಸ ಕಳಕೊಂಡರು. ಇತರ ಉದ್ದಿಮೆಗಳ ಹಿಂಜರಿತ, ಕ್ಲೋಶರ್‌ನಿಂದ 20 ಲಕ್ಷ ಮಂದಿ ಕೆಲಸ ಕಳೆದುಕೊಳ್ಳುವ ಭಯ ಆ ದೇಶವನ್ನಾವರಿಸಿತು. ಉದಾ: ಜನವರಿ 1998 ರಲ್ಲಿ ಆಟೋ ಬಿಡಿ ಭಾಗಗಳ ಕಾರ್ಖಾನೆಯ ಕಾರ್ಮಿಕರು ತಮ್ಮ ಸಂಬಳ ಕಡಿತದ ವಿರುದ್ಧ ಪ್ರತಿಭಟಿಸುತ್ತಿದ್ದಾಗ ಪೋಲಿಸರೊಂದಿಗೆ ತೀವ್ರ ಘರ್ಷಣೆಗಿಳಿಯಬೇಕಾಯಿತು. ಅಲ್ಲೀಗ ಐ.ಎಂ.ಎಫ್. ಶರತ್ತುಗಳ ವಿರುದ್ಧ ಪ್ರತಿಭಟನೆ ವ್ಯಾಪಕಗೊಳ್ಳುತ್ತಿದೆ. ○

'ಜಾಗತೀಕರಣ'ಕ್ಕೆ ದುಡಿಯುವ ಜನರ 'ಜಾಗತಿಕ' ಸವಾಲು

೯೦ ರ ದಶಕದಲ್ಲಿ ಜಾಗತೀಕರಣದ ನೀತಿಗಳನ್ನು ಜಗತ್ತಿನ ದುಡಿಯುವ ಜನರ ಮೇಲೆ ಹೊರಿಸುವ ಪ್ರಕ್ರಿಯೆ ತೀವ್ರವಾಯಿತು. ಆರಂಭದಿಂದಲೇ ಇದಕ್ಕೆ ದುಡಿಯುವ ಜನರ ಪ್ರತಿಭಟನೆಯೂ ಅಷ್ಟೇ ತೀವ್ರವಾಗಿದೆ. ಈ ವರ್ಷ ಕಂಡುಬಂದ ಬಂಡವಾಳಶಾಹಿ ವ್ಯವಸ್ಥೆಯ ಜಾಗತಿಕ ಆರ್ಥಿಕ ವ್ಯವಸ್ಥೆಯ ಬಿಕ್ಕಟ್ಟಿನ ನಂತರವಂತೂ, ದುಡಿಯುವ ಜನರ ಪ್ರತಿರೋಧ ಗರಿಗೆದರಿಕೊಂಡು ವ್ಯಾಪಕವಾಗಿದೆ. ಪ್ರತಿರೋಧ ಬಂಡವಾಳಶಾಹಿಯ ಮಕ್ಕಾ - ಮದೀನಗಳಾದ ಅಮೆರಿಕಾ, ಯುರೋಪುಗಳಿಂದ ಹಿಡಿದು ಎಲ್ಲಾ ಖಂಡಗಳಲ್ಲಿರುವ ಮೂರನೇ ಜಗತ್ತಿನ ದೇಶಗಳ ದುಡಿಯುವ ಜನರಿಂದ ಬಂದಿದೆ. ಈ 'ಜಾಗತಿಕ ಸವಾಲಿನ' ಇತ್ತೀಚಿನ ಮೈಲಿಗಲ್ಲುಗಳು



ದಕ್ಷಿಣ ಕೊರಿಯಾದ ಆರ್ಥಿಕವನ್ನು ನಾಶ ಮಾಡಿದವರನ್ನು ಜೈಲಿಗೆ ಹಾಕಿ ಎಂದು ಒತ್ತಾಯಿಸುತ್ತಿರುವ ಆ ದೇಶದ ಕಾರ್ಮಿಕರು.

ಮೆಕ್ಸಿಕೋದ ಚಿಯಾಪಾಸ್ ಪ್ರಾಂತ್ಯದಲ್ಲಿ ಆದಿವಾಸಿಗಳ, ರೈತರ ಸಶಸ್ತ್ರ ಹೋರಾಟ (1994) ಈ 'ಜಾಗತಿಕ' ಸವಾಲಿನ ಮೊದಲ ಮೈಲಿಗಲ್ಲು. ಚಿಯಾಪಾಸ್‌ನ ಪ್ರಮುಖ ಭಾಗಗಳನ್ನು ಹಲವು ವಾರಗಳ ಕಾಲ ವಶಪಡಿಸಿಕೊಂಡಿದ್ದರು ಚಿಯಾಪಾಸನ ಝೂಪಾಟಿಸ್ಟಾ ಗೆರಿಲ್ಲಾಗಳು. ಈಗಲೂ ಹಲವು ಭಾಗಗಳಲ್ಲಿ ಚಿಯಾಪಾಸ್ ಗೆರಿಲ್ಲಾಗಳು ಹೆಚ್ಚುಕಡಿಮೆ ಆ ಪ್ರದೇಶಗಳ ನಿಯಂತ್ರಣ ಹೊಂದಿದ್ದಾರೆ. ಮೆಕ್ಸಿಕೋವನ್ನು ಅಮೆರಿಕನ್ ಕೃಷಿ, ಕೈಗಾರಿಕಾ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರುವ ಮೆಕ್ಸಿಕೋ ಸರ್ಕಾರದ ವಿರುದ್ಧ ಈ ಸಶಸ್ತ್ರ ಹೋರಾಟ. ಈ ಹೋರಾಟದ ವಿರುದ್ಧ ಮೆಕ್ಸಿಕೋ ಮತ್ತು ಅಮೇರಿಕದ ಸೈನ್ಯ ಭಾರಿ ದಮನ ನಡೆಸುತ್ತಿವೆ. ಈ ದಮನ ಚಕ್ರದಲ್ಲಿ 1997 ರ ಕ್ರಿಸ್‌ಮಸ್‌ನ ಮೂರು ದಿನಗಳ ಮೊದಲು ಚಿಯಾಪಾಸ್‌ನ ಪ್ರಾಂತ್ಯದ ಒಂದು ಗ್ರಾಮದಲ್ಲಿ 45 ಜನರ ನರಮೇಧ ಅತ್ಯಂತ ಹೇಯವಾದದ್ದು.

★★

ಫ್ರೆಂಚ್ ಕಾರ್ಮಿಕರ ಮುಷ್ಕರ : ಅಭಿವೃದ್ಧ ಬಂಡವಾಳಶಾಹಿ ಜಗತ್ತಿನ ದುಡಿಯುವ ಜನರ ಮೊದಲ ರಣಕಹಳೆಯಾಗಿತ್ತು. ಆಗಿನ ಫ್ರೆಂಚ್ ಬಲಪಂಥೀಯ ಸರ್ಕಾರ ಯುರೋಪಿನ ಆರ್ಥಿಕ ಒಕ್ಕೂಟದ ಷರತ್ತುಗಳನ್ನು ಪೂರೈಸುವ ಹೆಸರಲ್ಲಿ, ಹಲವಾರು ಕಲ್ಯಾಣ ಕ್ರಮಗಳನ್ನು ಕಡಿತ ಮಾಡಿದ್ದರ ವಿರುದ್ಧ ಫ್ರೆಂಚ್ ಸಾರ್ವಜನಿಕ ವಲಯದ ಕಾರ್ಮಿಕರು ಹಲವು ವಾರಗಳ ಕಾಲ ಮುಷ್ಕರ ನಡೆಸಿದರು. ಪ್ಯಾರಿಸಿನಂತಹ ದೊಡ್ಡ ನಗರಗಳನ್ನು ಸ್ತಬ್ಧಗೊಳಿಸಿದ (ಮುಖ್ಯವಾಗಿ ಸಾರಿಗೆ ಕಾರ್ಮಿಕರ ಮುಷ್ಕರದಿಂದ) ಈ ಮುಷ್ಕರಕ್ಕೆ ಆಶ್ಚರ್ಯಕರ ಪ್ರಮಾಣದಲ್ಲಿ ಸಾರ್ವಜನಿಕ ಬೆಂಬಲ ವ್ಯಕ್ತವಾಯಿತು. 1968 ರ ಫ್ರಾನ್ಸಿನ ಕೆಂಪು ಮೇಯನ್ನು ಈ ಮುಷ್ಕರ ಹಲವರಿಗೆ ನೆನಪಿಸಿತು. ಹಲವು ವಾರಗಳ ಕಾಲ ಸಾರ್ವಜನಿಕ ಜೀವನ ಅಸ್ತವ್ಯಸ್ತ ಗೊಳಿಸಿದರೂ, ಮುಷ್ಕರದ ಮುಖ್ಯ ಬೇಡಿಕೆಗಳಿಗೆ ಅಪಾರ ಜನ ಬೆಂಬಲ ಕಂಡು ಬಂದು, ಸರ್ಕಾರ ಮಣಿಯಬೇಕಾಯಿತು. ಮುಷ್ಕರ ನಿರತ ಕಾರ್ಮಿಕರ ಹಲವು ಮುಖ್ಯ ಬೇಡಿಕೆಗಳಿಗೆ ಸರ್ಕಾರ ಮಣಿಯ ಬೇಕಾಯಿತು. ಬಲಪಂಥೀಯ ಸರ್ಕಾರದ ಪತನ ಅಲ್ಲಿಂದಲೇ ಆರಂಭವಾಯಿತು. ಇತ್ತೀಚೆಗೆ ಸಮಾಜವಾದಿ, ಕಮ್ಯುನಿಸ್ಟ್ ಪಕ್ಷಗಳು ಚುನಾವಣೆಯಲ್ಲಿ ಗೆದ್ದು ಬಂದು ಎಡ-ಮಧ್ಯಮ ಪಂಥೀಯ ಒಕ್ಕೂಟ ಅಧಿಕಾರಕ್ಕೆ ಬರಲು, ಈ ಮುಷ್ಕರ ಮುಖ್ಯ ಕಾರಣವಾಗಿತ್ತು.

★★

ಜರ್ಮನ್ ಸಾರ್ವಜನಿಕ ವಲಯದ ಕಾರ್ಮಿಕರ ಮುಷ್ಕರ ಯುರೋಪಿನ ದುಡಿಯುವ ಜನರ ಹೋರಾಟದ ಇನ್ನೊಂದು ಮೈಲಿಗಲ್ಲು. ಇಲ್ಲೂ ಕಲ್ಯಾಣ ಕ್ರಮಗಳ ಕಡಿತದ ವಿರುದ್ಧವಾಗಿತ್ತು ಮುಷ್ಕರ. ಇಲ್ಲೂ ಮುಷ್ಕರದ ಹಲವು ಮುಖ್ಯ ಬೇಡಿಕೆಗಳಿಗೆ ಸರ್ಕಾರ ಮಣಿಯಬೇಕಾಯಿತು. ಕಾರ್ಮಿಕರ ಹಲವು ಹೋರಾಟಗಳು 16 ವರ್ಷಗಳಿಂದ ಆಳುತ್ತಿದ್ದ ಬಲಪಂಥೀಯ ಒಕ್ಕೂಟದ ಬುಡವನ್ನೇ ಅಲುಗಾಡಿಸಿ, ಇತ್ತೀಚಿನ ಚುನಾವಣೆಯಲ್ಲಿ ಎಡ-ಮಧ್ಯಮ ಪಂಥೀಯ ಒಕ್ಕೂಟ ಅಧಿಕಾರಕ್ಕೆ ಬರುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಯುರೋಪಿನ ಆರ್ಥಿಕ ಒಕ್ಕೂಟದ ಪ್ರಮುಖ ಲಾಭ ಪಡೆಯಲು ಜರ್ಮನಿಯಲ್ಲಿ ಈ ದುಡಿಯುವ ಜನ ಪ್ರತಿಭಟನೆ 'ಜಾಗತೀಕರಣ' ಜಗತ್ತಿನ ಎಲ್ಲಾ ದುಡಿಯುವ ಜನ-ವಿರೋಧಿ ನೀತಿ ಎಂದು ಸ್ಪಷ್ಟಪಡಿಸುತ್ತದೆ.

★★

ದ.ಕೊರಿಯಾದಲ್ಲಿ ಬಿಕ್ಕಟ್ಟನ್ನು ಕಾರ್ಮಿಕರ ಮೇಲೆ ಹೊರಿಸುವ ಪ್ರಯತ್ನಕ್ಕೆ ಸತತ ಪ್ರತಿರೋಧ: ಜಾಗತೀಕರಣದ ವಿರುದ್ಧ ಹೋರಾಟದಲ್ಲಿ ಅತ್ಯಂತ ಗಮನಾರ್ಹವಾದದ್ದು 'ಏಶ್ಯನ್ ಹುಲಿ' ಗಳಲ್ಲಿ ಒಂದು ಎನಿಸಿಕೊಂಡಿದ್ದ ದಕ್ಷಿಣ ಕೊರಿಯಾದ 'ಪವಾಡ' ಕಾರ್ಮಿಕ ವರ್ಗದ ದಮನದ ಮೇಲೆ ನಿಂತಿತ್ತು. ಬಿಕ್ಕಟ್ಟು ತೀವ್ರವಾಗುತ್ತಿದ್ದಂತೆ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿ ಬಿಕ್ಕಟ್ಟು ಪರಿಹರಿಸುವ ಪ್ರಯತ್ನಕ್ಕೆ ತೀವ್ರ ಪ್ರತಿರೋಧ ಬಂತು. 1998ರ ಆರಂಭದಿಂದಲೇ ಹಲವಾರು ಸಾರ್ವತ್ರಿಕ ಮುಷ್ಕರಗಳು, ಕೈಗಾರಿಕಾವಾರು ಮುಷ್ಕರಗಳು ನಡೆದಿವೆ. ಕಾರ್ಮಿಕರನ್ನು

ಪುಟ 8 ನೋಡಿ

ಉದಾರೀಕರಣದ ಮಹಾಪೂರಕ್ಕೆ ಭಾರತದ ದುಡಿಯುವ ವರ್ಗದ ಒಡ್ಡು

ಈ ಒಡ್ಡು ಇನ್ನೂ ಪ್ರಬಲವಾಗಿ ಉದಾರೀಕರಣದ ಮಹಾಪೂರವನ್ನು ಬತ್ತಿಸಬೇಕಾದ ಅವಶ್ಯಕತೆ ಇಂದು ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಡಿಸೆಂಬರ್ 11 ರ ಮಹಾ ಕಾರ್ಯಾಚರಣೆಗೆ ಈ ದಿಕ್ಕಿನಲ್ಲಿ ಇನ್ನೊಂದು ಮೈಲಿಗಲ್ಲಾಗಲಿದೆ.

ಆಗ್ನೇಯ ಏಶಿಯಾದ ದೇಶಗಳ ಆರ್ಥಿಕಗಳನ್ನು ಹುಲಿಗೆ ಹೋಲಿಸಲಾಗಿತ್ತು. ರಫ್ತು ಆಧಾರಿತ ಆರ್ಥಿಕ ಈ ದೇಶಗಳಲ್ಲಿ ಬೆಳೆದು ಬಂದು ಬಂಡವಾಳಶಾಹಿ ವ್ಯವಸ್ಥೆಯ ಸುಂದರ ಕೂಸುಗಳು ಇವು ಎಂದು ಬಿಂಬಿಸಲಾಗಿತ್ತು. ಈ ಆರ್ಥಿಕ ಸೌಧಗಳು ಕುಸಿದುಬಿದ್ದವು. ಜಗತ್ತಿನಾದ್ಯಂತ ಹಣಕಾಸು ಬಿಕ್ಕಟ್ಟು ಕಾಣತೊಡಗಿದಾಗ ಈ ಆರ್ಥಿಕಗಳ ಅಂತಸತ್ವ ಎಂತಹದ್ದು ಎಂಬುದು ಪೂರ್ತಿ ಬೆಳಕಿಗೆ ಬಂತು.

ಭಾರತದ ಆರ್ಥಿಕ ಭದ್ರ ಬುನಾದಿಯ ಮೇಲೆ ನಿಂತಿದೆ, ಸರಿಯಾದ ದಿಸೆಯಲ್ಲಿ ಆರ್ಥಿಕ ಸುಧಾರಣೆಗಳನ್ನು ಮಾಡಿದ್ದರಿಂದ ಭಾರತ ಅಂತಹ ಬಿಕ್ಕಟ್ಟನ್ನು ಎದುರಿಸುವಂತಹ ಪ್ರಸಂಗ ಬರಲಿಲ್ಲ ಎಂಬುದು ಉದಾರೀಕರಣವಾದಿಗಳ ವಾದ. ಭಾರತ ಕನಿಷ್ಟ ಗಾಯಗಳೊಂದಿಗೆ ಮರಳಿದ ಯೋಧ ಎಂದು ಒಂದು ಕಡೆ ವರ್ಣಿಸಿದರೆ ಏಶಿಯಾದ ಹತ್ತು ಅತಿ ಸಮರ್ಥ ಕಂಪನಿಗಳಲ್ಲಿ ಏಳು ಭಾರತದಲ್ಲೇ ಇವೆ ಎಂದು ಅಂಕೆ-ಸಂಖ್ಯೆಯನ್ನು ನೀಡಲಾಗುತ್ತಿದೆ.

ನಮ್ಮ ಸಮೂಹ ಮಾಧ್ಯಮಗಳು (ಆಳುವ ವರ್ಗದ ಮಾಧ್ಯಮಗಳು) ಹೇಳುತ್ತಿರುವಂತೆ ಉದಾರೀಕರಣವನ್ನು, ಸರಿಯಾದ ರೀತಿಯಲ್ಲಿ ಮಾಡಿದ್ದರಿಂದ ಇದು ಸಾಧ್ಯವಾಯಿತೆ ಎಂಬುದು ಪ್ರಶ್ನೆ. ಖಂಡಿತಾ ಇಲ್ಲ. ಭಾರತದ ದುಡಿಯುವ ವರ್ಗ ಉದಾರೀಕರಣಕ್ಕೆ ಸಮರ್ಥವಾಗಿ ಕಡಿವಾಣ ಹಾಕಿದ್ದರಿಂದಲೇ ಈ ತಡೆ ಸಾಧ್ಯವಾಗಿದೆ. ಏಶಿಯಾದ ಇತರ ದೇಶಗಳು ಅಲ್ಲೋಲ ಕಲ್ಲೋಲವಾಗಿರುವಾಗಲೂ ಭಾರತದ ಮೇಲೆ ತೀವ್ರವಾದ ಪರಿಣಾಮ ಉಂಟಾಗಿಲ್ಲ.

ಉದಾರೀಕರಣ ವಿವಿಧ ವಲಯದಲ್ಲಿ ಯಾವ ಪ್ರಮಾಣದಲ್ಲಿ ಆಗಬೇಕೆಂದು ಯೋಜಿಸಲಾಗಿತ್ತು ಮತ್ತು ಯಾವ ಪ್ರಮಾಣದಲ್ಲಿ ಆಗಿದೆ ಮತ್ತು ಅದರ ಕಾರಣಗಳನ್ನು ನೋಡಿದರೆ ಇದು ನಮಗೆ ಸ್ಪಷ್ಟವಾಗುತ್ತದೆ.

ಹಣಕಾಸು ವಲಯ: ಹಣಕಾಸು ವಲಯದ ಉದಾರೀಕರಣ ಎಲ್ಲ ಉದಾರೀಕರಣಗಳ ತಾಯಿ. ಹಣಕಾಸು ವಲಯವನ್ನು ಪೂರ್ತಿಯಾಗಿ ಮಾಡಿದರೆ ಉದಾರೀಕರಣಕ್ಕೆ ಹೆದ್ದಾರಿ ತೆರೆದಂತೆ. ಈ ವಲಯದ ಉದಾರೀಕರಣಕ್ಕೆ ನರಸಿಂಹಂ ನೇತೃತ್ವದ ಮೊದಲನೇ ಸಮಿತಿ ಹಲವು ಶಿಫಾರಸುಗಳನ್ನು ಮಾಡಿತ್ತು.

- ನಾಲ್ಕು ಜಾಗತಿಕ ಮಟ್ಟದ ಬ್ಯಾಂಕುಗಳು ಮತ್ತು ಎಂಟು ರಾಷ್ಟ್ರೀಯ ಮಟ್ಟದ ಬ್ಯಾಂಕುಗಳಿರಬೇಕು. ಅಂದರೆ ಇರುವ ಸರ್ಕಾರಿ ವಲಯದ ಬ್ಯಾಂಕುಗಳಲ್ಲಿ ಹಲವು ಮುಚ್ಚಬೇಕು.
- ಖಾಸಗಿ ಬ್ಯಾಂಕುಗಳಿಗೆ/ವಿದೇಶಿ ಬ್ಯಾಂಕುಗಳಿಗೆ ಮುಕ್ತ ಅವಕಾಶವಿರಬೇಕು.
- ಆದ್ಯತೆಯ ವಲಯಕ್ಕೆ ಸಾಲ ನೀಡುವ ಗುರಿಯನ್ನು ಶೇ 10 ಕ್ಕೆ ಇಳಿಸಬೇಕು.
- ಬ್ಯಾಂಕುಗಳನ್ನು ಸರ್ಕಾರ ನಿರ್ದೇಶಿಸುವಂತಿರಬಾರದು.
- ಬ್ಯಾಂಕುಗಳು ಲಾಭದಾಯಕವಾಗಿ ನಡೆಯುವಂತಾಗಬೇಕು ಇತ್ಯಾದಿ

ಈ ಶಿಫಾರಸುಗಳನ್ನು ಜಾರಿ ಮಾಡಹೊರಟಾಗ ದುಡಿಯುವ ವರ್ಗ ತೀವ್ರ ಪ್ರತಿಭಟನೆ ತೋರಿತು. ಈ ಪ್ರತಿಭಟನೆ, ಹೋರಾಟಗಳಿಂದಾಗಿ ಸರ್ಕಾರ ಉದ್ದೇಶಿತ ಪ್ರಮಾಣದಲ್ಲಿ ಉದಾರೀಕರಣ ಮಾಡುವುದು ಸಾಧ್ಯವಾಗಲಿಲ್ಲ.

1991 ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಹಲವು ಉದಾರೀಕರಣದ ಕ್ರಮಗಳನ್ನು ಜಾರಿಗೆ ತಂದರೂ ಆರ್ಥಿಕದಲ್ಲಿನ ಮೂಲಭೂತ ಕಾಳಜಿಗಳನ್ನು ಪೂರ್ತಿ ಬದಲಾಯಿಸಲು ಸಾಧ್ಯವಾಗಲಿಲ್ಲ. ಸಾಮಾಜಿಕ ವಲಯದ ಕಡೆ ಗಮನ ನೀಡಲೇಬೇಕಾದ ಅನಿವಾರ್ಯತೆ ದುಡಿವ ಜನ ಹೇರಿದ ಒತ್ತಡದಿಂದಾಗಿ ಬಂತು.

ಉದ್ದಿಮೆಗಳಲ್ಲಿ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೆ ತರಲು ಸಾಧ್ಯವಾಗಲಿಲ್ಲ. ಹಾಗೆಯೇ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಸಾರಾಸಗಟಾಗಿ ಮಾರಾಟ ಮಾಡುವ ಪ್ರಯತ್ನಗಳಿಗೂ ಯಶಸ್ಸು ದೊರೆಯಲಿಲ್ಲ.

ಕೃಷಿಗೆ ನೀಡಬೇಕಾದ ಸಹಾಯಧನದಲ್ಲಿ ಕಡಿತ ಮಾಡಬೇಕೆಂದು ಪ್ರಯತ್ನಿಸಿದರೆ ಅದೂ ಯಶಸ್ವಿಯಾಗಲಿಲ್ಲ.

ರೂಪಾಯಿಯ ಪೂರ್ಣ ಪರಿವರ್ತನೀಯತೆಯ ಕಡೆಗೆ ಕೆಲವು ಕ್ರಮಗಳನ್ನು ಕೈಗೊಂಡರೂ ಪೂರ್ಣ ಪರಿವರ್ತನೀಯತೆ ಜಾರಿಗೆ ಬರುವುದಕ್ಕೆ ತೀವ್ರವಾದ ವಿರೋಧವನ್ನು ಸರ್ಕಾರ ಎದುರಿಸಬೇಕಾಯಿತು.

ಬಂಡವಾಳ ಖಾತೆಯಲ್ಲಿನ ಪರಿವರ್ತನೀಯತೆ ಬರಬೇಕಾಗಿರುವಾಗ ಅದಕ್ಕೆ ಕೆಲವು ಪ್ರತಿಭಟನೆ ಬರುವುದರ ಜೊತೆಗೆ ಏಶಿಯನ್ ಬಿಕ್ಕಟ್ಟು ಕಂಡುಬಂದು ಈಗ ಐಎಂಎಫ್ ಸಹಿತ ಬಂಡವಾಳ ಖಾತೆಯ ಪೂರ್ಣ ಪರಿವರ್ತನೀಯತೆ ನಿಧಾನವಾಗಿ ಮಾತ್ರ ಬರಬೇಕು ಎಂದು ಹೇಳುವಂತಾಗಿದೆ.

ರೂಪಾಯಿಯ ಪೂರ್ಣ ಪರಿವರ್ತನೀಯತೆಗೆ ದುಡಿವ ವರ್ಗ ಒಡ್ಡಿದ ತಡೆ ಇಂದು ಜಾಗತಿಕ ಹಣಕಾಸು ಬಿಕ್ಕಟ್ಟು ಉಂಟಾದಾಗಲೂ ಭಾರತ ಈ ಬಿಕ್ಕಟ್ಟಿನಿಂದ ಬಹುಪಾಲು ಹೊರಗುಳಿಯುವಂತೆ ಮಾಡಲು ನೆರವಾಗಿದೆ. ರೂಪಾಯಿಯ ಪೂರ್ಣ ಪರಿವರ್ತನೀಯತೆ ಆಗಲೇ ಜಾರಿಗೆ ಬಂದಿದ್ದರೆ ಒಡ್ಡುಗಳಿಲ್ಲದ ಕಡೆ ನೀರುವ ನುಗ್ಗುವಂತೆ ಹಣಕಾಸು ಬಿಕ್ಕಟ್ಟು ಭಾರತದೊಳಕ್ಕೆ ನುಗ್ಗಿ ಬರುತ್ತಿತ್ತು. ಹೀಗಾಗದಂತೆ ತಡೆದುದು ದುಡಿಯುವ ವರ್ಗದ ಪ್ರತಿರೋಧ.

ಈಗಾಗಲೇ ಜಾರಿಗೆ ತಂದಿರುವ ಉದಾರೀಕರಣದ ಕ್ರಮಗಳಿಂದಾಗಿ ಭಾರತ ಆರ್ಥಿಕ ವ್ಯವಸ್ಥೆ ಅಂತರ್ರಾಷ್ಟ್ರೀಯ ಧಾಳಿಗಳಿಗೆ ತುತ್ತಾಗುವ ಸಾಧ್ಯತೆಯನ್ನು ಹೆಚ್ಚಿಸಿದೆ ಮತ್ತು ಭಾರತದ ಪರಾವಲಂಬನೆಯನ್ನು ಹೆಚ್ಚಿಸಿದೆ ಎಂಬುದರಲ್ಲಿ ಸಂಶಯವೇ ಇಲ್ಲ. ಅದರ ಬಂಡವಾಳಿಗರು-ಸಾಮ್ರಾಜ್ಯಶಾಹಿಗಳು ಬಯಸಿದಂತಹ ಉದಾರೀಕರಣದ ಸ್ಥಿತಿ ಉಂಟಾಗುವುದು ಸಾಧ್ಯವಾಗಲಿಲ್ಲ.

ಸತತ ಒತ್ತಡ

ರೂಪಾಯಿಯ ಪೂರ್ಣ ಪರಿವರ್ತನೆಗೆ ಸತತವಾಗಿ ಐಎಂಎಫ್ ವಿಶ್ವಬ್ಯಾಂಕುಗಳು ಒತ್ತಡ ಹೇರಿದರೂ ಸರ್ಕಾರ ಇದನ್ನು ಹಠಾತ್ತಾಗಿ ಮಾಡುವ ಸಾಧ್ಯತೆ ಇರಲಿಲ್ಲ. ದೇಶದ ದುಡಿವ ವರ್ಗ ಒಡ್ಡುವ ತಡೆಯ ಪ್ರಜ್ಞೆ ಸರ್ಕಾರಕ್ಕೆ ಸದಾ ಇತ್ತು. ಸಂಯುಕ್ತ ರಂಗ ಸರ್ಕಾರಕ್ಕಂತೂ ಈ ಪ್ರಜ್ಞೆ ತೀವ್ರವಾಗೇ ಇತ್ತು. ಯಾಕೆಂದರೆ ಸಂಯುಕ್ತ ರಂಗದ ಸಮಾನ ಕನಿಷ್ಟ ಕಾರ್ಯಕ್ರಮ ಮತ್ತು ಅದನ್ನು ಜಾರಿಗೊಳಿಸಲು ಸಿಪಿಐ(ಎಂ) ಮತು ಎಡ ಪಕ್ಷಗಳ ಒತ್ತಡವನ್ನು ಸರ್ಕಾರ ದಿನನಿತ್ಯ ಅನುಭವಿಸುತ್ತಿತ್ತು.

ಎಸ್.ಎಸ್. ತಾರಪೂರ ಎಂಬ ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್‌ನ ನೇತೃತ್ವದ ಸಮಿತಿ ರೂಪಾಯಿಯ ಪೂರ್ಣ ಪರಿವರ್ತನೀಯತೆಯನ್ನು ಐದು ವರ್ಷಗಳಲ್ಲಿ ಜಾರಿಗೆ ತರಬೇಕೆಂಬ ಶಿಫಾರಸು ಮಾಡಿದರೂ ಅದಕ್ಕೆ ಹಲವು ಪೂರ್ವಭಾವಿ ಶರತ್ತುಗಳನ್ನು ವಿಧಿಸಿತು. ಉದಾಹರಣೆಗೆ ಹಣಕಾಸು ಕೊರತೆಯ ಪ್ರಮಾಣ ಪೂರ್ತಿ ಹತೋಟಿಗೆ ಸಿಗಬೇಕೆಂಬ, ಬ್ಯಾಂಕುಗಳ ಬರಡು ಆಸ್ತಿಗಳ ಪ್ರಮಾಣ ತೀರ ಕಡಿಮೆ ಇರಬೇಕೆಂಬ ಶರತ್ತುಗಳು. ಈ ಷರತ್ತುಗಳನ್ನು ಪೂರೈಸುವುದು ಸುಲಭವಲ್ಲ. ಅಂದರೆ ಪೂರ್ಣ ಪರಿವರ್ತನೀಯತೆ ಕೂಡಲೇ ಜಾರಿಗೆ ಬರುವಂತದ್ದಲ್ಲ ಎಂಬ ನಿಲುವನ್ನು ಪರೋಕ್ಷವಾಗಿ ಸರ್ಕಾರವೇ ತೆಗೆದುಕೊಳ್ಳಬೇಕಾಯಿತು.

ವಿಮಾ ಕ್ಷೇತ್ರದ ಉದಾರೀಕರಣವೂ ಸಹ ಇಂತಹದ್ದೇ ಪರಿಣಾಮವನ್ನು ಎದುರಿಸಿತು. ಸಂಯುಕ್ತ ರಂಗ ಸರ್ಕಾರ ವಿಮಾ ಮಸೂದೆಯನ್ನು ಮಂಡಿಸ ಹೊರಟು ವಿಫಲವಾಯಿತು. ಭಾರತದ ದುಡಿವ ವರ್ಗ

ಪುಟ 8 ನೋಡಿ

ಸಾರ್ವಜನಿಕ ವಲಯದ ಮಾರಾಟ-ದೇಶದ ಅಮೂಲ್ಯ ಆಸ್ತಿಯ ಲೂಟಿ

ಲಾಭ ಗಳಿಸುತ್ತಿರುವ ಸಾರ್ವಜನಿಕ ವಲಯದ ಘಟಕಗಳ 51% ಶೇರುಗಳನ್ನು ಒಂದು ರಾಷ್ಟ್ರೀಯ ಶೇರು ಧಾರಕ ಟ್ರಸ್ಟ್ ಅಥವಾ 'ವಿಶೇಷ ಉದ್ದೇಶದ ವಾಹನ'(ಎಸ್.ಪಿ.ವಿ)ಕ್ಕೆ ವರ್ಗಾಯಿಸುವ ಯೋಜನೆಯೊಂದನ್ನು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ ಎಂದು ವರದಿಯಾಗಿದೆ. ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕುಗಳು ಈ ಟ್ರಸ್ಟಿನಿಂದ ಶೇರುಗಳನ್ನು ಖರೀದಿಸಿ ನಂತರ ಮಾರುಕಟ್ಟೆ ಪರಿಸ್ಥಿತಿ ಸುಧಾರಿಸಿದಾಗ ಅವನ್ನು ಮಾರಿಕೊಳ್ಳಬಹುದಂತೆ. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಇಂತಹ ಪ್ರಯತ್ನವನ್ನು ಖಡಾಖಂಡಿತವಾಗಿ ವಿರೋಧಿಸಿದೆ.

ಸಾರ್ವಜನಿಕ ವಲಯದ ಘಟಕಗಳ ಶೇರುಗಳನ್ನು ಮಾರುವಲ್ಲಿ ವಾಜಪೇಯಿ ಸರಕಾರದ ಏಕೈಕ ಉದ್ದೇಶವೆಂದರೆ ಹಣಕಾಸು ಕೊರತೆಯನ್ನು ತುಂಬಲು ಸಂಪನ್ಮೂಲಗಳನ್ನು ಎತ್ತುವುದು ಹಾಗೂ ಸಾರ್ವಜನಿಕ ವಲಯದ ಖಾಸಗೀಕರಣದ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದು ಎಂದು ಸಿಪಿಐ(ಎಂ) ಆಪಾದಿಸಿದೆ.

ಸಂವಿಧಾನದ ಪ್ರಕಾರ ಸಾರ್ವಜನಿಕ ವಲಯ ಪ್ರಭುತ್ವ ಮತ್ತು ಸಂಸತ್ತಿನ ಪರಿವೀಕ್ಷಣೆಯಡಿ ಬರುತ್ತದೆ. ಶೇರುಗಳನ್ನು ಟ್ರಸ್ಟಿನಂತಹ ಇನ್ನೊಂದು ಸಂಸ್ಥೆಗೆ ವರ್ಗಾಯಿಸಿ ಸಾರ್ವಜನಿಕ ಒಡೆತನವನ್ನು 50% ಕ್ಕಿಂತ ಕೆಳಗಿಳಿಸುವ ಮೂಲಕ ಸರಕಾರ ಸಾರ್ವಜನಿಕ ವಲಯದ ಘಟಕಗಳನ್ನು ಸಂಸತ್ತಿನ ಹಾಗೂ ಮಹಾ ಲೆಕ್ಕಪರೀಕ್ಷಣಾಧಿಕಾರಿಯ ವ್ಯಾಪ್ತಿಯಿಂದ ಹೊರಗೊಯ್ಯುತ್ತದೆ ಎಂದು ಪೊಲಿಟ್‌ಬ್ಯೂರೋ ಟೀಕಿಸಿದೆ. ಈ ಟ್ರಸ್ಟ್‌ನ್ನು ರಚಿಸಿ ಅದರಿಂದ ಹಣಕಾಸು ಸಂಸ್ಥೆಗಳು ಶೇರುಗಳನ್ನು ಖರೀದಿಸಿ ನಂತರ ಹೆಚ್ಚಿನ ದರದಲ್ಲಿ ಮಾರುವುದರಿಂದ ಸರಕಾರಕ್ಕೆ ಯಾವ ಪ್ರಯೋಜನವೂ ಸಿಗುವುದಿಲ್ಲ ಎಂದೂ ಅದು ಟೀಕಿಸಿದೆ.

ಈ ಹಿಂದೆ ಶೇರುಗಳನ್ನು ಅತ್ಯಂತ ಕಮ್ಮಿ ಬೆಲೆಗೆ ಮಾರಿ ಸರ್ಕಾರಿ ಖಜಾನೆಗೆ ಹೇಗೆ ಸಾವಿರಾರು ಕೋಟಿ ರೂಪಾಯಿಗಳ ವಂಚನೆಯಾಯಿತು ಎಂಬುದು ಈ ಹಿಂದಿನ ಶೇರು ಮಾರಾಟದ ಸುತ್ತುಗಳಲ್ಲಿ ಕಂಡು ಬಂದಿತ್ತು. ಇತ್ತೀಚೆಗೆ ಕಂಟೇನರ್ ಕಾರ್ಪೊರೇಷನ್ ಆಫ್ ಇಂಡಿಯಾ (ಕೋಂಕೋರ್) ನ 90 ಲಕ್ಷ ಶೇರುಗಳನ್ನು ಸರಾಸರಿ ಬೆಲೆಗಳಿಗಿಂತ 35% ಡಿಸ್ಕೌಂಟಿನಲ್ಲಿ ವಿದೇಶಿ ಹೂಡಿಕೆದಾರರಿಗೆ ಹಾಗೂ ಬ್ಯಾಂಕುಗಳಿಗೆ ಮಾರಲಾಗಿದೆ. (ಈ ಶೇರುಗಳನ್ನು 250 ರೂ. ದರದಲ್ಲಿ ಮಾರಲಾಗಿದೆ. 1997 ರಲ್ಲಿ ಮಾರುಕಟ್ಟೆ ಪರಿಸ್ಥಿತಿ ಉತ್ತಮವಿದ್ದಾಗ ಈ ಶೇರಿನ ಬೆಲೆ 585 ರೂ. ಇತ್ತು. ಈಗ ಇಳಿಮುಖವಾಗಿರುವ ಮಾರುಕಟ್ಟೆಯಲ್ಲಿ ಕೂಡಾ ಅದರ ಬೆಲೆ 400 ರೂ. ಇದೆ.) ಇದು ಸಾರ್ವಜನಿಕ ಆಸ್ತಿಗಳ ಲೂಟಿಯಲ್ಲದೆ ಮತ್ತೇನೂ ಅಲ್ಲ.

ವಾಜಪೇಯಿ ಸರಕಾರ ಸಾರ್ವಜನಿಕ ವಲಯದ ಶೇರುಗಳ ಮಾರಾಟವನ್ನು ನಿಲ್ಲಿಸಿ ಈ ಬಗ್ಗೆ ತನ್ನ ಯಾವುದೇ ಪ್ರಸ್ತಾಪವನ್ನು ಸಂಸತ್ತಿನ ಮುಂದಿಟ್ಟು ಅದರ ಅನುಮೋದನೆ ಪಡೆಯಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಗ್ರಹಪಡಿಸಿದೆ.

ಈ ಬಗ್ಗೆ ಸಿಪಿಐ(ಎಂ) ಕೇಂದ್ರ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಯ ಸಂಪಾದಕೀಯ ಟಿಪ್ಪಣಿ ಮಾಡುತ್ತಾ ಈ ಶೇರು ಮಾರಾಟದ ಸಂದರ್ಭದಲ್ಲಿ ಇನ್ನೊಂದು ಅಂಶದತ್ತವೂ ಗಮನ ಸೆಳೆದಿದೆ.

ಈ ಹಿಂದೆ ಪೆಟ್ರೋಲಿಯಂ ಉದ್ದಿಮೆಯ ಖಾಸಗೀಕರಣದಲ್ಲಿ ದೊಡ್ಡ ಪಾತ್ರ ವಹಿಸಿದ ಆಗ ಆ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿದ್ದು, ಈಗ ಹಣಕಾಸು ಕಾರ್ಯದರ್ಶಿಯಾಗಿರುವ ವಿಜಯ್ ಕೇಲ್ಕರ್ ಈಗಿನ ಶೇರು ಮಾರಾಟದ ಒಂದು ನೀಲನಕ್ಷೆ ತಯಾರಿಸಿದ್ದಾರಂತೆ. ಈ ವ್ಯವಹಾರದ ತೆರೆಯ ಮರೆಯಲ್ಲಿ ಏನೆಲ್ಲಾ ನಡೆಯಬಹುದು ಎಂಬುದರ ಒಂದು ಸಂಕೇತವೂ ಈಗಾಗಲೇ ಸಿಕ್ಕಿದೆ. ಸೆಪ್ಟೆಂಬರ್ 21, 1998 ರಂದು ಶೇರು ಮಾರಾಟ ಕುರಿತ ಕಾರ್ಯದರ್ಶಿಗಳ ಪ್ರಧಾನ ತಂಡದ(ಕೋರ್ ಗ್ರೂಪ್‌ನ) 37ನೇ ಸಭೆಯ ಕಲಾಪಗಳಿರುವ ದಸ್ತಾವೇಜು ಇತ್ತೀಚೆಗೆ ಒಬ್ಬ ಗುತ್ತೇದಾರಿ ಬಂಡವಾಳಿಗರ ಗುಂಪಾದ ರಿಲಯನ್ಸ್ ಕಂಪನಿಯ ಒಬ್ಬ ಪ್ರತಿನಿಧಿಯ ಬಳಿ ಸಿಕ್ಕಿತು. ರೊಮೇಶ್ ಶರ್ಮ ಹಗರಣದ ತನಿಖೆಯ ಸಂದರ್ಭದಲ್ಲಿ ಪೋಲೀಸರು ವಿ.ಸುಬ್ರಮಣ್ಯ ಎಂಬ ಈ ಪ್ರತಿನಿಧಿಯನ್ನು ಅಧಿಕೃತ ರಹಸ್ಯ ದಾಖಲೆಗಳ ಕಾನೂನಿನಡಿ ದಸ್ತಗಿರಿ ಮಾಡಿದ್ದಾರೆ. ಇಂತಹ ಗುಪ್ತ ಮಾಹಿತಿ ದೊಡ್ಡ ಬಂಡವಾಳಿಗರಿಗೆ ಸಿಗುವಂತಾದದ್ದು ಹೇಗೆ ಎಂದು ಸರಕಾರ ವಿವರಿಸಬೇಕಾಗಿದೆ ಎಂದು 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ ಪ್ರಶ್ನಿಸಿದೆ.

ಆದರೆ ಈ ರಹಸ್ಯ ದಾಖಲೆಗಳ ಕಾನೂನನ್ನೇ ರದ್ದು ಮಾಡಬೇಕೆನ್ನುವ ಗೃಹಮಂತ್ರಿ ಅಡ್ವಾಣಿಯವರು ಈ ಗುಪ್ತ ಮಾಹಿತಿ ಗುತ್ತೇದಾರಿ ಬಂಡವಾಳಿಗರ ಕೈಸೇರಿದ್ದು ಮಹತ್ವದ ವಿಷಯವೇನಲ್ಲ ಎಂದು ತಳ್ಳಿ ಹಾಕಲು ಪ್ರಯತ್ನಿಸಿದ್ದಾರೆ. ಸದಾ ಇಂತಹ ಗುತ್ತೇದಾರಿಗಳನ್ನು ನಾಚಿಕೆಯಿಲ್ಲದೆ ಬೆಂಬಲಿಸುತ್ತಾ ಬಂದಿರುವ ಬಿಜೆಪಿ ಈಗ ವಿದೇಶಿ ಬಂಡವಾಳದ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ವಿಧೇಯ ಸಾಧನವಾಗಿಬಿಟ್ಟಿರುವುದು ಆಶ್ಚರ್ಯದ ಸಂಗತಿಯೇನಲ್ಲ ಎಂದು ಸಿಪಿಐ(ಎಂ) ಹೇಳಿದೆ.

ಪೇಟೆಂಟ್ ಕಾನೂನಿಗೆ ತಿದ್ದುಪಡಿ ಬೇಡ

ಭಾರತೀಯ ಪೇಟೆಂಟ್ಸ್ ಕಾನೂನು 1970 - ಇದಕ್ಕೆ ತಿದ್ದುಪಡಿ ತರುವ ಕ್ರಮ ಕೈಗೊಳ್ಳಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ, ಕೇಂದ್ರ ಸರಕಾರವನ್ನು ಆಗ್ರಹಪಡಿಸಿದೆ. ತಮ್ಮ ಉತ್ಪನ್ನಗಳನ್ನು ಪೇಟೆಂಟ್ ಮಾಡಲು ಪ್ರಯತ್ನಿಸುವ ವಿದೇಶಿ ಕಂಪನಿಗಳು ಮಾತ್ರವೇ ತಮ್ಮ ಉತ್ಪಾದನೆಗಳನ್ನು ಮಾರುವ ವಿಶೇಷ ಹಕ್ಕುಗಳನ್ನು ನೀಡುವ ಪ್ರಶ್ನೆಯ ಬಗ್ಗೆ ಹಾಗೂ ಉತ್ಪಾದನೆಗಳನ್ನು ಪೇಟೆಂಟ್ ಮಾಡುವ ಪ್ರಶ್ನೆಯ ಬಗ್ಗೆ ಚರ್ಚಿಸಲು ಎಲ್ಲಾ ರಾಷ್ಟ್ರೀಯ ರಾಜಕೀಯ ಪಕ್ಷಗಳ ಒಂದು ಸಭೆಯನ್ನು ತಕ್ಷಣವೇ ಕರೆಯಬೇಕು ಎಂದು ಅದು ಒತ್ತಾಯಿಸಿದೆ.

ಈ ಹಿಂದೆ ಇಂತಹ ಒಂದು ಮಹತ್ವದ ಪ್ರಶ್ನೆಯ ಬಗ್ಗೆ ಎಲ್ಲಾ ಪ್ರಧಾನ ರಾಜಕೀಯ ಪಕ್ಷಗಳ ಒಮ್ಮತವನ್ನು ಪಡೆಯಲು ನಿರಾಕರಿಸಿದ್ದರಿಂದ ಇಂತಹ ಶಾಸನ ವಿಫಲಗೊಂಡಿತು ಎಂಬುದು ಬಿಜೆಪಿ ನೇತೃತ್ವದ ಸರಕಾರಕ್ಕೆ ತಿಳಿದಿರಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ನೆನಪಿಸಿದೆ.

ಭಾರತದ ಶ್ರಮಜೀವಿಗಳಿಂದ...

ಪುಟ 7 ರಿಂದ

ವಿಮಾ ರಂಗದ ನೌಕರರ ಹಿಂದೆ ಒಗ್ಗಟ್ಟಿನಿಂದ ನಿಂತಿತು.

ಭಾರತೀಯ ಪೇಟೆಂಟ್ ಕಾಯಿದೆಯನ್ನು ಬದಲಾಯಿಸುವ ವಿಷಯವೂ ಹೀಗೆಯೇ ನೆನೆಗುದಿಗೆ ಬಿದ್ದಿತು. ಅತ್ತ ಸಾಮ್ರಾಜ್ಯ ಶಾಹಿಗಳ ಒತ್ತಡ ಹಾಗೂ ಇತ್ತ ದುಡಿವ ಜನಗಳ ತೀವ್ರ ಪ್ರತಿರೋಧ ಇದರಿಂದಾಗಿ ಸರ್ಕಾರ ಹಲವು ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸಾಧ್ಯವಾಗಲಿಲ್ಲ.

ಧಾಳಿಗಳು ನಡೆಯುತ್ತಲೇ ಇವೆ

ಸಾಮ್ರಾಜ್ಯಶಾಹಿಯ ಒತ್ತಡ ತಡೆಯಲಾರದ ಸರ್ಕಾರ ಆಮದು ಉದಾರೀಕರಣವನ್ನು ತೀವ್ರವಾಗಿ ಮಾಡತೊಡಗಿತು. ಬೇರೇನೂ ಮಾಡಲು ಸಾಧ್ಯವಾಗದಿದ್ದಾಗ ಹಲವು ಸರಕುಗಳನ್ನು ಓಜಿಎಲ್(ಓಪನ್ ಜನರಲ್ ಲೈಸೆನ್ಸಿಂಗ್) ಗೆ ತರಲಾಯಿತು.

ಉಕ್ಕು ಮುಂತಾದ ಸರಕುಗಳ ಅಪರಿಮಿತ ಆಮದಿನಿಂದಾಗಿ ದೇಶದೊಳಗೆ ಉಕ್ಕಿನ ದರ ಕುಸಿದು ದೇಶಿ ಉಕ್ಕು ಉದ್ದಿಮೆ ತೀವ್ರ ಹೊಡೆತ ಅನುಭವಿಸಿತು.

ಸಾಮ್ರಾಜ್ಯಶಾಹಿಗಳ ಕುತಂತ್ರಗಳಿಂದಾಗಿ ರೂಪಾಯಿಯ ಬೆಲೆ ಕುಸಿದು ಬಿದ್ದು ದೇಶದೊಳಗೆ ವಸ್ತುಗಳ ಬೆಲೆ ಗಗನಕ್ಕೇರಿತು, ಜಗತ್ತಿನಾದ್ಯಂತ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಕುಸಿದರೂ ಭಾರತದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರುತ್ತಲೇ ಇದೆ. ಈ ರೀತಿ ಪರೋಕ್ಷವಾಗಿ ದುಡಿವ ಜನರ ಜೀವನದ ಮೇಲೆ ಹೊಡೆತ ನೀಡಲಾಗುತ್ತಿದೆ. ಆದರೆ ನೇರವಾಗಿ ದುಡಿವ ಜನರ ಜೀವನದೊಂದಿಗೆ ಆಟವಾಡುವ ಸಾಧ್ಯತೆ ಕುಂಠಿತವಾಗೇ ಇದೆ.

ಬೆಲೆ ಏರಿಕೆ ಕೃಷಿ ಉತ್ಪನ್ನವನ್ನೂ ಬಿಟ್ಟಿಲ್ಲ. ಪೆಟ್ರೋಲಿಯಂ ಉತ್ಪನ್ನಗಳಿಂದ ತಯಾರಾಗುವ ರಸಗೊಬ್ಬರಗಳ ಬೆಲೆ, ಬೀಜಗಳ ಬೆಲೆ ಇವೆಲ್ಲ ಏರುತ್ತಲೇ ಇವೆ. ರಸಗೊಬ್ಬರಗಳಿಗೆ ಸಹಾಯಧನ ನೀಡಲು ಸರ್ಕಾರ ಹೆಚ್ಚಿನ ಹಣ ತೆಗೆದಿರಿಸಬೇಕಾಗುತ್ತದೆ. ಇದು ಹಣಕಾಸು ಕೊರತೆಯನ್ನು ಏರಿಸುತ್ತದೆ. ಹೀಗೆ ಇದು ಒಂದು ಸರಪಣಿ. ಈ ಸರಪಣಿ ಸರ್ಕಾರವನ್ನೇ ಬಂಧಿಸುತ್ತಿದೆ.

ಆಗ್ನೇಯ ಏಶಿಯಾದ ಬಿಕ್ಕಟ್ಟಿನ ಪರಿಣಾಮಗಳು ಭಾರತಕ್ಕೆ ತಟ್ಟೇ ಇಲ್ಲವೆಂದು ಹೇಳಲಾಗದು. ಅಲ್ಲಿನ ಬಿಕ್ಕಟ್ಟಿನಿಂದಾಗಿ ಹಲವು ಸರಕುಗಳ ಅತ್ಯಂತ ಕಡಿಮೆ ಬೆಲೆಗೆ ಆಮದಾಗಿ ನಮ್ಮ ದೇಶೀ ಉದ್ದಿಮೆಗಳನ್ನು ಹಾಳುಗೆಡಹುತ್ತಿವೆ ಎಂಬುದು ನಿಜ.

ರೂಪಾಯಿಯ ಪೂರ್ಣ ಪರಿವರ್ತನೀಯತೆ ಆಗಲೇ ಬಂದಿದ್ದರೆ ಸಾಮ್ರಾಜ್ಯ ಶಾಹಿಗಳು ರೂಪಾಯಿಗೇ ಹೊಡೆತ ನೀಡಿ ಸಟ್ಟಾ ವ್ಯವಹಾರಗಳ ಮೂಲಕ ಇಡೀ ಅಧಿಕಾರವನ್ನು ಬುಡಮೇಲು ಮಾಡುವುದು ಸಾಧ್ಯವಾಗುತ್ತಿತ್ತು. ಆದರೆ ಇಂದು ರೂಪಾಯಿಯ ಪೂರ್ಣ ಪರಿವರ್ತನೀಯತೆ ಬಾರದೇ ಇರುವುದರಿಂದ ಸಟ್ಟಾ ವ್ಯವಹಾರ ಬೆಳೆಯುವುದು ಸಾಧ್ಯವಾಗಿಲ್ಲ. ದುಡಿವ ವರ್ಗ ತೀವ್ರವಾದ ಪ್ರತಿಭಟನೆ ತೋರಿ ತನ್ನ ಮೇಲೆ ಆಗಬಹುದಾದ ಪ್ರಹಾರವನ್ನು ತಪ್ಪಿಕೊಂಡಿದೆ. ಅಲ್ಲದೆ ದೇಶದ ಆರ್ಥಿಕವನ್ನು ಒಮ್ಮೆಲೇ ಉದಾರೀಕರಣಕ್ಕೊಳಪಡಿಸಿ ಆರ್ಥಿಕ ತೀವ್ರ ಸಂಕಷ್ಟಕ್ಕೊಳಗಾಗುವ ಪರಿಸ್ಥಿತಿಯನ್ನು ಅದು ತಡೆದಿದೆ.

ದುಡಿವ ಜನರ ಹೋರಾಟ ಒಡ್ಡಿರುವ ಈ ಒಡ್ಡು ಇನ್ನೂ ಪ್ರಬಲವಾಗಿ ಉದಾರೀಕರಣದ ಮಹಾಪೂರವನ್ನು ಬತ್ತಿಸಬೇಕಾದ ಅವಶ್ಯಕತೆ ಇಂದು ಹಿಂದೆಂದಿಗಿಂತ ಹೆಚ್ಚಾಗಿ ಇದೆ.

ಇ.ಎಂ.ಎಸ್. ಭವನಕ್ಕೆ ಅಡಿಗಲ್ಲು

ಪ್ರಖ್ಯಾತ ಸ್ವಾತಂತ್ರ್ಯ ಹೋರಾಟಗಾರ, ಕಾರ್ಮಿಕ ವರ್ಗದ ಮುಂದಾಳು ಹಾಗೂ ಕರ್ನಾಟಕದಲ್ಲಿ ದುಡಿಯುವ ಜನರ ಆಂದೋಲನ ಬೆಳೆದು ಬರಲು ಮಾರ್ಗದರ್ಶನ ನೀಡಿದ ಎ.ಕೆ.ಗೋಪಾಲನ್ ರವರ ನೆನಪಿನಲ್ಲಿ ಸ್ಥಾಪಿಸಿರುವ ಎ.ಕೆ.ಗೋಪಾಲನ್ ಸ್ಮಾರಕ ಸಾಮಾಜಿಕ ಶಿಕ್ಷಣ ಗತ್ತಿ ಸಾಮಾಜಿಕ, ಶೈಕ್ಷಣಿಕ ಉದ್ದೇಶಗಳಿಗಾಗಿ ಇನ್ನೊಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಖ್ಯಾತ ಚಿಂತಕ ಹಾಗೂ ರಾಜಕೀಯ ಮುತ್ಸದ್ದಿ ಇ.ಎಂ.ಎಸ್. ನಂಬೂದರಿಪಾಡ್‌ರವರ ಸ್ಮರಣೆಯಲ್ಲಿ ಭವನವೊಂದನ್ನು ನಿರ್ಮಿಸಲು ಯೋಜಿಸಿದೆ. ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆಯಲ್ಲಿರುವ ದತ್ತಿಯ ನಿವೇಶನದಲ್ಲಿ ಇ.ಎಂ.ಎಸ್. ಭವನದ ಅಡಿಗಲ್ಲನ್ನು ನವೆಂಬರ್ ೨೯ ರಂದು ಬೆಳಿಗ್ಗೆ ಕೇರಳದ ಮುಖ್ಯಮಂತ್ರಿ ಇ.ಕೆ.ನಾಯನಾರ್ ಹಾಕಿದ್ದಾರೆ. ದತ್ತಿಯ ವ್ಯವಸ್ಥಾಪಕ ಟ್ರಸ್ಟಿ ಎಸ್.ಸೂರ್ಯನಾರಾಯಣ ರಾವ್ ಅಡಿಗಲ್ಲು ಸಮಾರಂಭದ ಅಧ್ಯಕ್ಷತೆ ವಹಿಸಿದರು.



(ವಿವರವಾದ ವರದಿ ಮುಂದಿನವಾರ)

ಜಾಗತೀಕರಣಕ್ಕೆ ಜಾಗತಿಕ ಸವಾಲು

ಪುಟ 7 ರಿಂದ

ಕೆಲಸದಿಂದ ತೆಗೆದುಹಾಕುವುದನ್ನು ಸುಲಭಗೊಳಿಸುವ ಮಸೂದೆಯನ್ನು ಕಳ್ಳತನದಿಂದ ಪಾರ್ಲಿಮೆಂಟಿನಲ್ಲಿ ಮಂಜೂರು ಮಾಡಿಸಲು ಪ್ರಯತ್ನಿಸಿದ ಸರ್ಕಾರದ ಪ್ರಯತ್ನವನ್ನು ವಿಫಲಗೊಳಿಸಿತು. ಈ ಬಿಕ್ಕಟ್ಟಿಗೆ ಕಾರಣ 'ಚಚೀಲಾ' ಎಂದು ಕರೆಯಲಾಗುವ ಕೆಲವೇ ಕೆಲವು ಗುತ್ತೇದಾರಿ ಬಂಡವಾಳಶಾಹಿ ಕಂಪನಿಗಳ ಕಪಿಮುಷ್ಠಿಯಲ್ಲಿ ಆರ್ಥಿಕವಿರುವುದು. ಈಗ ಐಎಂಎಫ್ ನ ಪರಿಹಾರ ಬಿಕ್ಕಟ್ಟಿನ ಮೂಲವನ್ನು ಕೆದರುವ ಬದಲು ಬಿಕ್ಕಟ್ಟನ್ನು ಕಾರ್ಮಿಕ-ವಿರೋಧಿ ರೀತಿಯಲ್ಲಿ ಪರಿಹರಿಸುತ್ತದೆ - ಎಂಬ ಪ್ರಜ್ಞೆ ಕಾರ್ಮಿಕ ವರ್ಗದಲ್ಲಿ ವ್ಯಾಪಕವಾಗಿರುವುದು ದಕ್ಷಿಣ ಕೊರಿಯದ ಹೋರಾಟದ ಮುಖ್ಯ ವಿಶಿಷ್ಟತೆ.

★★

ರಶ್ಯನ್ ಕಾರ್ಮಿಕರ ಮುಷ್ಕರ-ಪ್ರತಿಭಟನೆ: ರಶ್ಯನ್ ಕಾರ್ಮಿಕರ ಪ್ರತಿಭಟನೆ ಮುಷ್ಕರಗಳು ಸಮಾಜವಾದದ ಗೋರಿಯ ಮೇಲೆ ನಿಂತ 'ಮಧ್ಯಯುಗೀನ' ಬಂಡವಾಳ ಶಾಹಿ ವ್ಯವಸ್ಥೆಗೆ ಸವಾಲು, ಪ್ರತಿರೋಧ ಒಡ್ಡುವುದರಲ್ಲಿ ಪ್ರಮುಖ ಪಾತ್ರವಹಿಸಿವೆ. ಕಾರ್ಮಿಕರ ಚಳುವಳಿ ಸ್ಪಷ್ಟ ರಾಜಕೀಯ ಬಲವಾಗಿರುವುದು ರಶ್ಯದ ವಿಶೇಷತೆ. ಹತ್ತು ಲಕ್ಷಕ್ಕೂ ಹೆಚ್ಚು ಗಣಿ ಕಾರ್ಮಿಕರ ಮುಷ್ಕರ, ಹಲವು ಸಾರ್ವಜನಿಕ ವಲಯದ ಕಾರ್ಮಿಕರ ಮುಷ್ಕರ ಸಂಬಳ ಬಾಕಿ ಪಾವತಿಗೆ, ಹಲವಾರು ರಾಜಕೀಯ ಮುಷ್ಕರಗಳು - ರಶ್ಯದ ಕಾರ್ಮಿಕರ ಹೋರಾಟದ ಮೈಲಿಗಲ್ಲುಗಳು. 'ಅಧ್ಯಕ್ಷ ಯೆಲ್ಸಿನ್ ರಾಜಿನಾಮೆ ಕೊಡು' - ಇದು ಕಾರ್ಮಿಕರ ಮುಷ್ಕರಗಳ ಪ್ರಮುಖ ಬೇಡಿಕೆಯಾಗಿ ಹೊರಹೊಮ್ಮಿದೆ. ರಶ್ಯವನ್ನು ಕೈಗಾರಿಕೆ-ವಿಹೀನಗೊಳಿಸುವ, ಐಎಂಎಫ್ ನೀತಿಗಳ ಬಗ್ಗೆ ರಶ್ಯನ್ ಕಾರ್ಮಿಕರ ಪ್ರಜ್ಞೆ ಸ್ಪಷ್ಟವಾಗಿದೆ.

★★

ಇಂಡೋನೇಶ್ಯಾದಲ್ಲಿ ಸುಹಾರ್ತೋನನ್ನು ಅಧಿಕಾರದಿಂದ ಇಳಿಸಿದ ವಿದ್ಯಾರ್ಥಿ ಕಾರ್ಮಿಕರು: ಪ್ರತಿರೋಧ ದೊಡ್ಡ ಮೈಲಿಗಲ್ಲು. ಕಳೆದ ವರ್ಷದವರೆಗೆ (ಜಾಗತಿಕ ಸಾಮ್ರಾಜ್ಯಶಾಹಿ ಮಾಧ್ಯಮಗಳ ಪ್ರಕಾರ) 'ಶಾಂತಿ' 'ಸಮೃದ್ಧಿ'ಗಳ ಬೀಡಾಗಿದ್ದ ಇಂಡೋನೇಶ್ಯಾದಲ್ಲಿ ಕೆಲವೇ ವಾರಗಳ ವಿದ್ಯಾರ್ಥಿ-ಕಾರ್ಮಿಕರ ಚಳುವಳಿಯು 30 ವರ್ಷಗಳಿಂದ ಆಳುತ್ತಿದ್ದ ಮಿಲಿಟರಿ-ಫ್ಯಾಸಿಸ್ಟ್ ಸರ್ವಾಧಿಕಾರಿ ಜನರಲ್ ಸುಹಾರ್ತೋರನ್ನು ಅಧಿಕಾರದಿಂದ ಕೆಳಗಿಳಿಸಿದ್ದು, 'ಜಾಗತೀಕರಣ' ದ ಶಕ್ತಿಗಳಿಗೆ ದೊಡ್ಡ ಸೋಲು.

ದಕ್ಷಿಣ ಪೂರ್ವ ಏಶ್ಯಾಗಳಲ್ಲಿ ಹಣಕಾಸು- ಆರ್ಥಿಕ ಬಿಕ್ಕಟ್ಟು ತೀವ್ರವಾಗಲು ಅತ್ಯಂತ ದುಷ್ಪರಿಣಾಮಕ್ಕೊಳಗಾದ ಇಂಡೋನೇಶ್ಯಾ ಮೂರು ದಶಕಗಳ ಹಿಂದೆ ಸಿಐಎ ಬೆಂಬಲಿತ ಕ್ಷಿಪ್ರಕ್ರಾಂತಿಯಲ್ಲಿ 10 ಲಕ್ಷ ಕಮ್ಯುನಿಸ್ಟರು ಹಾಗೂ ದುಡಿಯುವ ಜನರ ಪ್ರತಿನಿಧಿಗಳ ನರಮೇಧದಿಂದ ಆರಂಭವಾಗಿ, ಜನರ ಸಂಘಟನೆ, ಹೋರಾಟಗಳನ್ನು ಅತ್ಯಂತ ಕ್ರೂರವಾಗಿ ದಮನ ಮಾಡಿ ಹೆಚ್ಚು ಕಡಿಮೆ ಇಲ್ಲವಾಗಿಸಿತ್ತು ಸುಹಾರ್ತೋ ಆಡಳಿತ. ಆದರೂ ಬಿಕ್ಕಟ್ಟಿನ ಕೆಲವೇ ದಿನಗಳಲ್ಲಿ ವಿದ್ಯಾರ್ಥಿ-ಕಾರ್ಮಿಕರು ಬೀದಿಗಳಿದರು - ಸಂಘಟನೆ, ನಾಯಕರು ಇಲ್ಲದೆ. ಇಂಡೋನೇಶ್ಯಾದ 'ರೂಪಯ್ಯಾ' ಅದರ ಕಾಲುಭಾಗಕ್ಕೆ ಅಪಮೌಲ್ಯವಾದಾಗ, ಎಲ್ಲಾ ಅವಶ್ಯಕ ವಸ್ತುಗಳ ಬೆಲೆ ಗಗನಕ್ಕೇರಿತು. ಸ್ವಯಂಸ್ಫೂರ್ತ ಆಹಾರ ದಂಗೆಗಳಿಂದ ಪ್ರತಿಭಟನೆ ಆರಂಭವಾಗಿ ವಿದ್ಯಾರ್ಥಿ-ಕಾರ್ಮಿಕರ ಮುಷ್ಕರಗಳು, ಬೀದಿ ಪ್ರತಿಭಟನೆ ಸ್ವರೂಪ ಪಡೆಯಿತು. ಸಾಮ್ರಾಜ್ಯಶಾಹಿ ಮಾಧ್ಯಮ ಇಂಡೋನೇಶ್ಯಾದ ಚಳುವಳಿ ಬರಿ ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಚಳುವಳಿ ಎನ್ನುವಂತೆ ಬಿಂಬಿಸಲು ಪ್ರಯತ್ನಿಸುತ್ತಿದೆ. ಆದರೆ ಇಂಡೋನೇಶ್ಯಾದ ಕಾರ್ಮಿಕರು, ಬಡಜನರು ವ್ಯಾಪಕವಾಗಿ ಈ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದಾರೆ. ಜನವರಿ-ಫೆಬ್ರವರಿಯಷ್ಟು ಬೇಗ ಸೊರಾಬಾಯ ಎಂಬ ದೊಡ್ಡ ನಗರದಲ್ಲಿ 10 ಸಾವಿರ ಕಾರ್ಮಿಕರ ರ್‍ಯಾಲಿ ನಡೆದಿತ್ತು. ಸುಹಾರ್ತೋರನ್ನು ಪದಚ್ಯುತಗೊಳಿಸಿದ ಚಳುವಳಿ ಹಾಗೂ ಈಗ ಅಧ್ಯಕ್ಷ ಹಬೀಬಿ - ಮಿಲಿಟರಿ ಮುಖ್ಯಸ್ಥರ ರಾಜೀನಾಮೆ ಬೇಡಿಕೆಗೂ ಮುಷ್ಕರ ನಡೆಯಿತು. ಚಳುವಳಿಯಲ್ಲಿ ಕಾರ್ಮಿಕರು, ಬಡಜನರು ಮುಖ್ಯ ಪಾತ್ರ ವಹಿಸಿದ್ದಾರೆ. ಚೀನಿ ಅಂಗಡಿಗಳ ಲೂಟಿ, ಮಹಿಳೆಯರ ಮಾನಭಂಗದ ವರದಿಗಳಿಂದ ಈ ಚಳುವಳಿಗೆ ಕೆಟ್ಟ ಹೆಸರು ತರುವ ಸರ್ಕಾರದ, ಸಾಮ್ರಾಜ್ಯಶಾಹಿ ಮಾಧ್ಯಮಗಳ ಪ್ರಯತ್ನ ಅವರಿಗೇ ತಿರುಗುಬಾಣವಾಗಿದೆ. ಮಿಲಿಟರಿಯ ಒಂದು ವಿಭಾಗ ಈ ಅತ್ಯಾಚಾರಗಳನ್ನು ನಡೆಸಿತ್ತು ಎಂಬುದು ಈಗ ಬಹಿರಂಗವಾದ ಗುಟ್ಟು.

30 ವರ್ಷಗಳ ಹಿಂದೆ ಸಮಾಜವಾದಿ ಜಗತ್ತಿನ ಹೊರಗೆ ಅತಿದೊಡ್ಡ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಿದ್ದ, ಇಂಡೋನೇಶ್ಯಾದ ದುಡಿಯುವ ಜನ 'ಜಾಗತೀಕರಣ'ವನ್ನು ಹೂತು ಹಾಕುವುದರಲ್ಲಿ ಹರಿಕಾರರಾದದ್ದು ಆಶ್ಚರ್ಯವೇನಲ್ಲ. ಎಷ್ಟೇ ದಮನ ಮಾಡಿದರೂ ದುಡಿಯುವ ಜನರ ಚಳುವಳಿ, ಪ್ರತಿರೋಧ, ಪುನಃ ಪುಟಿದೇಳುತ್ತದೆ ಎಂಬುದಕ್ಕೆ ಇಂಡೋನೇಶ್ಯಾ ಸಾಕ್ಷಿ.

★★

ಅಮೆರಿಕದ ಎದೆ ಬಡಿತ ನಿಲ್ಲಿಸಿದ ಜನರಲ್ ಮೋಟಾರ್ಸ್ ಮುಷ್ಕರ

ಜಗತ್ತಿನ ಅತ್ಯಂತ ದೊಡ್ಡ ಕಂಪನಿಯಾದ ಜನರಲ್ ಮೋಟಾರ್ಸ್‌ನ ಕಾರ್ಮಿಕರಿಗೂ 'ಜಾಗತೀಕರಣ' ಯಾವುದೇ ಪ್ರಯೋಜನ ಕೊಡುವುದಿಲ್ಲ ಬದಲಾಗಿ 'ಜಾಗತೀಕರಣ' ಅವರ ಬದುಕಿನ ಹಕ್ಕನ್ನು ಕಸಿದುಕೊಳ್ಳುತ್ತದೆ ಎಂದು ತೋರಿಸಿದೆ ಅವರ ಮುಷ್ಕರ. ಈ ಜೂನ್‌ನಲ್ಲಿ ಆರಂಭವಾಗಿ ಆ ಕಂಪನಿಯ ಶೇಕಡಾ 88 ಉತ್ಪಾದನೆ ಸ್ಥಗಿತಗೊಳಿಸಿತು ಈ ಮುಷ್ಕರ. ಜನರಲ್ ಮೋಟಾರ್ಸ್ ಅಮೆರಿಕದ ಕಾರ್ಖಾನೆಗಳನ್ನು ಮುಚ್ಚಿ, ಮೆಕ್ಸಿಕೋ, ಕೆನಡಾ, ಸಿಂಗಾಪೂರ್‌ಗಳಿಗೆ ಅವರನ್ನು ಸ್ಥಳಾಂತರಿಸುವ ಮತ್ತು ಕಾಂಟ್ರಾಕ್ಟ್ ಕಾರ್ಮಿಕರನ್ನು ಬಳಸುವ ನೀತಿಯ ವಿರುದ್ಧ ಈ ಮುಷ್ಕರ. ಕಳೆದ ಎರಡು ದಶಕಗಳಲ್ಲಿ ಐದೂವರೆ ಲಕ್ಷ, ಕಾರ್ಮಿಕರ 'ಬದುಕಿನ ಹಕ್ಕು' ಕಸಿದು ಮನೆಗೆ ಕಳಿಸಿದ ವಿರುದ್ಧ ಈ ಮುಷ್ಕರ. ಜಗತ್ತಿನ ಕಾರು ಮಾರುಕಟ್ಟೆಯಲ್ಲಿ ಜನರಲ್ ಮೋಟಾರ್ಸ್‌ನ ಬಲ ಅರ್ಧದಿಂದ ಮೂರನೇ ಒಂದು ಭಾಗಕ್ಕೆ ಇಳಿದರೂ, ಲಾಭ ಮಾತ್ರ ಹೆಚ್ಚಿರುವುದು 'ಜಾಗತೀಕರಣದ' ಒಗಟು.

1995 ರಿಂದ ಅಮೆರಿಕದ ಪ್ರಮುಖ ಟ್ರೇಡ್ ಯೂನಿಯನ್ ಕೇಂದ್ರ AFL-CIO ನ ನಾಯಕತ್ವದಲ್ಲಿ ಬದಲಾವಣೆಯಾದಂದಿನಿಂದ ಅಮೆರಿಕದಲ್ಲಿ ಕಾರ್ಮಿಕ ಚಳುವಳಿಗೆ ಹೊಸ ಜೀವ ಬಂದಂತಾಗಿದೆ. UPS, ಡೆಟ್ರಾಯಿಟ್‌ನ ನ್ಯೂಸ್ ಪೇಪರ್, ನ್ಯೂಯಾರ್ಕ್‌ನ 20 ಸಾವಿರ ಟ್ಯಾಕ್ಸಿ ಚಾಲಕರ ಮುಷ್ಕರಗಳು ಅಮೆರಿಕದ ಕಾರ್ಮಿಕ ಚಳುವಳಿಯನ್ನು ಮೇಲಿನ ಹಂತಕ್ಕೆ ಒಯ್ದಿವೆ. ಅಧ್ಯಕ್ಷ ಕ್ಲಿಂಟನ್‌ರ ಮರುಚುನಾವಣೆ, ಇತ್ತೀಚಿನ ಪಾರ್ಲಿಮೆಂಟ್ ಚುನಾವಣೆಯ ಮೂಲಕ - ಬಲಪಂಥೀಯ ಫ್ಯಾಸಿಸ್ಟ್ ಗ್ಯಾಂಗನ್ನು ಬಗ್ಗುಬಡಿಯುವಲ್ಲಿ AFL-CIO ದ ನೇರ ಪಾತ್ರ ಗಮನಾರ್ಹ.

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor: G.N. NAGARAJ